ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 30
ಜುಲೈ 27, 2003 ಬೆಲೆ ರೂ. 3.00




ಎನ್.ಡಿ.ಎ ಸರ್ಕಾರ ಜನಸಂಪತ್ತಿನ ಲೂಟಿ ಕೋರ



ವಿನಾಶಕಾರಿ ವಿದ್ಯುತ್ ಮಸೂದೆ




ಅನಂತಕುಮಾರ್ ಡೋಂಗಿತನ



ಬೀಷ್ಮಸಹಾನಿ ಇನ್ನಿಲ್ಲ

ಭಾರತದಲ್ಲಿ ಅತ್ಯಂತ ಹೆಚ್ಚು ಹಸಿದವರು

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

36

ಕಳೆದ ಸಂಚಿಕೆಯಲ್ಲಿ, ಎಂದೂ ಭಾದಿಸದಿದ್ದ ಶಸಸ್ತ್ರ ಪಡೆಗಳನ್ನೂ ಕೂಡ ಕೋಮುವಾದಿ ವಿದ್ವೇಷ ಹೊಕ್ಕಿತು. ಲೀಗ್‌ನವರು ಮಧ್ಯಂತರ ಸರಕಾರ ಸೇರಿದರು. ಸಮಾಜವಾದಿಗಳಿಗೆ ಹಿಡೀ ಶಾಪ ಹಾಕಿದ ಜಯಪಾಲ್ ಸಿಂಗ್. ಮತ್ತೆ ಶರಣಾಗಲು ಸಿದ್ಧರಾದ ಮೇಜರ್, ಈ ಬಗ್ಗೆ ಓದಿರುವಿರಿ ಮುಂದೆ ......



ಕನ್ನಡಕ್ಕೆ: ವಿಶ್ವ ಕುಂದಾಪುರ

ತೆಲಂಗಾಣದತ್ತ ನಡೆ......

ಬಂಗಾಳದಲ್ಲಿ ಡಿಸೆಂಬರ್ ತಿಂಗಳ ಮಂಜುಕವಿದ ಒಂದು ಸಂಜೆ ದೂತನೊಬ್ಬ ಯಾವುದೇ ಪೂರ್ವಸೂಚನೆ ಕೊಡದೆ ನಮ್ಮ ತಾಣಕ್ಕೆ ಬಂದಿಳಿದ ಈ ರೀತಿ ಮಾಡುವುದು ಭೂಗತ ಜೀವನದಲ್ಲಿನ ಸಂಪರ್ಕ ವ್ಯವಸ್ಥೆಯು ಎಲ್ಲ ನಿಯಮಗಳಿಗೆ ವಿರುದ್ಧವಾದುದು.

ಕ್ರೂರವಾದ ಪಕ್ಷದ ಆಂತರಿಕ ಸಂಘರ್ಷದಿಂದಾಗಿ ಇಡೀ ಕೇಂದ್ರವ್ಯವಸ್ಥೆ ಅರ್ಥಹೀನ 'ಚಟುವಟಿಕೆ'ಯಾಯಿತು. ಕೇಂದ್ರ ನೆಲೆಗಳಲ್ಲಿ ತಾರಕಕ್ಕೇರಿದ ವುುಗಿಯುದ. ಚರ್ಚೆಗಳಿಂದಾಗಿ ನಮ್ಮ ಭೂಗತ ನೆಲೆಗಳೇ ಅಪಾಯಕ್ಕೆ ಸಿಲುಕುವಂಥ ಪರಿಸ್ಥಿತಿ ನಿರ್ಮಾಣವಾಯಿತು. ನಮ್ಮ ಅಕ್ಕ ಪಕ್ಕದ ಮನೆಗಳಲ್ಲಿ ಪಕ್ಷದವರಲ್ಲದ ಜನರು ವಾಸಿಸುತತಿದ್ದರು. ಅವರ ನಡುವೆ ಮಿತಭಾಷಿಗಳಾದ, ನಾವು ನಮ್ಮನ್ನು ನಾವೇ ಭಯಾಭೀತ ಜನರನ್ನಾಗಿ ಪರಿವರ್ತಿಸಿಕೊಂಡವು. ಚರ್ಚೆ ಮಾಡುವಾಗ ಮುಷ್ಟಿಗಳನ್ನು ಎತ್ತಿದೆವು. ಮೇಜುಗಳ ಮೇಲೆ ಬಲವಾಗಿ ಗುದ್ದಿದೆವು.

ಆ ದಿನಗಳಲ್ಲಿ, ವಿನೀತ ಹಾಗೂ ಅನುಭವಿ ಸಂಗಾತಿಗಳು ಕೂಡ ಮುದಿ ಹೆಂಗಸರಂತೆ ಕಚ್ಚಾಡಿದರು. ಕಾಲದ ಪರೀಕ್ಷೆಯಲ್ಲಿ ಗೆದ್ದಂಥ ಸಂಗಾತಿಗಳು ನಮ್ಮ ಜತೆ ಭಿನ್ನಾಭಿಪ್ರಾಯ ತಳೆದ ಎಲ್ಲರ ಜತೆಯಲ್ಲೂ ಜಗಳವಾಡಿದರು. ಇತರರು ಪಟ್ಟುಬಿಡದೆ ಹಾಗೂ ಅಂಧಶ್ರದ್ದೆಯಿಂದ 'ಸುಧಾರಣಾವಾದಿ' ಹಾಗೂ 'ಎಡಪಂಥವಾದಕ್ಕೆ' ಅಂಟಿಕೊಂಡಾಗ ಹುಚ್ಚರಂತೆ ವರ್ತಿಸಿದರು. ರಂಗದಿಂದ ಸುದೀರ್ಘ 'ಪಯಣ' ಮಾಡಿ ನಾನು 'ಕೇಂದ್ರ ನೆಲೆ ' ಗೆ ಮರಳಿದ ಮೇಲೆ ಕಳೆದ ಆ ಮೂರು ತಿಂಗಳು ಘೋರವಾಗಿದ್ದವು. ಒಂದು ಕಾಲದಲ್ಲಿ ನಾನು ಕಳೆಯಬೇಕಾದ ಸೇನೆಯ ನರಕಕೊಠಡಿ (hell chamber) ಯದ್ದಕ್ಕಿಂತಲೂ ಘೋರವಾಗಿದ್ದವು ಆ ದಿನಗಳು. ಅಲ್ಲಿ ವೈರಿಯುನ್ನು ಆತನ ಗುಹೆಯಲ್ಲೇ ಯುಶಸ್ವಿಯಾಗಿ ಎದುರಿಸಿದ ಹೆಮ್ಮೆ - ಗೌರವದ ಭಾನವೆ ಮೂಡಿಸುತ್ತದೆ. ಅಲ್ಲಾದರೆ ಹೊರಗಡೆಯಿರುವ ಸಂಗಾತಿಗಳ ಚಟುವಟಿಕೆಗಳು ಹೆಚ್ಚುತ್ತಿರುವ ಬಗ್ಗೆ ಸಮಾಧಾನ ಸ್ಪೂರ್ತಿ ಸಿಗುತ್ತದೆ. ಈ ಅಂಶಗಳು, ಅಂದರೆ ಶತ್ರುವಿನ ವಿರುದ್ಧ ಹೋರಾಟ ಮುಂದುವರಿಯುತ್ತದೆ. ಎಂಬುದನ್ನು ಸೂಚಿಸುವ ಅಂಶಗಳಿಂದಾಗಿ ಶತ್ರುವಿನ ನರಕ ಕೋಣೆಗಳ ಏಕಾಂತತೆ ಹಾಗೂ ಘೋರತನದಿಂದ ಬಿಡುಗಡೆ ಪಡೆಯಲು ಸಾಧ್ಯವಾಗುತ್ತದೆ. ಆದರೆ ಇಲ್ಲಿ ಅಂಥ ಅವಕಾಶಗಳಿಗೆ ಎಡೆಯಲ್ಲಿದೆ ? ನಮ್ಮ ಇತಿಹಾಸದ ನಿರ್ಣಯಕ ಸಂದರ್ಭದಲ್ಲಿ ನಾವು ಜನರ ಕೈ ಬಿಟ್ಟೆವು. ನಮ್ಮ ನಮ್ಮೊಳಗೇ ಕಚ್ಚಾಡಿದೆವು.

ಮನಸ್ಸಿಗೆ ವೇದನೆ ಒಂದೆಡೆ, ಕಿತ್ತುತಿನ್ನುವ ಮಲೇರಿಯಾ ಇನ್ನೊಂದೆಡೆ, ಆಳವನ್ನು ಲೆಕ್ಕಮಾಡಲಾಗದಷ್ಟು ಪಾತಾಳಕ್ಕೆ ಇಳಿಯುತ್ತಿರುವ ಪಕ್ಷ ಈ ಎಲ್ಲದರ ನಡುವೆ ಅಪಕ್ವ ಹಾಗೂ ಆಗಾಗ ಭಾವುಕರಾಗುವ ಎಲ್ಲ ಕ್ರಾಂತಿಕಾರಿಗಳು ಏನು ಮಾಡುತ್ತಾರೋ ಅಂಥ ಉತ್ತರವನ್ನು ನಾನು ಕಂಡುಕೊಂಡೆ ಕೊರಗಿದೆ, ಚಿಂತಿಸಿದೆ, ಪ್ರತಿಯೊಬ್ಬರ ಬಗ್ಗೆ, ಪ್ರತಿಯೊಂದರ ಬಗ್ಗೆ ಆರೋಪಿಸಿದೆ. ಬಹುಶಃ ನನ್ನ ಬಗ್ಗೆ ಮಾತ್ರ ಹೊರತುಪಡಿಸಿ.

ರಾಜಕೀಯ ನಂಬಿಕೆ ಮತ್ತು ಕ್ರಾಂತಿಕಾರಿ ಪ್ರಜ್ಞಾವಂತಿಕೆ ಎಷ್ಟು ಸೂಕ್ಷ್ಮ ಆಯುಧಗಳೆಂದರೆ, ಜನಸಮೂಹದ ಜೀವಂತ ಸಂಪರ್ಕದಿಂದ ಮಸೆದು ಹರಿತಗೊಳಿಸಿ ಶುದ್ಧಗೊಳಿಸದಿದ್ದರೆ ಅವು ತುಕ್ಕು ಹಿಡಿಯುತ್ತವೆ. ಅವು ವರ್ಗ ಸಮರದ ಆಯುಧಗಳು, ಅವುಗಳಿಗೆ ತುಕ್ಕುಹಿಡಿಯುವುದು, ನಾಶವಾಗುವುದನ್ನು ತಪ್ಪಿಸಲು ಅವುಗಳನ್ನು ನಿರಂತರವಾಗಿ ಬಳಸಬೇಕಾಗುತ್ತದೆ.

ಸಾಮೂಹಿಕ ಹೋರಾಟವೆನ್ನುವುದು ಒಂದು 'ಬಿದಿಪ್ರದರ್ಶನ' ಎಂದು ಕ್ರಾಂತಿಕಾರಿ ಪಕ್ಷವೊಂದು ಭಾವಿಸಿದರೆ ಇಂಥ ಅಮೂಲ್ಯ ಶಸ್ತ್ರಗಳು ಆ ಕ್ರಾಂತಿಕಾರಿ ಪಕ್ಷಕ್ಕೆ ಕೇವಲ ಮುಖವಾಡವಾಗುತ್ತದೆ.

ಸೂರ್ಯ ಕಿರಣದಿಂದ ಹೊಳೆಯುತ್ತಿರುವ ಬೆಳಗಿನ ವೇಳೆ ಮಂಜಿನ ತೆರೆ ಆವರಿಸಿದರೆ ಹೇಗಾಗುತ್ತದೋ ಅದೇ ರೀತಿ ಜನರಿಂದ ಹಾಗೂ ಅವರ ಹೋರಾಟಗಳಿಂದ ಪ್ರತ್ಯೇಕಗೊಂಡರೆ ಪಕ್ಷ ಮತ್ತು ಅದರ ಸದಸ್ಯರ ಕ್ರಾಂತಿಕಾರಿ ಪ್ರಜ್ಞಾವಂತಿಕೆಗೆ ಮೋಡ ಮುಸುಕಿದಂತಾಗುತ್ತದೆ.

ಹಾಗಾಗುತ್ತಿರುವುದನ್ನು ನಾನು ನೋಡಿದೆ. ಹಾಗಾಗದಂತೆ ತಡೆಯಲು ನನ್ನಿಂದಾಗಲಿಲ್ಲ. ಅಸಹಾಯಕತೆಯಿಂದ ಚಟಪಡಿಸಿದೆ. ಗೊಂದಲ ಹಾಗೂ ಹತಾಶೆಯ ದಟ್ಟ ಹದಿಕೆಯಲ್ಲಿ ಮುದುಡಿಹೋದ ನಾನು ಆಧ್ಯಾತ್ಮಿಕ ದೌರ್ಬಲ್ಯದ ರಾಶಿಯಲ್ಲಿ ಮುಳುಗಿ ಹೋಗುತ್ತಿದ್ದೇನೆನೋ ಎಂಬ ಭಾವನೆಗೆ ಒಳಗಾದೆ.

ಈಗ ಇಲ್ಲಿ ಒಬ್ಬ ಸಂದೇಶವಾಹಕ ಬಂದಿದ್ದಾನೆ. ಆತ ತಂದ ಸಂದೇಶದಲ್ಲಿ ಏನಿದೆಯೆನ್ನುವುದು ಗೊತ್ತಿಲ್ಲ. ಏನಿದ್ದರೂ ಏನೋ ಒಂದು ಸುದ್ಧಿಯಿರುವುದಂತೂ ಖಚಿತ. ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿ ಇರುವಂತೆ!

ಬೆವರುತ್ತಿದ್ದ ಆ ದೂತ ನನ್ನ ಕಿವಿಯಲ್ಲಿ ಉಸುರಿದ : "ನೀವು ತೆಲಂಗಾಣಕ್ಕೆ ಹೋಗಬೇಕಾಗಿದೆ. ಬನ್ನಿ ಬೇಗ ಸಿದ್ಧರಾಗಿ. ನಾನು ನಿಮ್ಮನ್ನು ನಾಗ್ ಬಳಿ ಕರೆದೊಯ್ಯುತ್ತೇನೆ. ಅವರು ನಿಮ್ಮ ಪ್ರಯಾಣದ ವಿವರಗಳನ್ನು ನಿಗದಿಮಾಡುತ್ತಾರೆ".

ಈ ಮಾತು ಕೇಳುತ್ತಲೇ, ನಿರಾಶೆಯ ಕೂಪದಿಂದ ಆಶಾವಾದಕ್ಕೆ ಹೊರಳಿದ ಅನುಭವವಾಯಿತು ನನಗೆ.

ಜನವರಿಯ ಒಂದು ತಣ್ಣನೆ ಸಂಜೆ ನಾನು ಬಂಗಾಳ ತೊರೆದೆ. ಉಪನಗರ ರೈಲೊಂದರಲ್ಲಿ ಇಂಟರ್‌ಕ್ಲಾಸ್ ಕಂಪಾರ್ಟ್‌ಮೆಂಟ್ ಪ್ರವೇಶಿಸಿದೆ. ಅದರಲ್ಲಿ ಬಂಗಾಳದ ಪೊಲೀಸ್ ಅಧಿಕಾರಿಗಳು ತುಂಬಿ ಹೋಗಿದ್ದರು. ಅವರು ತಮ್ಮ ಕ್ಷೇತ್ರದ ಕ್ರಿಮಿನಲ್ ಜಗತ್ತಿನ ಬಗ್ಗೆ ಹಾಗೂ ತೆಲಂಗಾಣದ ಬಗ್ಗೆ ಚರ್ಚಿಸುವುದರಲ್ಲಿ ಮೈಮರೆತುಹೋಗಿದ್ದರು.

(ಮುಂದುವರಿಯುವುದು)

ಅಂತರಂಗಕ್ಕೆ ಬಿದ್ದ ಬೆಂಕಿ

ಸರಸರನೆ ನಡೆಯುತ್ತಾನೆ
ಮುದುಕ ಬಿರುಬಿಸಿಲ ಬೆವರಿನಲಿ ಮಿಂದೂ
ಮನದಂಗಳದಲ್ಲಿ ತಿಂಗಳ ಬೆಳಕು
ಬಾಗಿಲು ಕಾಯುತ್ತ ಕುಳಿತ ಮೊಮ್ಮಗಳ ನೆನಪು
ತುಂಬಿ ತುಂಬೀ ತಲ್ಪುತ್ತಾನೆ ಮನೆ
ಬಾಂಬ್ ಸ್ಫೋಟಕ್ಕೆ ಉರಿದುಳಿದ ಅವಶೇಷ
ಅರೆಸುಟ್ಟು ಕರಕರಕಲಾದ ಹೆಣ ಮೊಮ್ಮಗಳು
ಗಾಳಿಯ ತೊನೆತಕ್ಕೆ ಚಿಲಕ ಅಲುಗಿದ ಸದ್ದು
ಮೆಲ್ಲನೆ ನವಿರುಗೊಳ್ಳುತ್ತಾಳೆ ಹುಡುಗಿ
ಅತ್ತರ ತರಲೆಂದೇ ಹೋದ ಹುಡುಗ
ಬಂದನೆಂದೇ ಪ್ರೀತಿಯ ತುಡುಗಿ
ನಿಲ್ಲುವಳು ಮೆಲ್ಲನೆ ತೆರೆದ ಬಾಗಿಲಲಿ
ದುತ್ತೆಂದು ಬಿರಿದ ಬೆಂಕಿಯ ಹೊನಲು
ಹರಿಯುವ ಸದ್ದು ಬುಶ್ sss
ತೊಟ್ಟಿಲಲಿ ಮಲಗಿದ್ದ ಮುದ್ದು
ಹೂದುಟಿಯ ಮೇಲೆ ಕುಣಿವ ಕನಸು
ಚಿಗುರು ಹಸ್ತದ ಸನ್ನೆ
ರಸತುಂಬಿದೆದೆ ದೊನ್ನೆ
ತುಳುಕಿ ತಿಳಿಹಾಸ
ಕರೆಯುತಹ ಲೋಕಕ್ಕೆ
ಎರಗಿದ ರಣಹದ್ದು
ರೆಕ್ಕೆ ಬೀಸಿದ ಸದ್ದು ಬುಶ್
ಉಷೆಯರಳಿ ಹೂವಾಗಿ
ಪರಿಮಳ ಹೀರಿ
ಪುಳಕಗೊಳ್ಳುವ ಧರೆಯ
ಕನಸು ಹೊತ್ತು ಹೊರೆಯುವ
ಕವಿಯೇ ಬೆಂಕಿಬಿದ್ದಿದೆ ನಿನ್ನ ಬೃಂದಾವನಕೆ
ಸಾಮ್ರಾಜ್ಯಶಾಹಿಯ ದಾಹಕೆ
ಗರಿಸುಟ್ಟ ಗುಬ್ಬಿ ಬಿದ್ದು
ಒದ್ದಾಡುತ್ತಿದೆ ಅರೆಬೆಂದು
ಚೀರುತಿದೆ ಬಯಸಿ ನೀರಬಿಂದು
ಚಿಗುರಿಸು ಮತ್ತೆ ಕತ್ತಲೆಯಿಂದ
ಬೆಳಕಿನ ಕಡೆಗೆ ನಡೆಸುವ ಕನಸು
ಹೊಮ್ಮಲಿ ಶಿವನ ಶಿರಸ್ಸಿಂದ ಪ್ರೀತಿಯ ಸರಸ್ಸು


ಡಾ. ಆರ್.ವಿ.ಭಂಡಾರಿ


ಸಾದರ ಸ್ವೀಕಾರ

ಭಾಷೆಯ ಬೆಳಕು ಡಾ। ಕೆ.ಎಲ್. ಗೋಪಾಲಕೃಷ್ಣಯ್ಯ, ಬೆಲೆ. 70ರೂ.
ವೇದಗಳಲ್ಲಿ ಜನಸಾಮಾನ್ಯರು : ಬಿ.ವಿ. ವೀರಭದ್ರಪ್ಪ ಬೆಲೆ. 65 ರೂ.
ಅಸ್ಪೃಶ್ಯರು : ಎಂ. ವೆಂಕಟಸ್ವಾಮಿ, ಬೆಲೆ. 70ರೂ.
ಕಡ್ಡಾಯದ ಪ್ರಾಥಮಿಕ ಶಿಕ್ಷಣ : ಜಯಕುಮಾರ್ ಅನಗೋಳ್ ಬೆಲೆ. 35.
ಅನುವಂಶಿಕ ಸಂಕೇತ : ಡಾ। ವಿರೂಪಾಕ್ಷ ಕೆ. ಬಣಕಾರ, ಬೆಲೆ. 45 ರೂ.
ಜಯಪ್ರಿಯ ಹಣ್ಣುಗಳು : ಡಾ। ಪಿ. ನಾರಾಯಣ ಸ್ವಾಮಿ, ಬೆಲೆ. 100 ರೂ.
ವಿದ್ಯಾರ್ಥಿಗಳೇ ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಿ : ಡಾ। ಸಿ.ಆರ್. ಚಂದ್ರಶೇಖರ್, ಬೆಲೆ. 20ರೂ.
ಮುಂಬಯಿ ದಿನಾಂಕ: ವ್ಯಾಸರಾಯ ಬಲ್ಲಾಳ, ಬೆಲೆ 125 ರೂ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು-560 001.

ಪ್ರಕಟವಾಗಿದೆ





ಸಂಪರ್ಕ : ಚಿಂತನ ಉತ್ತರ ಕನ್ನಡ, ಪಂಡಿತ ಸಾರ್ವಜನಿಕ ಗ್ರಂಥಾಲಯ, ಶಿರಸಿ-581401

ಲಭ್ಯವಿದೆ



ಕಾಂ. ಸೂರಿಯವರ ಬದುಕು - ಹೋರಾಟ ಕುರಿತಾದ ಸಂಗ್ರಹ ಯೋಗ್ಯವಾದ ಸ್ಮರಣ ಸಂಚಿಕೆ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಅಗಸ್ಟ್ 2 ಮತ್ತು 3 , 2003 ಬೆಂಗಳೂರು
ಗ್ರಾಮ ಪಂಚಾಯತಿ ನೌಕರರ ಜಿಲ್ಲಾ ಮಟ್ಟದ ತರಬೇತಿ ಶಿಬಿರ - ಸ್ಕ್ಯಾಟ್ ಕ್ಯಾಂಪ್ ದೊಡ್ಡಬಳ್ಳಾಪುರ

ಅಗಸ್ಟ್ 16 ರಿಂದ 31,2003
ಕೇಂದ್ರ ಸರಕಾರದ ಅಮೇರಿಕ ಪರ ವಿದೇಶಿ ನೀತಿ, ಜನವಿರೋಧಿ ಆರ್ಥಿಕ ನೀತಿ ಹಾಗೂ ಕೋಮುವಾದೀಕರಣದ ವಿರುದ್ಧ ಪ್ರಚಾರಾಂದೋಲನ - ಸಿಪಿಐ(ಎಂ) ಕರೆ

ಸೆಪ್ಟೆಂಬರ್ 1, 2003
ಕರ್ನಾಟಕ ಪ್ರಾಂತ ರೈತ ಸಂಘದ ರೈತರ ದಿನ- ವಿಶೇಷ ರಾಜ್ಯ ಸಮಾವೇಶ ಗುಲ್ಬರ್ಗಾ

ಅಧ್ಯಕ್ಷ ಅನಂತಕುಮಾರ್ ಡೋಂಗಿತನ

ಅನಂತ ಕುಮಾರ್ ಕೇಂದ್ರದ ಸಚಿವಸ್ಥಾನ ದುಕ್ಕೊಂಡಿದ್ದಾರೆ. ತಾಂತ್ರಿಕವಾಗಿ



ತಕುಮಾರ್ ಕಳುಹಿಸಿದ್ದ ರಾಜೀನಾಮೆ ನ್ನು ವಾಜಪೇಯಿಯವರು ಅಂಗೀಕರಿಸಿದ್ದಾರೆ. ಒಂದು ರೀತಿಯಲ್ಲಿ ಅನಿರೀಕ್ಷಿತ ಇನ್ನೊಂದೆಡೆ ಕ್ಷಿತ.

ಅನಂತಕುಮಾರ್ ಕರ್ನಾಟಕದ ಬಿಜೆಪಿಗೆ ಕ್ಷರಾಗಿ ನೇಮಕವಾದ ಬಳಿಕವೂ ಸಚಿವರಾಗಿ ದುವರಿದಿದ್ದ ಅನಂತಕುಮಾರರ ವಿಶೇಷ ರ್ಥ್ಯವೆಂದು ಆರ್.ಎಸ್.ಎಸ್ ಮುಖವಾಣಿ ಬಣ್ಣಿಸಿತ್ತು. ಸಚಿವರಾಗಿದ್ದ ಪ್ರಮೋದ್ ಜನ್ ಉಮಾಭಾರತಿ ಮುಂತಾದವರು ಗೆ ಒಂದೇ ಹುದ್ದೆ ಎಂಬ ಸೂತ್ರಕ್ಕನ್ವಯಿಸಿ ನಾಮೆ ಸಲ್ಲಿಸಿ ರಾಷ್ಟ್ರದ ಅಧ್ಯಕ್ಷರಾಗಿದ್ದರು. ಅನಂತಕುಮಾರ್ ಅಧ್ಯಕ್ಷರಾಗುವ ಮೊದಲೇ ರಾಗಿ ಮುಂದುವರಿಸಲು ಶರತ್ತು ವಿಧಿಸಿದ್ದರು. ರವೂ ಅದರ ಉಳಿವಿಗೆ ಲಾಭ ನಡೆಸಿದ್ದರು ಗೂ ಹೋಗಿ ಬಂದಿದ್ದರು.

ಮ್ಮ ರಾಜೀನಾಮೆ ಅಂಗೀಕರಿಸಿದ್ದು, ಯಿಂದ ಬಿಡುಗಡೆಯಾದದ್ದು ತಮಗೆ ನಿರಾಶ ತಂದಿದೆ. ಏನಿದ್ದರೂ ಸಚಿವ ಸ್ಥಾನ ನನಗೆ ಕೊನೆಯದು, ಜನಸೇವೆಗೆ ಸಂಘಟನೆಯೇ ಆದ್ಯತೆ ರಂಗಗಳು ಎಂದು ಅನಂತಕುಮಾರ್ ಗುಲಬರ್ಗಾದಲ್ಲಿ ಹೇಳಿದ್ದು ಕೇವಲ ಡೋಂಗಿತನ. ಎಟುಕದ ದ್ರಾಕ್ಷಿ ಹುಳಿ ಹುಳಿ ಎಂದು ಗುಳ್ಳೇ ನರಿ ಹೇಳಿಕೆಯಂತೆ ಆಗಿದೆ. ಯಾಕೆಂದರೆ ಕೇವಲ ಕೆಲವೇ ದಿನಗಳ ಹಿಂದೆ ಚನ್ನೈಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ವೆಂಕಯ್ಯ ನಾಯ್ಡು ಬಂದಾಗ ಕರ್ನಾಟಕದ ಯಡಿಯೂರಪ್ಪ ಇನ್ನೂ ಮೂರು ತಿಂಗಳಾದರೂ ಮುಂದುವರಿಸಬೇಕೆಂದು ಕೇಳಿದ್ದರೂ ಆದರೆ ಉಮಾಭಾರತಿ, ಪ್ರಮೋದ್ ಮಹಾಜನ್ ಅನಂತಕುಮಾರರನ್ನು ಮುಂದುವರಿಸಲು ತೀವ್ರ ಆಕ್ಷೇಪಿಸಿ, ತಮಗೊಂದು ನ್ಯಾಯಬೇಕು ಎಂದು ರಂಪಾಟ ಮಾಡಿದರಂತೆ. ಹೀಗಾಗಿ ಅನಂತರನ್ನು ಸಂಪುಟದಿಂದ ಹೊರದಬ್ಬಲು ನಿರ್ಧರಿಸಿ, ರಾಜೀನಾಮೆ ಕಳಿಸಿ ಎಂದು ಆದೇಶವೀಯಲಾಯಿತಂತೆ. ಸ್ವತಃ ಅವರೇ ಅವಲತ್ತುಗೊಂಡರೂ ಆಗಿಲ್ಲವಂತೆ. ಇಂತಹ ಪರಿಸ್ಥಿತಿಗೆ ಬಿಜೆಪಿ ಒಳಗಿನ ಕಚ್ಚಾಟವೂ ಕಾರಣ. ಅಷ್ಟೇ ಅಲ್ಲ ಹಲವಾರು ಹಗರಣ, ಕಳಂಕಿತ ವ್ಯವಹಾರದಲ್ಲಿ ಅನಂತಕುಮಾರರ ಹೆಸರು ಖ್ಯಾತಿಯೇ. ಸಚಿವ ಹೊಣೆ ಹೋದ್ದರಿಂದ ಪಕ್ಷದ ಸಂಘಟನೆಗೆ ಹೆಚ್ಚು ಒತ್ತು ನೀಡುವುದಾಗಿ ಹೇಳುತ್ತಿದ್ದಾರೆ ಕುಮಾರರು. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪರ್ಯಾಯ ಪಕ್ಷವನ್ನಾಗಿ ಮಾಡಲಾಗುವುದಂತೆ. ಅನಂತಕುಮಾರ್ ಆರ್.ಎಸ್.ಎಸ್‌ನ ಕಟ್ಟಾಳು ಹೀಗಾಗಿ ಚುನಾವಣಾ ವರ್ಷದಲ್ಲಿ ಅವರ ಗುರಿ ಸಾಧನೆಗೆ ಏನೆಲ್ಲಾ ಕಸರತ್ತುಗಳು ಕರ್ನಾಟಕದಲ್ಲಿ ಆರಂಭಗೊಂಡಾವು ಎಂಬುದು ಜನರ ಆತಂಕ.

ಅಖಿಲ ಭಾರತ ಜನತಾದಳದ ನಾಯಕರು ರಾಮಕೃಷ್ಣ ಹೆಗಡೆಯವರ 'ಆಶೀರ್ವಾದ' ಪಡೆಯಲು ಮನೆಗೆ ಹೋಗಿ, ಬಹಳ ನಿರಾಶೆಯಿಂದ ವಾಪಸಾದ ಸಂಗತಿ ವರದಿಯಾಗಿದೆ. ಹೆಗಡೆ ಉಪದೇಶ ಕೇಳಿದ ಪ್ರಗತಿಪರ ಜೆಡಿ ಮುಖಂಡರು ಖೇದಗೊಂಡಿದ್ದಾರೆ. ಜನತಾದಳದ ಬಣಗಳು

ಈ ವಾರ ಕರ್ನಾಟಕ ಒಳನೋಟ

ಎಸ್.ವೈ.ಗುರುಶಾಂತ್

ಒಂದುಗೂಡಲು ಹೆಗಡೆ ಕ್ರಮವಹಿಸಬೇಕು, ಸಲಹೆ ನೀಡಬೇಕೆಂದು ಕೇಳಿದಾಗ 'ಮಲ್ಯರೊಂದಿಗೆ ಮಾತನಾಡಿ ಎಂದದ್ದು ಹಿರಿಯ ನಾಯಕರನ್ನು ಕೆರಳಿಸಿದೆಯಂತೆ' ಅವಾಸ್ತವಿಕ, ಬಾಲಿಷ ನಿಲುವು ವರ್ತನೆಯ ವಿಜಯ ಮಲ್ಯರ ಮುಂದೆ ತಾವೇನು ಮಾತನಾಡೋದಿದೆ ಎಂದು ಹೇಳಿದ್ದಾರೆ. ನಿಜ ವಿಲೀನ ಆಗಕೂಡದು ಎಂದು ಹಲವಾರು ತಂತ್ರದಾಟ ಆಡುತ್ತಿರುವ ಹೆಗಡೆಯವರನ್ನು ಹೀಗೆ ಕೇಳಿದರೆ ಏನು ಹೇಳಿಯಾರು? ಅಥವಾ ಅಲ್ಲಿ ಏನೇನು ಚರ್ಚೆಯಾಯಿತು? ಹೋದವರಿಗೆ ಗೊತ್ತು ಆದರೆ ಹೆಗಡೆ ಜೊತೆಗೆ ಭ್ರಮನಿರಸರಾದ ಒಂದು ದೊಡ್ಡ ಗುಂಪೇ ಎಐಪಿಜೆಡಿಯಲ್ಲಿದೆ ಎಂಬುದು ಹೊರಗೆ ಕಾಣುತ್ತಿದೆ. ಸುಮಾರು ಏಳು ಶಾಸಕರು ಜೆಡಿ(ಎಸ್) ನತ್ತ ನಡೆಯುವ ಇಂಗಿತ ವ್ಯಕ್ತಪಡಿಸಿದ್ದರಂತೆ. ಇದು ನಿಜವೇ ಆಗಿದ್ದಲ್ಲಿ ಒಳ್ಳೆಯ ಬೆಳವಣಿಗೆ. ಈ ಮುಖಂಡರು, ಅವರ ಬೆಂಬಲಿಗ ಜನರು ಹೆಗಡೆ ಅನಂತಕುಮಾರ್, ಕೃಷ್ಣರ ಆಟವನ್ನು ಬೇಗ ಅರಿತಷ್ಟು ಒಳ್ಳೆ ಫಲಿತಾಂಶ ಸಿಗಲಿದೆ.

ಎಐಪಿಜೆಡಿ ನಲ್ಲೂ ವಿಲೀನದ ಧ್ವನಿ: ಕೃತಕ ಮಳೆ ಕಂಟ್ರಾಕ್ಟ್ : ಕಂಪನಿಗಳ ತಗಾದೆ

ಕರ್ನಾಟಕದ ಉತ್ತರ- ದಕ್ಷಿಣದ ಹಲವಾರು ಜಿಲ್ಲೆಗಳು ಮಳೆ ಬರದೇ ಈ ವರುಷವೂ ಬರದ ದವಡೆಗೆ ನೂಕಲ್ಪಟ್ಟು ತತ್ತರಿಸುತ್ತಿರುವಾಗ, ಕೃತಕವಾಗಿ ಮಳೆಬರಿಸುವ ಪ್ರಯತ್ನಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ಆದರೆ ಪ್ರತಿಯೊಂದು ಸರ್ಕಾರದ ಹಾದಿ ತಪ್ಪಿರುವ ಆಡಳಿತ ನೀತಿಯಿಂದಾಗಿ ಜನರ ಪಾಲಿಗೆ ಹನಿ ನೀರೂ ದಕ್ಕದೇ ಸಾವು ಸಂಕಷ್ಟಕ್ಕೆ ದೂಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೃತಕ ಮಳೆ ಬರಿಸಲು ಕಂಟ್ರಾಕ್ಟ್ ನೀಡುವ ಕ್ರಮ ವಿವಾದಕ್ಕೆ ಒಳಗಾಗಿ ಕೋರ್ಟ್ ಮೆಟ್ಟಲು ಹತ್ತುವ ಬೆದರಿಕೆಗೆ ಒಳಗಾಗಿದೆ. ಮೋಡಗಳ ಮೇಲೆ ರಾಸಾಯನಿಕ ಸಿಂಪಡಿಸಿ ಮಳೆ ಬರಿಸುವ ಗುತ್ತಿಗೆಯನ್ನು ಆಟ್ಮಾರಿಸ್ಟಿಯಲ್ ಇಂಕ್' ಎಂಬ ಕಂಪನಿಗೆ 3 ಕೋಟಿ ರೂಪಾಯಿ ನೀಡುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲು ಶಿಫಾರಸ್ಸು ಮಾಡಲಾಗಿದೆ. ಆದರೆ ಅಮೇರಿಕಾ ಮೂಲಕ 'ವೆದರ್ ಮೊಡಿಫಿಕೇಶನ್ ಇಂಕ್' ಎಂಬ ಕಂಪನಿ ಇದಕ್ಕೆ ತಕರಾರ್ ತೆಗೆದಿದೆ. ಅದು ತನಗೆ 8 ಕೋಟಿ ಪ್ರಸ್ತಾವವನ್ನು ಕಡೆಗಣಿಸಿ ಟೆಂಡರ್ ಉಲ್ಲಂಘಿಸಿ ಕೈಬಿಡಲಾಗಿದೆಯೆಂದೂ, ನ್ಯಾಯಾಲಯದ ಮೊರೆಹೋಗಿ ತಡೆಯಾಜ್ಞೆ ತರುವುದಾಗಿ ಹೇಳಿದೆ. ಅಂದರೆ ಈ ವ್ಯಾಜ್ಯ ಬೆಳೆದಲ್ಲಿ ಮಳೆ ಬರಿಸುವುದು, ನೀರು ಮೇವು ಸಿಗುವುದು ಈ ವರ್ಷ ಅಸಾಧ್ಯ.

ಇದರ ಹೊಣೆ ಕೃಷ್ಣರೇ ಹೊರಬೇಕು. ಪ್ರತಿಯೊಂದಕ್ಕೂ ವಿದೇಶಿ ಕಂಪನಿಗಳು ಮೊರೆ ಹೋಗುವುದರ ದುಸ್ಥಿತಿಯೇ ಇದು. ಈ ವಿದೇಶಿ ಕಂಪನಿಗಳಿಗೆ ಜನರ ಪಾಡು ಏನಾದರೇನು? ಹಣ ಸುಲಿಗೆಯಾದರೆ ಸಾಕು ಎಂಬ ತಿರಸ್ಕಾರದ ನಿಲುವು ಇದೆ. ಇದರಿಂದಲಾದರೂ ಸರ್ಕಾರ ಎಚ್ಚೆತ್ತುಕೊಂಡೀತೇ? ಅಥವಾ ಸರ್ಕಾರದ್ದು ಈ ವಿವಾದದಲ್ಲಿ ಒಂದು ಕೈಯಿದೆಯೇ? ವಿವಾದ ಕೂಡಲೇ ಅಂತ್ಯವಾಗಿ ಜನರ ನೆರವಿಗೆ ಧಾವಿಸಬೇಕಿದೆ.

ಕೊಳ್ಳೇಗಾಲ: ಮೂಲಭೂತ ಸೌಲಭ್ಯಕ್ಕೆ ಡಿ.ವೈ.ಎಫ್.ಐ ಒತ್ತಾಯ

ಳ್ಳೇಗಾಲ ತಾಲ್ಲೂಕು ದಿನ್ನಳ್ಳಿ ಪಂಚಾಯ್ತಿ ರಾಮಾಪುರ ಹೋಬಳಿಯ ಬಹುತೇಕ ಪಂಚಾಯ್ತಿಗಳ ಗ್ರಾಮಗಳಿಗೆ ಕನಿಷ್ಟ ಲಭೂತ ಸೌಲಭ್ಯ ಕಲ್ಪಿಸುವಂತೆ ಎಫ್.ಐ ಕೊಳ್ಳೇಗಾಲ ತಾಲ್ಲೂಕು ಸಮಿತಿ ಮಂತ್ರಿಯವರನ್ನು ಒತ್ತಾಯಿಸಿದೆ.

ಸಂಬಂಧ ಮುಖ್ಯಮಂತ್ರಿಯವರಿಗೆ ಮನವಿ ಒಂದನ್ನು ಸಲ್ಲಿಸಿರುವ ಸಮಿತಿಯ ಡರು ಆ ಭಾಗದಲ್ಲಿ ಜನತೆ ಮೂಲಭೂತ ರ್ಯಗಳಿಂದ ವಂಚಿತರಾಗಿರುವ ಬಗ್ಗೆ ರವಾಗಿ ವಿವರಿಸಿದ್ದಾರೆ. ಕುಡಿಯುವ ಗಿ ಜನರು ಪರದಾಡುವಂತಾಗಿದೆ. ವ ಕೊಳವೆ ಬಾವಿಗಳಲ್ಲಿ ಸಾಕಷ್ಟು ಕೈ ಪಂಪುಗಳು ಹಾಳಾಗಿದ್ದು ನೀರನ್ನು ಹೋಗಿಸಲು ಸಾಧ್ಯವಾಗುತ್ತಿಲ್ಲ. ದೊಡ್ಡ ಪೀಣ್ಯ ಗ್ರಾಮಗಳಿಗೆ ಹೈಟ್ಯಾಂಕ್ ಐದು ವರ್ಷಗಳಾದರೂ ಅದರ ಸೌಲಭ್ಯ ಇದುವರೆಗೂ ಸಾಧ್ಯವಾಗಲಿಲ್ಲ. ದಿನ್ನಳ್ಳಿ ಲ್ಲಿ ನಿರ್ಮಿಸಿರುವ ಹೈಟ್ಯಾಂಕ್ ಕಳಪೆ ಯಿಂದಾಗಿ ದುಸ್ತಿತಿಗೆ ತಲುಪಿದೆ ಎಂದು

ಳು ಹಾಳುಬಿದ್ದಿವೆ. ಚರಂಡಿ ವ್ಯವಸ್ಥೆ ಸರಿಪಡಿಸಿಲ್ಲ. ಬರಪರಿಹಾರ ಕಾಮಗಾರಿಗೆ ಮಂಜೂರಾದ ಹಣ ಮತ್ತು ಕೂಲಿಗಾಗಿ ಕಾಳು ಯೋಜನೆಯ ದಾನ್ಯಗಳನ್ನು ದುರುಪಯೋಗಪಡಿಸಿ ಕೊಳ್ಳಲಾಗಿದೆ ಎಂದು ಆರೋಪಿಸಿರುವ ಸಮಿತಿ ಸುಮಾರು 120 ಕುಟುಂಬಗಳಿರುವ ಸೂಳೆ ಕೋಬೆ ಗ್ರಾಮಕ್ಕೆ ಇನ್ನೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂದು ದೂರಿದೆ.

ಆಶ್ರಯ, ಅಂಬೇಡ್ಕರ್, ರಾಜೀವ್‌ಗಾಂಧಿ ವಸತಿ ಯೋಜನೆಗಳಲ್ಲಿ ಬಾರಿ ಅವ್ಯವಹಾರ ನಡೆದಿದೆ. ಮನೆಗಳನ್ನು ಹೊಂದಿರುವ ಅನುಕೂಲಸ್ಥರಿಗೆ ಮನೆ ಮಂಜೂರು ಮಾಡಿ ಅರ್ಹ ಫಲಾನುಭವಿಗಳನ್ನು ಕಡೆಗಣಿಸಲಾಗಿದೆ. ಇದೂ ಅಲ್ಲದೆ ಮನೆ ನಿರ್ಮಾಣ ಮಾಡದೇ ಸುಳ್ಳು ದಾಖಲೆ ಸೃಷ್ಟಿಸಿ ಹಣ ದೋಚಲಾಗಿದೆ ಎಂದು ಆರೋಪಿಸಿದ್ದು ಇಲ್ಲಿನ ಅಧಿಕಾರಿಗಳನ್ನು ಸಂಪರ್ಕಿಸಿ ಮೂಲಭೂತ ಸೌಲಭ್ಯಕ್ಕೆ ಒತ್ತಾಯಿಸಿದರೆ ತಾತ್ಸರ ತೋರುತ್ತಿದ್ದಾರೆ ಎಂದು ದೂರಿದ್ದಾರೆ.

ಮುಖ್ಯಮಂತ್ರಿಯವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಜನತೆಯ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿರುವ ಅವರು ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದೆ.

ಕೇಂದ್ರ ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಪ್ರಬಲ ರಾಜಕೀಯ ಪ್ರಚಾರಾಂದೋಲನಕ್ಕೆ ನಿರ್ಧಾರ

ಪ್ರಾದೇಶಿಕ ಜಾಥಾಗಳು- ರಾಜ್ಯಮಟ್ಟದ ಬೃಹತ್ ರ‍್ಯಾಲಿ

ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ಅಸಹನೀಯ ಅಪಾಯಕಾರಿ ನೀತಿಗಳ ವಿರುದ್ಧ ಆಗಸ್ಟ್ 16 ರಿಂದ 31 ರವರೆಗೆ, ದೇಶವ್ಯಾಪಿ ಪ್ರಚಾರಾಂದೋಲನವನ್ನು ನಡೆಸಲು ಸಿಪಿಐ(ಎಂ) ನ ಕೇಂದ್ರ ಸಮಿತಿ ನಿರ್ಧರಿಸಿದೆ. ಇದರ ಒಟ್ಟು ವಿವರಗಳನ್ನು ಪೊಲಿಟ್ ಬ್ಯೂರೊ ಸದಸ್ಯರಾದ ರಾಮಚಂದ್ರನ್ ಪಿಳ್ಳೆಯವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು. ಅದರಂತೆ ಕರ್ನಾಟಕದಲ್ಲಿ ಕೇಂದ್ರದ ವಾಜಪೇಯಿ ಹಾಗೂ ರಾಜ್ಯದ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರದ ಆರ್ಥಿಕ- ರಾಜಕೀಯ ರಾಜ್ಯ ಸಮಿತಿಯು ತೀರ್ಮಾನಿಸಿದೆ. ಅದಕ್ಕಾಗಿ ಜನತೆಯನ್ನು ತಲುಪುವ ವ್ಯಾಪಕವಾದ ಕಾರ್ಯಕ್ರಮಗಳನ್ನು ಇದೇ ಜುಲೈ 2 ಮತ್ತು 3 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ರಾಜ್ಯ ಸಮಿತಿಯು ರೂಪಿಸಿದೆ.

ಒಟ್ಟು ರಾಜ್ಯದಲ್ಲಿ ಆರು ಪ್ರಾದೇಶಿಕ ಜಾಥಾಗಳನ್ನು ಸಂಘಟಿಸಲಾಗುವುದು.

1. ಬೆಂಗಳೂರು, ಮೈಸೂರು, ಮಂಡ್ಯ
2. ಕೋಲಾರ, ತುಮಕೂರು, ಹಾಸನ, ಚಿಕ್ಕಮಗಳೂರು
3. ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ
4. ವಿಜಾಪುರ, ಬೆಳಗಾಂ, ಧಾರವಾಡ, ಗದಗ್
5. ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ
6. ಮಂಗಳೂರು, ಉಡುಪಿ, ಕೊಡಗು, ಉತ್ತರಕನ್ನಡ, ಶಿವಮೊಗ್ಗ

ಈ ಜಿಲ್ಲಾ ವ್ಯಾಪ್ತಿಯಲ್ಲಿ ಮುಖ್ಯ ಜಾಥಾಗಳು ಸಂಚರಿಸಲಿವೆ. ಅಲ್ಲದೇ ಇದಕ್ಕೆ ಹೊಂದಿಕೊಂಡು ಉಪಜಾಥಾಗಳೂ ಸಹ ಹಲವಾರು ಜಿಲ್ಲೆಗಳಲ್ಲಿ ನಡೆಯಲಿವೆ.

ಈ ಜಾಥಾಗಳುದ್ದಕ್ಕೂ ಬಹಿರಂಗ ಸಭೆಗಳು ಜರುಗಲಿದ್ದು ಪಕ್ಷದ ರಾಜ್ಯ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ರಾಜ್ಯಮಟ್ಟದ ರ‍್ಯಾಲಿ:

ಬಳಿಕ ಆಗಸ್ಟ್ ಕೊನೆವಾರದಲ್ಲಿ ರಾಜ್ಯಮಟ್ಟದ ಬೃಹತ್ ರ‍್ಯಾಲಿಯನ್ನು ರಾಜಧಾನಿ ಬೆಂಗಳೂರಿನಲ್ಲಿ ಸಂಘಟಿಸಲಾಗುವುದು. ಅಲ್ಲದೆ ಕರಾವಳಿ ಪ್ರದೇಶದಲ್ಲಿನ ಇನ್ನೊಂದು ರ‍್ಯಾಲಿಯು ಮಂಗಳೂರಿನಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯುವುದು. ಇದರಲ್ಲಿ ಸಿಪಿಐ(ಎಂ) ನ ರಾಷ್ಟ್ರ ನಾಯಕರು ಪಾಲ್ಗೊಂಡಿದ್ದಾರೆ.

ಕಿರುಹೊತ್ತಿಗೆ, ಕರಪತ್ರ ಹಿಡಿದು ಕಾರ್ಯಕರ್ತರು ಮನೆ ಮನೆಗೆ ತೆರಳಿ ಪ್ರಚಾರಿಸಲು ಸಿಪಿಐ(ಎಂ) ರಾಜ್ಯ ಸಮಿತಿಯು ತೀರ್ಮಾನಿಸಿದೆ.

ಶಾಲಾ ಕಾಲೇಜುಗಳಿಗೂ ನುಗ್ಗಿದ ಕೋಮುವಾದಿ ಅಜೆಂಡಾ....

ಇತ್ತೀಚೆಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಕೋಮುವಾದಿ ಶಕ್ತಿಗಳು ತಮ್ಮ ಪ್ರಾಬಲ್ಯ, ಪ್ರಚಾರ ಗಿಟ್ಟಿಸಿಕೊಳ್ಳಲು ಅತ್ಯಂತ ಕೀಳು ಮಟ್ಟದ ತಂತ್ರವನ್ನು ರೂಢಿಸಿಕೊಳ್ಳುತ್ತಿದೆ; ಭಟ್ಕಳದಲ್ಲಿ ಹಿಂದೂ ಸಮಾಜೋತ್ಸವ, ಕಾರವಾರದ ಅಂಜುದೀವ್ ಚರ್ಚ್ ಸ್ಥಳಾಂತರ ಪ್ರಕರಣ, ಯಲ್ಲಾಪುರದ ತರಕಾರಿ ಮಾರ್ಕೆಟ್ಟಿನ ದೇವಸ್ಥಾನ ಪ್ರಕರಣ. ಅದರ ಬೆನ್ನ ಹಿಂದೆ ಈಗ ಶಿರಸಿಯ ಮಾರಿಕಾಂಬ ಜ್ಯೂನಿಯರ್ ಕಾಲೇಜು ಮತ್ತು ಇತರ ಪ್ರೌಢಶಾಲೆಯಲ್ಲಿ ಏಸುವಿನ ಪವಾಡಗಳು ಮತ್ತಿತರ ವಿವರ ಇರುವ ಪುಸ್ತಕ ವಿತರಣೆಯ ಪ್ರಕರಣ. ಜಿಲ್ಲೆಯಲ್ಲಿ ಸೌಹಾರ್ದತೆಯ ವಾತಾವರಣ ಕೆಡಿಸುವ ಪ್ರಯತ್ನ ನಡೆದಿದೆ.

ಪ್ರಕರಣದ ಹಿನ್ನಲೆ: ಇತ್ತೀಚೆಗೆ ಕ್ರಿಶ್ಚಿಯನ್ ಸಂಘಟನೆ ಯೌವನಸ್ಥರ ಪ್ರಕಟಣೆಯ ಪುನರಾವರ್ತನೆ 'ನಿರೀಕ್ಷೆಯ ಪುಸ್ತಕ' ಎನ್ನುವ ನೂರಾರು ಪುಸ್ತಕವನ್ನು ಶಿರಸಿಯಲ್ಲಿ ಉಚಿತವಾಗಿ ಹಂಚಿದೆ. ಸರ್ಕಾರಿ ಜ್ಯೂನಿಯರ್ ಕಾಲೇಜಿನ ಪ್ರಾಚಾರ್ಯರನ್ನು ಭೇಟಿಯಾಗಿ, ಏಡ್ಸ್ ಬಗ್ಗೆ ಮತ್ತು ಯುವಜನರ ಸಮಸ್ಯೆಗಳ ಬಗ್ಗೆ ವಿವರ ಇರುವ ಒಂದು ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಹಂಚುವುದಾಗಿ ಮನವಿ ಮಾಡಿದರು. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪುಸ್ತಕವಾಗಿದ್ದರೆ ಹಂಚಲಿ ಎನ್ನುವ ಸದುದ್ದೇಶದಿಂದ ಅವರು ಅನುಮತಿ ಕೊಟ್ಟರು ಎನ್ನಲಾಗಿದೆ. ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ವಿಚಾರಕ್ಕಿಂತ ಏಸುವಿನ ಬಗ್ಗೆ, ಅವರ ಪವಾಡಗಳ ಬಗ್ಗೆ ವಿವರ ಇದೆ ಎನ್ನುವುದು ತಿಳಿದದ್ದು ಎಲ್ಲಾ ಪುಸ್ತಕ ಹಂಚಿದಮೇಲೆ. ಈ ಪುಸ್ತಕ ಹಂಚಿದ ಮೇಲೆ ಸ್ಥಳೀಯ ಬಿಜೆಪಿ ಘಟಕ ಪತ್ರಿಕಾಗೋಷ್ಠಿ ಇತ್ಯಾದಿಗಳ ಮೂಲಕ ಅನಾರೋಗ್ಯಕರವಾದ ವಿವಾದಕ್ಕೆ ಇಳಿದಿದೆ. ಮಹಾವಿದ್ಯಾಲಯಕ್ಕೆ ಬಂದು ಗಲಾಟೆ ಮಾಡಿದೆ. ಇದೊಂದು ಮತಾಂತರದ ಹುನ್ನಾರ ಎಂದು ಬೀದಿಯಲ್ಲಿ ಪುಸ್ತಕವನ್ನು ಸುಟ್ಟು ಪ್ರತಿಭಟನೆ ಮಾಡಿದೆ. ಸ್ವತಃ ಶಿರಸಿ-ಸಿದ್ದಾಪುರದ ಬಿಜೆಪಿ ಶಾಸಕರಾದ ವಿವೇಕಾನಂದ ವೈದ್ಯರೂ ಕೂಡಾ ಪ್ರತಿಭಟನೆಯ ಮುಂಚೂಣಿಯಲ್ಲಿದ್ದಾರೆ.

ಆದರೆ ಪ್ರಶ್ನೆ ಇರುವುದು ಈ ವಿಷಯಕ್ಕಾಗಿ ಇಷ್ಟೊಂದು ಗಲಾಟೆ ಬೇಕಿತ್ತೆ? ಗಲಾಟೆ, ಪ್ರತಿಭಟನೆಗೆ ಬೇರೆ ವಿಷಯ ಇರಲಿಲ್ಲವೇ? ಗಲಾಟೆಯ ಹಿಂದಿನ (ದುರು)ಉದ್ದೇಶ ಏನಿತ್ತು?

ನಿರೀಕ್ಷೆಯ ಪುಸ್ತಕ

ಏಡ್ಸ್, ಪ್ರೀತಿ, ಸಲಿಗೆ, ಆರೋಗ್ಯವೃದ್ಧಿ, ಕ್ರೀಡೆ, ವ್ಯಕ್ತಿತ್ವ ವಿಕಾಸ ಇತ್ಯಾದಿಗಳನ್ನು ಧರ್ಮದ ಜೊತೆ ಸಮೀಕರಿಸಿಹೇಳುವ, ತೀರಾ ಅವೈಜ್ಞಾನಿಕವಾಗಿ ವಿದ್ಯಾರ್ಥಿಗಳ ಮಧ್ಯೆ ವಿವರಿಸುವ ಒಂದು ಪರಂಪರೆಯೇ ಇದೆ. ವಿವಿಧ ಧರ್ಮಗಳ ಪ್ರಚಾರಕ್ಕಾಗಿ ಇಂತಹ ತಂತ್ರವನ್ನು ನಾವು ಖಂಡಿಸಲೇಬೇಕು. ಈ ಪುಸ್ತಕವೂ ಇಂತಹ ಅವೈಜ್ಞಾನಿಕ, ತರ್ಕರಹಿತವಾದ ವಿಷಯವನ್ನು ಹೇಳುವಂತಹದೇ ಆಗಿದೆ. ಉಚಿತವಾಗಿ ಎನ್ನುವ ಹೆಸರಿನಲ್ಲಿ, ಮೇಲಧಿಕಾರಿಗಳಿಗೆ ಒಳಗಿನ ವಿಷಯವನ್ನು ಸರಿಯಾಗಿ ತಿಳಿಸದೇ ಹಂಚುವುದು ಆರೋಗ್ಯಕರವಾದ ಬೆಳವಣಿಗೆ ಅಲ್ಲ. ಇದನ್ನು ಮಾಡುತ್ತಿರುವುದು ಕ್ರಿಶ್ಚಿಯನ್ನರು ಮಾತ್ರ ಅಲ್ಲ; ಎಲ್ಲಾ ಧರ್ಮದವರೂ ಮಾಡುತ್ತಾ ಬಂದಿದ್ದಾರೆ. ಯೋಗ, ವ್ಯಾಯಾಮ, ವ್ಯಕ್ತಿತ್ವ ವಿಕಾಸ, ಮನಸ್ಸು ಇತ್ಯಾದಿಗಳ ಜೊತೆ ಆಧ್ಯಾತ್ಮವನ್ನು ತಳಕು ಹಾಕುತ್ತಿರುವ ಅನೇಕ ಪುಸ್ತಕ ನೋಡಿದ್ದೇವೆ. ನಮ್ಮ ಪಠ್ಯ ಪುಸ್ತಕಗಳಲ್ಲಿಯೇ ದೇವರ ಬಗ್ಗೆ, ಅಧ್ಯಾತ್ಮದ ವಿಚಾರಗಳ ಬಗ್ಗೆ ಸಾಕಷ್ಟು ಪಾಠಗಳಿರುತ್ತವೆ.

> **ವಿವೇಕಾನಂದ**
>
> ಈ ಎಲ್ಲ ಕೋಮು ಕುಲ ಸಮನಾಗಿ ಕಂಡ
> ವಿಶ್ವ ಮಾನವ ನೋಡಿ ವಿವೇಕಾನಂದ
> ಇಂಥವನ ಸಚ್ಚರಿತೆ ತಿರುಚುತ್ತ ನೋಡಿ
> ನ್ಯಾಯಕ್ಕೆ ನೀವಿಂದು ಮಸಿ ಬಳಿಯಬೇಡಿ.
>
> **ವಿಡಂಬಾರಿ**

ಆದರೆ ಇಂದು ಅಗತ್ಯವಾಗಿರುವುದು 'ಧರ್ಮ'ಗಳ ಬೆಳವಣಿಗೆಯ ಐತಿಹಾಸಿಕ ವಿಶ್ಲೇಷಣೆ, ಅದು ಯಾವುದೇ ಧರ್ಮದ್ದಿರಲಿ ಅದು ವಿದ್ಯಾರ್ಥಿಗಳಿಗೆ ಅನುಕೂಲ, ಅವಶ್ಯಕ. ಆದರೆ ಇಲ್ಲಿ ವೈಜ್ಞಾನಿಕವಾಗಿ, ವಸ್ತುನಿಷ್ಠತೆ ಬದಲು ಭಾವನಾತ್ಮಕವಾಗಿ ವೈಭವೀಕರಿಸಿ ಹೇಳಲಾಗುತ್ತಿವೆ. ಇದು ನಿಲ್ಲಬೇಕು.

ಬಿಜೆಪಿ ಇಲ್ಲಿ ಈ ಘಟನೆಯನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿದೆ. ಮತಾಂತರ ನಡೆಯುತ್ತದೆ ಎಂದು ಅದು ಯಾವತ್ತೂ ಹೊಡೆಯುವ ಅವರ ಬೊಬ್ಬೆಗೆ ಒಂದಿಷ್ಟು ಜನ ಬೆಂಬಲಿಸಬಹುದು ಎನ್ನುವ ಅಲೋಚನೆ ಅವರದು. ಜಿಲ್ಲೆಯಾದ್ಯಂತ ಗಣನೀಯವಾಗಿ ಶಕ್ತಿ ಕಳೆದುಕೊಂಡಿರುವ ಬಿಜೆಪಿ ಮತ್ತೆ ಅದನ್ನು ಗಳಿಸಿಕೊಳ್ಳಲು ಮತ್ತು ಇನ್ನೊಂದು ವರ್ಷದಲ್ಲಿ ಬರುವ ಚುನಾವಣೆ ತಯಾರಿಗಾಗಿ ಇದನ್ನು ಬಳಸಿಕೊಳ್ಳುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರವೇ ಶಿಕ್ಷಣವನ್ನು ಕೋಮುವಾದಿಗೊಳಿಸುತ್ತಿರುವಾಗ ಇವರು ಇಲ್ಲಿ ಮತಾಂತರದ ಪ್ರಶ್ನೆ ಎತ್ತುತ್ತಿರುವುದರ ವಿಪರ್ಯಾಸವನ್ನು ಅರ್ಥ ಮಾಡಿಕೊಳ್ಳಬೇಕು.

ಹಾಗೆ ನೋಡಿದರೆ ಸರಸ್ವತಿ ವಂದನೆ, ಸಂಸ್ಕೃತ ಕಲಿಕೆ, ವಿವಿಧ ರೀತಿಯ ಹಿಂದೂ ಹಬ್ಬಗಳನ್ನು ಶಾಲಾ ಕಾಲೇಜಿನಲ್ಲಿ ನಡೆಸಬೇಕೆಂದು ಒತ್ತಾಯಿಸುವ ಇವರು, ಪುಸ್ತಕ ಹಂಚಿಕೆಯನ್ನು ಮಾತ್ರ ವಿರೋಧಿಸುವುದೇಕೆ? ಬಹುತೇಕ ಸರ್ಕಾರಿ ಶಾಲೆಗಳಲ್ಲಿ ರಾಷ್ಟ್ರ ನಾಯಕರ ಫೋಟೋ ಬದಲು ಹಿಂದೂ ದೇವರ ಫೋಟೋ ರಾರಾಜಿಸುತ್ತಿಲ್ಲವೇ? ಪ್ರತಿ ಸರ್ಕಾರಿ ಕಛೇರಿ(ಶಾಲೆಯುಲ್ಲೂ ಸಹ), ಪ್ರತಿ ಶುಕ್ರವಾರ ಲಕ್ಷ್ಮೀ ಪೂಜೆ ಮಾಡಿ ಪ್ರಸಾದ ಹಂಚುವುದಿಲ್ಲವೇ? ಅನೇಕ ಶಾಲಾ ಕಾಲೇಜಿನಲ್ಲಿ ಸರಸ್ವತಿ ಪೂಜೆ, ಗಣೇಶನ ಪೂಜೆ ಕೂಡ ಮಾಡುವುದಿಲ್ಲವೆ? ಇದನ್ನೆಲ್ಲ ಬಿಜೆಪಿ ಮತ್ತು ಅವರ ಬಾಲಂಗೋಚಿಗಳು ವಿರೋಧಿಸುತ್ತಾರೆಯೇ? ಎಂದೆಲ್ಲಾ ನಾವು ಪ್ರಶ್ನೆ ಮಾಡಬಹುದು.

ಹಾಗೆ ನೋಡಿದರೆ ಶಿರಸಿಯಲ್ಲಿ ಇವರು ಹೋರಾಟ ಮಾಡಬೇಕಾದ ಸಮಸ್ಯೆಗಳು ಸಾಕಷ್ಟಿದೆ; ಕೇಂದ್ರ ಸರ್ಕಾರದ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣ ನೀತಿಯಿಂದಾಗಿ ಇಂದು ಬಹುತೇಕ ಬಡಜನತೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಬಹುಜನ ವಿರೋಧಿ ಶಿಕ್ಷಣ ನೀತಿಯ ಪರಿಣಾಮವಾಗಿ ಇಂದು ಅನುದಾನದ ಕಡಿತವಾಗುತ್ತಿದೆ.

ಹಾಗಾಗಿ ಶಿಕ್ಷಣ ಕೇಂದ್ರ ವ್ಯಾಪಾರೀ ಕೇಂದ್ರ ಆಗುತ್ತಿದೆ. ಶಿಕ್ಷಣ ಒಂದು ಉದ್ದಿಮೆ ಆಗುತ್ತಿದೆ. ಸಿರ್ಸಿಯಲ್ಲಿಯ ಡೋನೇಷನ್ ಹಾವಳಿಗೆ ಕಲ್ಲಳ್ಳಿಯ ಗಿರೀಶ ಹೆಗಡೆ ಬಲಿ ಆಗಿದ್ದು ಕಣ್ಮುಂದೆ ಇದ... ಮಾರಿಕಾಂಬ ಜ್ಯೂನಿಯರ್ ಕಾಲೇಜನ್ನೆ... ಉದಾಹರಿಸುವುದಾದರೆ ಪದವಿಪೂರ್ವ ಕಾಲೇಜಿ... ಶಿಕ್ಷಕರ ಕೊರತೆ ಇದೆ; 200 ಜನರಿಗೆ ಮಾ... ಪ್ರವೇಶಾವಕಾಶ ಇದೆ. ಖಾಸಗೀ ಕಾಲೇಜಿನಲ್ಲಿ ಹ... ತುಂಬಲಾರದ ಅನೇಕ ಬಡ ಹುಡುಗರು ಬಂ... ಪ್ರವೇಶವಕಾಶ ಇಲ್ಲದೆ ವಾಪಸಾಗುತ್ತಿದ್ದಾ... ಹೈಸ್ಕೂಲುಗಳಿಗೆ ಸರಿಯಾದ ಕೋಣೆ, ಹುಡುಗ... ಕುಳಿತುಕೊಳ್ಳಲು ಆಸನದ ಕೊರತೆ ಇದೆ. ಈ ಬ... ಯಾಕೆ ಬಿಜೆಪಿ ಹೋರಾಟ ಮಾಡುತ್ತಿಲ್ಲ. ಕೃಷ... ನೌಕರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಆ... ಬಿಜೆಪಿಗೆ ಇಂತಹ ಸಮಸ್ಯೆ ಮುಖ್ಯವಾಗಿಲ್ಲವೇಕೆ...

ಇದೇ ಬಿಜೆಪಿಯ ಕಾರ್ಯಕರ್ತರ ಮಕ್ಕ... ಕ್ರಿಶ್ಚಿಯನ್ನರು ನಡೆಸುವ ಶಾಲೆಗಳಿಗೆ ಹೋಗುತ್ತಿದ್ದಾ... ಜಾತಿ-ಧರ್ಮದ ಬೇಧವಿಲ್ಲದೆ ಅವರ ಆಸ್ಪತ್ರೆಗ... ಜನ ಹೋಗುತ್ತಿದ್ದಾರೆ. ಕಾನ್ವೆಂಟಿಗೆ, ಆಸ್ಪತ್ರೆಗೆ ಅಥ... ವಿವಿಧ ತರಬೇತಿ ಸಂಸ್ಥೆಗಳಿಗೆ ಹೋಗಬಹುದಾದ... ಒಂದು ಪುಸ್ತಕ ಹಂಚಿದ್ದು ಮಾತ್ರ ವಿವಾದದ ಕೇ... ಆಗಬೇಕೆ?

ಜಿಲ್ಲೆಯಾದ್ಯಂತ ಶಿಕ್ಷಣದ ವ್ಯಾಪಾರೀಕರ... ಅವೈಜ್ಞಾನಿಕ ಶಿಕ್ಷಣ ನೀತಿಯ ವಿರುದ್ಧ ಎಸ್‌ಎಫ್... ಅಡಿಯಲ್ಲಿ ಅನೇಕ ಹಂತದ ಹೋರಾಟ ನಡೆದ... ನಡೆಯುತ್ತಿದೆ. ಕೇಂದ್ರ ಸರ್ಕಾರದ ಶೈಕ್ಷಣಿಕ ಸಮಸ್ಯೆ... ವಿರುದ್ಧ ವಿದ್ಯಾರ್ಥಿಗಳೆಲ್ಲಾ ಹೋರ... ಮಾಡುತ್ತಿರುವಾಗ; ಒಂದು ಜನಾಂದೋ... ರೂಪಿತವಾಗುತ್ತಿರುವಾಗ ಜನರ ಲಕ್ಷ್ಯವನ್ನು ಬೇ... ಸೆಳೆಯಲು ಬಿಜೆಪಿ ಈ ತಂತ್ರ ಉಪಯೋಗಿಸು...

ಹಂಚಿರುವ ಪುಸ್ತಕ ಅಪಾಯದ್ದಾದರೆ ವಾ... ತರಿಸಿಕೊಳ್ಳುವುದು, ಮುಂದೆ ಹೀಗಾಗದಂತೆ ... ವಹಿಸುವುದು, ಯಾವುದೇ ಧಾರ್ಮಿಕ ವಿಚಾರ... ಶಾಲೆ ಕಾಲೇಜುಗಳಲ್ಲಿ ಹೇಳಲು ಅವ... ಕೊಡದಿರುವಂತೆ ಮಾಡುವ ಮೂಲಕ ಪ್ರಕರಣ... ಕೊನೆಗೊಳಿಸಿ, ಜಾತಿ-ಧರ್ಮದ ಹೆಸರಿನಲ್ಲಿ ಶೈ... ಸಂಸ್ಥೆಯಲ್ಲಿಯೂ ಸಾಮರಸ್ಯವನ್ನು, ಏಕತೆ... ಕೆಡಿಸುವ ಬದಲು ನಿಜವಾದ ಶೈಕ್ಷಣಿಕ ಸಮ... ಗುರುತಿಸಿ ಹೋರಾಟ ನಡೆಸುವ ಕಡೆ ಬಿಜೆಪಿ ... ವಹಿಸಬೇಕು.


ವರದಿ...

ಕಂದಾಚಾರ ತಿರಸ್ಕರಿಸಿ ಜಾತೀಯತೆ ಧಿಕ್ಕರಿಸಿದ ಈ ಮದುವೆಗಳು

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಯುವಜನ ವಿದ್ಯಾರ್ಥಿ ಚಳುವಳಿಯಲ್ಲೀಗ ಮದುವೆಗಳ ಸಂಭ್ರಮ.



ಶಶಿಧರ್ ಕೆ. ಪ್ರಮಿಳ ಕೆ.



ಅಶೋಕ್ ಕೊಂಚಾಡಿ
ಗುಣವತಿ ಎಸ್. ನಾರವಿ

ಹಲವು ವರ್ಷಗಳ ಕಾಲ ವಿದ್ಯಾರ್ಥಿ, ಯುವಜನ, ಕಾರ್ಮಿಕ ಚಳುವಳಿಯಲ್ಲಿ ದುಡಿದ ಯುವ ಸಂಗಾತಿಗಳು ಪರಸ್ಪರ ಒಬ್ಬೊರನ್ನೊಬ್ಬರು ಅರಿತು ಬಾಳ ಸಂಗಾತಿಗಳಾದ ಸಂತಸದ ವಿಚಾರದ ಜೊತೆಗೆ ಜಾತೀಯತೆಯ ಕಂದರವನ್ನು ದಾಟಿ ನಡೆದ ವಿವಾಹ, ಆಡಂಬರ - ಡಂಬಾಚಾರ ಕಂದಾಚಾರ ಕೈಬಿಟ್ಟು ನಡೆದ ಸರಳ ವಿವಾಹ- ಪ್ರೇಮ ವಿವಾಹ ಎಂಬೆಲ್ಲಾ ಹಲವು ಬಗೆಯ ಅಭಿಂದನೆಗೆ ಒಳಗಾದ ಈ ಮದುವೆಗಳು, ನಮ್ಮ ಒಟ್ಟು ಚಳುವಳಿಗೆ ಹೆಮ್ಮೆಯ ವಿಚಾರಗಳಾಗಿವೆ.

ಉಡುಪಿ ಜಿಲ್ಲೆಯ ಚಂದ್ರಶೇಖರ್, ಜಯಲಕ್ಷ್ಮಿ, ಡಿ.ವೈ.ಎಫ್.ಐ ಮುಖಂಡರು ರಾಜ್ಯ ಸಹ ಕಾರ್ಯದರ್ಶಿಗಳೂ ಆದ ಕುಂದಾಪುರದ ಚಂದ್ರಶೇಖರ್.ವಿ ಮತ್ತು ಜಯಲಕ್ಷ್ಮಿ ಇವರ ವಿವಾಹ ಅತ್ಯಂತ ಸರಳ ರೀತಿಯಲ್ಲಿ ಫೆಬ್ರವರಿ 7,2003 ರಂದು ಕುಂದಾಪುರದ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ನಡೆಯಿತು.

ಕೆ. ಪ್ರಮೀಳ ಜೆ.ಎಂ.ಎಸ್ ಮಂಗಳೂರು ಜಿಲ್ಲಾ ಕಾರ್ಯದರ್ಶಿ ಹಾಗೂ ಶಶಿಧರ ಕೆ. ಶಕ್ತಿನಗರ, ಡಿ.ವೈ.ಎಫ್.ಐ ಮಂಗಳೂರು ನಗರ ಕಾರ್ಯದರ್ಶಿ ಇವರ ಮದುವೆ ಮೇ 28,2003 ರಂದು ಮಂಗಳೂರು ನಗರದ ಕುಲಾಲ್ ಭವನದಲ್ಲಿ ನಡೆಯಿತು. ಈ ಅಂತರಜಾತಿಯ ಸರಳ ಪ್ರೇಮ ವಿವಾಹದ ಸಂದರ್ಭದಲ್ಲಿ ಜೆ.ಎಂ.ಎಸ್ ಜಿಲ್ಲಾ ಅಧ್ಯಕ್ಷೆ ಹೇಮಲತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವ ಮಾತನಾಡಿ ಯುವಜೋಡಿಗೆ ಶುಭ ಹಾರೈಸಿದ್ದಾರೆ. ಬಾಯಿಯಲ್ಲಿ ಹೇಳುವ ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡ ಯುವಜೋಡಿಗೆ ಹೇಮಲತಾ ಅಭಿನಂದಿಸಿದರೆ, ಜಾತಿಯತೆಯ ಸಂಕುಚಿತ ಮನೋಭಾವ ದಾಟಿ ಪುರೋಹಿತಶಾಹಿ ಮೂಢ ಆಚರಣೆಗಳನ್ನು ಬಿಟ್ಟು ವಿವಾಹವಾದ ಯುವ ಸಂಗಾತಿಗಳು ಇತರರಿಗೆ ಆದರ್ಶರಾಗಿದ್ದಾರೆಂದು ಬಿ.ಮಾಧವ ಮೆಚ್ಚಿಗೆ ಸೂಚಿಸಿದ್ದರು.

ಡಿ.ವೈ.ಎಫ್.ಐ ಅಶೋಕ್ ಕೊಂಚಾಡಿ, ಗುಣವತಿ ಜಿಲ್ಲಾ ಖಜಾಂಚಿ ರಾಜ್ಯ ಸಮಿತಿ ಸದಸ್ಯರಾದ ಅಶೋಕ್ ಕೊಂಚಾಡಿ ಜೆ.ಎಂ.ಎಸ್ ಬೆಳ್ತಂಗಡಿ ತಾಲ್ಲೂಕು ಉಪಾಧ್ಯಕ್ಷ- ಸಿಐಟಿಯು ತಾ/ ಸಹಕಾರ್ಯದರ್ಶಿಗಳೂ ಆದ ಗುಣವತಿ ಎಸ್.ನಾರವಿ ಇವರ ವಿವಾಹ ಜೂನ್ 8,2003 ರಂದು ಮಂಗಳೂರಿನ 'ಕುಲಾಲ ಭವನ' ದಲ್ಲಿ ನಡೆಯಿತು. ಕೆ.ಆರ್.ಇ.ಸಿ ಯ ಪ್ರಾಧ್ಯಾಪಕರು, ವಿಚಾರವಾದಿಗಳು ರಾಜೇಂದ್ರ ಉಡುಪಿ ಬಿ.ಮಾಧವ ಸಿಐಟಿಯು ಮುಖಂಡರಾದ ಬಿ.ಎಂ.ಭಟ್, ಯಾದವ ಶೆಟ್ಟಿ ಮುಂತಾದ ಸಂಗಾತಿಗಳು ಸಮಾರಂಭದಲ್ಲಿ ಮಾತನಾಡಿದರು.

ವರದಕ್ಷಿಣೆ ಎನ್ನುವ ಸಾಮಾಜಿಕ ಪೀಡೆಯ ವಿರುದ್ಧ ಜಾತೀಯತೆಯ ಗಡಿದಾಟಿ ನಡೆಯುತ್ತಿರುವ ಈ ಪ್ರೇಮವಿವಾಹ, ಸಮಾಜವನ್ನು ಪ್ರಗತಿಪರ ದಾರಿಯಲ್ಲಿ ಕೊಂಡೊಯ್ಯುವ ಒಂದು ಹೆಜ್ಜೆ ಎಂದು ಸಮಾರಂಭದಲ್ಲಿ ಪಾಲ್ಗೊಂಡ ಸಂಗಾತಿಗಳು ಸಂತಸ ವ್ಯಕ್ತಪಡಿಸಿದರು.

ಸುನಿಲ್ ಕುಮಾರ್ ಬಜಾಲ್. ಪ್ರಿಯದರ್ಶಿನಿ.

ಡಿ.ವೈ.ಎಫ್.ಐ ರಾಜ್ಯ ಉಪಾಧ್ಯಕ್ಷ ಸುನಿ... ಕುಮಾರ್ ಬಜಾಲ್, SFI ನ ಮ... ಮುಖಂಡರಾದ ಪ್ರಿಯದರ್ಶಿನಿಯವರ ಮದುವೆ... 4,2003 ರಂದು ಮಂಗಳೂರು ನಗರದಲ್ಲಿ ನಡೆ... ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮ... ಸದಸ್ಯರು, ಜಿಲ್ಲಾ ಕಾರ್ಯದರ್ಶಿಗ... ಕೆ.ಆರ್.ಶ್ರೀಯಾನ್ ಬಿ.ಮಾಧವ, ಡಿ.ವೈ.ಎ... ರಾಜ್ಯ ಅಧ್ಯಕ್ಷರಾದ ಕಾಂ.ಕೆ.ಎನ್.ಉ... ಡಿ.ವೈ.ಎಫ.ಐ ರಾಜ್ಯ ಕಾರ್ಯ... ಕೆ.ಮಹಾಂತೇಶ್ ಮುಂತಾದವರು ಭಾಗ... ಪ್ರೇಮವಿವಾಹವಾಗುತ್ತಿರುವ ಈ ... ಜೋಡಿಯನ್ನು ಅಭಿನಂದಿಸಿದರು.

ಈ ದಂಪತಿಗಳಿಗೆ ಐಕ್ಯರಂಗ ಶುಭಾಶಯ...

ಆರ್. ರಾ...



ಉದಯಕುಮಾರ್ ರೇಣುಕ
ಸುನಿಲ್ ಕುಮಾರ್ ಬಜಾ...

ಆಗಸ್ಟ್ 16-31 ಪ್ರಚಾರಾಂದೋಲನಕ್ಕೆ ಮುನ್ನುಡಿಯಿರಿ

ಜನರ ಸಂಪನ್ಮೂಲಗಳನ್ನು ಲೂಟಿ ಮಾಡುವ ಸರ್ಕಾರ ಕಿತ್ತೊಗೆಯಿರಿ

ಕುಖ್ಯಾತ ಕೈಗಾರಿಕಾ- ನಾಶದ (ಬಂಡವಾಳ ಹಿಂತೆಗೆತ) ಮಂತ್ರಿ ಅರುಣ್ ಶೌರಿ 9 ರಂದು ದೇಶಕ್ಕೆ ಇನ್ನೊಂದು ಶಾಕ್ ಕೊಟ್ಟಿದ್ದಾರೆ. ವಿ.ಎಸ್.ಎನ್.ಎಲ್, ಸಿ.ಎಂ.ಸಿ, ಬಾಲ್ಕೋ, ಐ.ಎಂ.ಪಿ, ಐ.ಪಿ.ಸಿ.ಎಲ್‌ಗಳಲ್ಲಿ ಅಳಿದು-ಉಳಿದಿರುವ ಸರ್ಕಾರಿ ಶೇರುಗಳನ್ನು ಮಾರಿ ಹಾಕುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಈ ನಿರ್ಧಾರ ಪ್ರಕಟಿಸುತ್ತಾ ಅರುಣ್ ಶೌರಿ ಸುಳ್ಳುಗಳ ಸರಮಾಲೆಯನ್ನು ಒಡ್ಡಿದ್ದಾರೆ. (ಜುಲೈ 13, ಇಂಡಿಯನ್ ಎಕ್ಸ್‌ಪ್ರೆಸ್)

ಖಾಸಗೀಕರಣ ಕಂಪನಿಗಳನ್ನು ಉತ್ತಮಪಡಿಸಿದೆ ಎಂದು ಹೇಳುತ್ತಾ ಅವರು ಹರಿಯಬಿಟ್ಟ ಸುಳ್ಳುಗಳು ಹೀಗಿವೆ.

ಪರದೀಪ್ ಫೋಸ್ಫೇಟ್ಸ್ ಉತ್ಪಾದನೆ ಹೆಚ್ಚಿದೆ.


ಬಾಲ್ಕೊ ಕಂಪನಿ ವಿಸ್ತಾರವಾಗಿದೆ.

ಐಪಿಸಿಎಲ್ ಲಾಭ ಹೆಚ್ಚಿದೆ

ಖಾಸಗೀಕರಣಗೊಂಡ ಕಂಪನಿಗಳ ಕಾರ್ಮಿಕರು ಉದ್ಯೋಗ ಕಳೆದುಕೊಂಡಿಲ್ಲ ಮಾತ್ರವಲ್ಲ. ಅವರ ಸ್ಥಿತಿ ಉತ್ತಮಗೊಂಡಿದೆ.

ಪರದೀಪ್ ಕಾರ್ಮಿಕರ ವೇತನ ಶೇಕಡಾ 25 ರಷ್ಟು ಹೆಚ್ಚಿದೆ.

ಮಾಡರ್ನ್ ಫಂಡ್ ಕಾರ್ಮಿಕರು ರೂ.1800 ಪ್ರತಿ ತಿಂಗಳು ಹೆಚ್ಚು ವೇತನ ಪಡೆಯುತ್ತಿದ್ದಾರೆ.



ಸುಳ್ಳುಗಳ ಸರಮಾಲೆ

ಖಾಸಗೀಕರಣಗೊಂಡ ಕಂಪನಿಗಳ ಪರಿಸ್ಥಿತಿ ಅಧ್ಯಯನ ಮಾಡಲು ಪ್ರಧಾನಿ ನೇಮಿಸಿದ ಸಮಿತಿಯ ವರದಿ ಇದರ ತದ್ವಿರುದ್ಧ ಹೇಳುತ್ತದೆ. (ಮೇ 27, ಟೈಮ್ಸ್ ಆಫ್ ಇಂಡಿಯಾ ವರದಿ) ಈ ವರದಿ ಪ್ರಕಾರ ಬಾಲ್ಕೊ ಮ್ಯಾನೇಜ್‌ಮೆಂಟ್ ವಹಿಸಿಕೊಂಡ ಸ್ಟೇರ್‌ಲೈಟ್ ಕಾರ್ಮಿಕರ ಮೇಲೆ ನಿವೃತ್ತಿ ಸ್ಕೀಮ್ ತೆಗೆದುಕೊಳ್ಳಲು ಒತ್ತಡ ಹೇರುತ್ತಿದೆ. ಅಲ್ಲದೆ ನಿವೃತ್ತಿ ವೇತನವನ್ನು ಇದು ಕಂತುಗಳಲ್ಲಿ ಕೊಡುತ್ತಿದೆ. ಈ ಸ್ಕೀಮ್ ತಿರಸ್ಕರಿಸಿದವರನ್ನು ವರ್ಗ ಮಾಡಿ ಉಪಟಳ ಕೊಡುತ್ತಿದೆ. ಮಾಡರ್ನ್ ಫಂಡ್ ಮ್ಯಾನೇಜ್‌ಮೆಂಟ್ ವಹಿಸಿಕೊಂಡ ಹಿಂದೂಸ್ತಾನ್ ಲೀವರ್ ಕಾರ್ಮಿಕರ ಸಂಖ್ಯೆ ಎರಡೇ ವರ್ಷಗಳಲ್ಲಿ 1650 ರಿಂದ 850 ಕ್ಕೆ ಇಳಿದಿದೆ. ಫರಿದಾಬಾದ್ ಘಟಕವನ್ನು ಈಗಾಗಲೇ ಮುಚ್ಚಿದೆ. ದೆಹಲಿ ಘಟಕದ ಯಂತ್ರಗಳನ್ನು ಜಯಪುರ್‌ಗೆ ಸ್ಥಳಾಂತರಿಸಿದೆ.

ಸ್ಟೇರ್‌ಲೈಟ್ - ಬಾಲ್ಕೊ ಅವಾಂತರಗಳು

ಸಿಐಟಿಯು ಮತ್ತಿತರ ಟ್ರೇಡ್ ಯೂನಿಯನ್‌ಗಳು ಬಾಲ್ಕೊ ಕಾರ್ಮಿಕರನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ಇನ್ನಷ್ಟು ವಿವರಗಳನ್ನು ಕೊಟ್ಟಿವೆ. ಕಡ್ಡಾಯ ನಿವೃತ್ತಿ ಯೋಜನೆಯನ್ನು ಕಾರ್ಮಿಕರ ಮೇಲೆ ಹೇರುವುದಲ್ಲದೆ, ಹಿಂದೆ ಇದ್ದ ಹಲವಾರು ಸವಲತ್ತುಗಳನ್ನು ಕಡಿತಗೊಳಿಸಿದೆ. ವೈದ್ಯಕೀಯ ಸೌಲಭ್ಯ, ಕ್ಯಾಂಟೀನ್‌ಗಳನ್ನು ನಿಲ್ಲಿಸಲಾಗಿದೆ. ಕಾರ್ಮಿಕರನ್ನು ನಡೆಸಿಕೊಳ್ಳುವ ಬಗ್ಗೆ ಇದ್ದ ಹಲವಾರು ಒಪ್ಪಂದಗಳನ್ನು ಬಹಿರಂಗವಾಗಿ ಉಲ್ಲಂಘಿಸಲಾಗುತ್ತಿದೆ. ಬಾಲ್ಕೊ ಮಾರಾಟದ ಒಪ್ಪಂದ ಮತ್ತು ಕೋರ್ಟಿನ ಆಜ್ಞೆಯನ್ನು ಗಾಳಿಗೆ ತೂರಿ ಸ್ಟೇರ್‌ಲೈಟ್ ಮ್ಯಾನೇಜ್‌ಮೆಂಟ್ 1400 ಕಾರ್ಮಿಕರನ್ನು ವಜಾ ಮಾಡಿದೆ. ಸ್ಟೇರ್‌ಲೈಟ್ ಇನ್ನೊಂದು ಹಿಂದೂಸ್ತಾನ್ ಝಿಂಕ್ ಲಿಮಿಡೆಡನ್ನು ಬಾಲ್ಕೊ ಜತೆ ಸೇರಿಸುವ ಯೋಚನೆ ಸಹ ಮಾಡುತ್ತಿದೆ. ರಿಲೆಯನ್ಸ್ ವಹಿಸಿಕೊಂಡಿರುವ ಐಪಿಸಿಎಲ್‌ನಲ್ಲಿ ಶೇಕಡಾ 12 ರಷ್ಟು ಕಾರ್ಮಿಕರ ಕಡಿತ ಮಾಡಲು ಆಗಲೇ ನಿರ್ಧರಿಸಿದೆ.

ಮಾಡರ್ನ್ ಫಂಡ್ ಕಸಾಯಿಖಾನೆಯಲ್ಲಿ

ಮಾಡರ್ನ್ ಫಂಡ್ ಖಾಸಗೀಕರಿಸಿ ಕೇವಲ ಒಂದು ವರ್ಷದ ಒಳಗೆ ಬಿಐಎಫ್‌ಆರ್ ಮುಂದೆ ನಿಲ್ಲಿಸಲಾಗಿದೆ. ಪುನರುಜ್ಜೀವನಗೊಳಿಸಲಾದ ಕೈಗಾರಿಕೆಯನ್ನು ಬಿಐಎಫ್‌ಆರ್ ಮುಂದೆ ನಿಲ್ಲಿಸಲಾಗುತ್ತಿದೆ. ಮಾಡರ್ನ್ ಫಂಡ್ ವಹಿಸಿಕೊಂಡ ಅಮೇರಿಕನ್ ಕಂಪನಿ ಯೂನಿಲಿವರ್ (ಹಿಂದುಸ್ತಾನ್ ಲೀವರ ಮೂಲಕ) ಯ ಮ್ಯಾನೇಜ್‌ಮೆಂಟ್‌ನ ದಕ್ಷತೆ ಇದರಿಂದ ಗೊತ್ತಾಗುತ್ತದೆ. ಚೆನ್ನಾಗಿ ನಡೆಯುತ್ತಿದ್ದ ಮಾಡರ್ನ್ ಫಂಡ್ಸ್ ಬಿಐಎಫ್‌ಆರ್ ಎಂಬ ಕಸಾಯಿಖಾನೆಯಲ್ಲಿ ನಿಂತಿದೆ.

ಬಾಲ್ಕೊದ ಖಾಸಗೀಕರಣದ ಎರಡು ವರ್ಷಗಳ ನಂತರವೂ ಯಾವುದೇ ರೀತಿಯ ತಂತ್ರಜ್ಞಾನ ಉತ್ತಮಪಡಿಸುವುದಾಗಲಿ, ಆಧುನೀಕರಣವಾಗಲಿ ಆಗಿಲ್ಲ. ಚೆನ್ನಾಗಿ ನಡೆಯುತ್ತಿದ್ದ ಕೆಲವು ಬಾಲ್ಕೊ ಡಿವಿಜನ್‌ಗಳನ್ನು ಮುಚ್ಚಲಾಗಿದೆ. ಇದಕ್ಕೆ ಕಾರಣ ಸ್ಟೇರ್‌ಲೈಟ್‌ನ ಇತರ ಫ್ಯಾಕ್ಟರಿಗಳ ಕೆಲವು ಅಲ್ಯೂಮಿನಿಯಂ ಉತ್ಪನ್ನಗಳಿಗೆ ಇದರಿಂದ ತೊಂದರೆಯಾಗುತ್ತಿತ್ತಂತೆ. ಅಂದರೆ ಯಾವ ಉತ್ಪನ್ನಗಳು ಎಷ್ಟು ಎಂದು ದೇಶದ ಅಗತ್ಯದ ಮೇಲೆ ನಿರ್ಧರಿಸುವುದಿಲ್ಲ. ಅದರಿಂದ ಹೆಚ್ಚು ಲಾಭ ಬರುತ್ತೋ, ಇಲ್ಲವೋ ಎಂದು ಅದನ್ನು ನಿರ್ಧರಿಸುತ್ತದೆ.


ಹೆಚ್.ಪಿ.ಸಿ.ಎಲ್.

ಕಾಮಧೇನುಗಳನ್ನು ಕೊಂದವರು

ಖಾಸಗೀಕರಣದಿಂದ ಬಂದ ಆದಾಯವನ್ನು ಸಾಮಾಜಿಕ ಮೂಲರಚನೆಗಳಿಗಾಗಿ ವಿನಿಯೋಗಿಸಲಾಗುವುದು ಎಂಬುದು ಸರ್ಕಾರ ಹೇಳುತ್ತಾ ಬಂದಿರುವ ಇನ್ನೊಂದು ಸುಳ್ಳುಗಳಲ್ಲಿ ಒಂದು. 1991 ರಿಂದ 2000 ರವರೆಗೆ ಖಾಸಗೀಕರಣದಿಂದ ಬಂದ 26,148 ಕೋಟಿ ರೂ.ಗಳಲ್ಲಿ ಒಂದು ಪೈಸೆ ಸಹ ಈ ರೀತಿ ವಿನಿಯೋಗಿಸಲಾಗಿಲ್ಲ. ಸರ್ಕಾರದ ದುಂದುವೆಚ್ಚ ತೂಗಿಸಲು ಇದು ಹೋಗಿದೆ.

ಸಾರ್ವಜನಿಕ ಕ್ಷೇತ್ರದ ಘಟಕಗಳಲ್ಲಿ ಸರ್ಕಾರಿ ಬಂಡವಾಳ ಸತ್ತ ಬಂಡವಾಳ ಮತ್ತು ನಷ್ಟವೇ ಎಂದು ಸರ್ಕಾರ ಹೇಳುತ್ತದೆ. ಖಾಸಗೀಕರಿಸಲಾದ ಎಲ್ಲಾ ಇಂತಹ ಫ್ಯಾಕ್ಟರಿಗಳು ಸರ್ಕಾರದ ಖಜಾನೆಗೆ ಉತ್ತಮ ಕೊಡುಗೆ ಕೊಟ್ಟಿದೆ. ಸರ್ಕಾರ ಖಾಸಗೀಕರಿಸಲು ಪ್ರಯತ್ನಿಸುತ್ತಿರುವ ಹೆಚ್.ಪಿ.ಸಿ.ಎಲ್, ಬಿಪಿಸಿಎಲ್‌ಗಳ ಕೊಡುಗೆಯನ್ನೇ ನೋಡೋಣ.



ಬಾಲ್ಕೋ ಕಾರ್ಮಿಕರ ಧರಣಿ

ಇವುಗಳ ಒಟ್ಟು ವಹಿವಾಟು 87,580 ಕೋಟಿ ರೂ. ಆದರೆ, ಅದು ಸರ್ಕಾರಕ್ಕೆ ಕೊಡುವ ಎಕ್ಸೈಜ್ ಸುಂಕ 21,759 ಕೊಟಿ ರೂ. ರಿಲೆಯನ್ಸ್, ಗ್ರಾಸಿಮ್, ಬಜಾಲ್ ಲಿಟೊ, ಟಾಟಾ ಸ್ಟೀಲ್, ಸ್ಟೆರ್‌ಲೈಟ್,ಕೋಲ್ಗೇಟ್, ಎಲ್ ಅಂಡ್ ಟಿ, ರೇಮಂಡ್ಸ್ ಮತ್ತು ಗ್ಲೇಕ್ಸೊ ಇವೆಲ್ಲದರ ಒಟ್ಟು ವಹಿವಾಟು 88,157 ಕೋಟಿ ರೂ.ಗಳು. ತೈಲ ಕಂಪನಿ ಹೆಚ್‌ಪಿಸಿಎಲ್, ಬಿಪಿಸಿಎಲ್‌ಗಳ ಒಟ್ಟು ವಹಿವಾಟಿನಷ್ಟು.

ಆದರೆ ಈ ದೈತ್ಯ ಖಾಸಗಿ ಕಂಪನಿಗಳ ಒಟ್ಟು ಕೊಟ್ಟಿರುವ ಎಕ್ಸೈಸ್ ಸುಂಕ 6,840 ಕೋಟಿ ರೂ ಅಷ್ಟೆ.

ಇದು ಮಾತ್ರವಲ್ಲ ಈ ಉತ್ತಮ ಕಂಪನಿಗಳು ಸರ್ಕಾರಿ ಖಜಾನೆಗೆ ಕೊಡುಗೆ ಹೆಚ್ಚುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಇವುಗಳ ಕೊಡುಗೆ 5 ಪಟ್ಟು ಆಗಿದೆ. ಇದರಲ್ಲಿ ಖಾಸಗೀಕರಿಸಿದಾಗ ಬರುವ ಆಧಾಯ ಈ ಎಲ್ಲಾ ಕೊಡುಗೆಗಳಿಗೆ ಹೋಲಿಸಿದರೆ ಒಂದು ಸಣ್ಣ ಭಾಗ ಮಾತ್ರ.

ಆದ್ದರಿಂದ ಖಾಸಗೀಕರಣ ಭಾರತದ ಜನತೆಯ ಆಸ್ತಿಯ ಲೂಟಿ. ಇದು ಯಾವುದೇ ರೀತಿಯಲ್ಲಿ ಜನತೆಗೆ ಸಹಾಯಕಾರಿಯಾಗಿಲ್ಲ. ತನ್ನ ದಿನದ ಖರ್ಚಿಗೆ ರೈತ ತನ್ನ ಶಾಶ್ವತ ಆಸ್ತಿ- ಹೊಲವನ್ನು ಮಾರಿದಂತೆ. ಇದರರ್ಥ ಮುಂದೆ ಕಾದಿರುವುದು ಕಂಗಾಲು ಸ್ಥಿತಿ ಮಾತ್ರ.

ಇದನ್ನು ಮುಂಬರುವ ಅಗಸ್ಟ್‌ನ ಪ್ರಚಾರಾಂದೋಲನ ಬಯಲಿಗೆಳೆಯಬೇಕು.

ಆದರೆ ರಂಗೋಲಿಯಡಿ ತೂರುವ ಪ್ರಯತ್ನದ ಬಗ್ಗೆ ಎಚ್ಚರಬೇಕು.

ಇರಾಕ್‌ಗೆ ಭಾರತದ ಸೈನ್ಯ ಇಲ್ಲ!

ವಾಜಪೇಯಿ ಸರ್ಕಾರ ಕೊನೆಗೂ ಇರಾಕ್‌ಗೆ ಭಾರತದ ಸೈನ್ಯ ಕಳಿಸದಿರಲು ನಿರ್ಧರಿಸಿದೆ. ಈ ನಿರ್ಧಾರ ಮೂರು ತಿಂಗಳ ಗೊಂದಲ, ಕಪಟನಾಟಕದ ನಂತರ ಬಂದಿದೆ. ಮೊದಮೊದಲಿಗೆ ಸರ್ಕಾರದ ಹಲವು ಪ್ರಭಾವಶಾಲಿ ವ್ಯಕ್ತಿ ಗುಂಪುಗಳು ಸೈನ್ಯವನ್ನು ಇರಾಕ್‌ಗೆ ಕಳಿಸುವುದರ ಪರವಾಗಿದ್ದರು. ಒಂದು ಡಿವಿಜನ್‌ನಷ್ಟು ಸೈನ್ಯವನ್ನು ಕಳಿಸಲು ಎಲ್ಲಾ ಪೂರ್ವ ತಯಾರಿ ನಡೆಸಲಾಗಿತ್ತು. ತೀವ್ರ ಸಾರ್ವಜನಿಕ ಒತ್ತಡದಿಂದ ಮಾತ್ರವೇ ಇದನ್ನು ತಡೆಯಲು ಸಾಧ್ಯವಾಗಿದೆ. ಎಲ್ಲಾ ವಿರೋಧ ಪಕ್ಷಗಳು ಸಂಘಟಿತವಾಗಿ ದೃಢವಾಗಿ ಸರ್ಕಾರದ ಈ ಪ್ರಯತ್ನವನ್ನು ವಿರೋಧಿಸಿದ್ದರಿಂದ ಇದು ಸಾಧ್ಯವಾಗಿದೆ. ಇರಾಕ್‌ನಲ್ಲಿ ಅಮೇರಿಕದ ಅತಿಕ್ರಮಣವನ್ನು ಪರೋಕ್ಷವಾಗಿ ಒಪ್ಪಿಕೊಳ್ಳುವ ಈ ಪ್ರಸ್ತಾಪವನ್ನು ಇಡೀ ವಿರೋಧ ಪಕ್ಷವೇ ತಿರಸ್ಕರಿಸಿತ್ತು. ಸಿಪಿಐ(ಎಂ) ಮತ್ತು ಎಡಪಕ್ಷಗಳು ಇರಾಕ್‌ನ್ನು ಪುನಃ ವಸಾಹತು ಆಗಿಸುವ ದುಷ್ಟಕ್ರಿಯೆಯಲ್ಲಿ ಭಾರಾತ ಭಾಗಿಯಾಗುವುದನ್ನು ಬಲವಾಗಿ ವಿರೋಧಿಸಿತ್ತು.

ಇದು ಉತ್ತಮ ಬೆಳವಣಿಗೆಯಾದರೂ, ಭದ್ರತೆ ಬಗೆಗಿನ ಕ್ಯಾಬಿನೆಟ್ ಕಮಿಟಿ ವಿಶ್ವಸಂಸ್ಥೆ ಈ ಬಗ್ಗೆ ನಿರ್ಧರಿಸಿದರೆ ಭಾರತದ ಸೈನ್ಯ ಕಳಿಸುವ ಬಗ್ಗೆ ಪುನರ್ವಿಚಾರ ಮಾಡುವುದಾಗಿ ಹೇಳಿದೆ. ಇದು ಆತಂಕಕಾರಿ. ಇರಾಕ್ ಜನತೆ ಅಮೇರಿಕದ ಅತಿಕ್ರಮಣಕ್ಕೆ ತೀವ್ರ ಪ್ರತಿರೋಧ ಒಡ್ಡಲು ಆರಂಭಿಸಿದ್ದಾರೆ. ಮೇ 12 ರಿಂದ ಸುಮಾರು 35 ಅಮೇರಿಕನ್ ಸೈನಿಕರು ಸತ್ತಿದ್ದಾರೆ. ಶತಪ್ರಯತ್ನದ ನಂತರವೂ ಅಧ್ಯಕ್ಷ ಬುಶ್‌ಗೆ 12 ದೇಶಗಳಿಂದ 15 ಸಾವಿರಕ್ಕಿಂತ ಹೆಚ್ಚು ಸೈನ್ಯ ತರಿಸಲು ಸಾಧ್ಯವಾಗಿಲ್ಲ. ಈ ಪರಿಸ್ಥಿತಿಯಲ್ಲಿ ಸುಮಾರು ಒಂದುವರೆ ಲಕ್ಷ ಅಮೇರಿಕನ್ ಸೈನಿಕರನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಆದ್ದರಿಂದಾಗಿಯೇ ಭಾರತದ ದೊಡ್ಡ ಸೈನ್ಯ ಡಿವಿಜನ್ ತರಿಸಿಕೊಳ್ಳಲು ಅಮೇರಿಕನ್ ಸರ್ಕಾರ ಬಹಳ ಉತ್ಸುಕವಾಗಿತ್ತು.

ಇರಾಕ್‌ಗೆ ಬೇರೆ ದೇಶಗಳ ಸೈನ್ಯವನ್ನು ತರಿಸಿಕೊಳ್ಳಲು ಅಧ್ಯಕ್ಷ ಬುಷ್ ಪ್ರಯತ್ನ ಮುಂದುವರೆಸುತ್ತಾರೆ. ಒಂದು ಹೊಸ ಮಧ್ಯಂತರ ಗವರ್ನಿಂಗ್ ಕೌನ್ಸಿಲ್ಲನ್ನು ರಚಿಸಿದೆ. ಅದರಲ್ಲಿ ಹೆಚ್ಚಾಗಿ ಅಮೇರಿಕದ ಪರವಾಗಿರುವ ಅವರ ದುಡ್ಡಲ್ಲೇ ಬದುಕುತ್ತಿರುವ ಇರಾಕಿ ಪಕ್ಷಗಳಿವೆ. ಕೌನ್ಸಿಲ್‌ನ ಉದ್ಘಾಟನೆಯಲ್ಲಿ ಭಾಗವಹಿಸಿ, ವಿಶ್ವಸಂಸ್ಥೆ ವಿಶೇಷ ಪ್ರತಿನಿಧಿ ಒಂದು ರೀತಿಯಲ್ಲಿ ಅದನ್ನು ಮಾನ್ಯ ಮಾಡಿದಂತಾಗಿದೆ. ಈ ಹೊಸ ಕೌನ್ಸಿಲ್ ವಿಶ್ವಸಂಸ್ಥೆಗೆ ಹೊಸ ಪ್ರತಿನಿಧಿ ಮಂಡಲ ಕಳಿಸಲು ನಿರ್ಧರಿಸಿದೆ. ಈ ಕೌನ್ಸಿಲ್‌ನ ಮುಖವಾಡದ ಜತೆಗೆ ಇರಾಕ್‌ನಲ್ಲಿ ಪರಿಸ್ಥಿತಿ 'ಸುಭದ್ರ' ಗೊಳಿಸಲು ವಿಶ್ವಸಂಸ್ಥೆ ಪಡೆಗಳನ್ನು ಕಳಿಸಬೇಕು ಎಂಬ ಬೇಡಿಕೆ ಸಲ್ಲಿಸಬಹುದು. ವಿಶ್ವಸಂಸ್ಥೆ ಇದಕ್ಕೆ ಒಪ್ಪಿದರೂ ಆಶ್ಚರ್ಯವಿಲ್ಲ.

ಆದ್ದರಿಂದ ಯಾವುದೇ ಹೊಸ ನೆಪವೊಡ್ಡಿ ಭಾರತ ಸರ್ಕಾರ ಸೈನ್ಯದ ತುಕಡಿಯನ್ನು ಇರಾಕ್‌ಗೆ ಕಳಿಸಿಕೊಡದಂತೆ ಎಚ್ಚರ ವಹಿಸಬೇಕಾಗಿದೆ. ಅಧ್ಯಕ್ಷ ಬುಷ್ ಮತ್ತು ಭಾರತ ಸರ್ಕಾರ ರಂಗೋಲಿಯಡಿಯಲ್ಲಿ ತೂರುವ ಪ್ರಯತ್ನ ನಡೆಸಲಿವೆ. ವಿಶ್ವಸಂಸ್ಥೆಯ ಒಪ್ಪಿಗೆ ಪಡೆದರೂ, ಯಾವುದೇ ದೇಶದ ಸೈನ್ಯ ಇರಾಕ್‌ನಲ್ಲಿ ಅಮೇರಿಕನ್ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದನ್ನು ಆಗಗೊಡದಂತೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪೂರ್ಣ ಎಚ್ಚರದಿಂದಿರಬೇಕು. ಅಮೇರಿಕಾದ ಅಪರಾಧಗಳಿಗೆ, ಭಾರತದ ಸೈನಿಕರು ಬಲಿಪಶುಗಳಾಗದಂತೆ ಎಚ್ಚರವಹಿಸಬೇಕು.

ವಿನಾಶಕಾರಿ

ಇಡೀ ವಿದ್ಯುತ್ ಕ್ಷೇತ್ರವನ್ನು
ಸರ್ಕಾರ, ಅದರ ಜಾರಿಗೆ ಅ
ಮಸೂದೆಯನ್ನು ಅಂಗೀಕರಿಸಿದೆ.
ದಮನಖೋರ ಕಾಯ್ದೆಯ ಜ
ವಿದ್ಯುತ್ ಕ್ಷೇತ್ರದಲ್ಲಿನ ಸಮಸ
ಕುರಿತ

ವಿದ್ಯುತ್ತನ್ನು ನಾವು ದಿನನಿತ್ಯ ಹತ್ತು ಹಲವು ಬಗೆಯಲ್ಲಿ ಬಳಸುತ್ತೇವೆ. ಅದನ್ನು ಉಪಯೋಗಿಸುವಾಗ ನಾವು ತೋರಬಹುದಾದ ಯಾವುದೇ ರೀತಿಯ ಅಜಾಗರೂಕತೆ ಎಂತಹ ವಿಪತ್ತನ್ನು ತರಬಲ್ಲದು ಎಂಬುದರ ಅರಿವು ನಮಗಿದೆ. ಆದರೆ ಇಂದು ವಿದ್ಯುತ್ ಕ್ಷೇತ್ರವನ್ನು ಯಾವುದೇ ಜಾಗರೂಕತೆಯಿಲ್ಲದೆ ನಿಭಾಯಿಸಲು ಹೊರಟಿರುವ ಕೇಂದ್ರ ಮತ್ತು ಕೆಲ ರಾಜ್ಯಗಳ ಆಳುವ ಜನರ ಕ್ರಮಗಳಿಂದಾಗಿ ದುಷ್ಪರಿಣಾಮಗಳ ಸರಮಾಲೆಯೇ ಸಂಭವಿಸಲಿದೆ.

ವ್ಯವಸ್ಥೆಯತ್ತ ಹಿನ್ನೋಟ.


ಇಂದಿನ ಜಗತ್ತಿನಲ್ಲಿ ತಕ್ಕಮಟ್ಟಿನ ಜೀವನ ನಿರ್ವಹಣೆಗೆ ವಿದ್ಯುತ್‌ನ ಸಮರ್ಪಕ ಲಭ್ಯತೆ ಅತ್ಯಂತ ಅವಶ್ಯಕ. ನೂರು ಕೋಟಿಗೂ ಮಿಕ್ಕಿ ಜನಸಂಖ್ಯೆಯುಳ್ಳ ಭಾರತದಂತಹ ದೇಶದಲ್ಲಂತೂ, ವಿದ್ಯುತ್ತನ್ನು ಸುಲಭಬೆಲೆಗೆ ಜನರಿಗೆ ಪೂರೈಸುವತ್ತ ಪ್ರಯತ್ನಶೀಲತೆ ಅತ್ಯಗತ್ಯ. ಈ ಸೌಲಭ್ಯ ಕಲ್ಪಿಸುವ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳದ್ದಾಗಿರಬೇಕು. ಎಲ್ಲರಿಗೂ ವಿದ್ಯುತ್ ಒದಗಿಸುವ ಸಲುವಾಗಿ ವಿದ್ಯುತ್ ಕ್ಷೇತ್ರವನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಲು ಬೇಕಾದ ಮೂಲಸಾಧನಗಳು ದೇಶದಲ್ಲಿ ವಿಪುಲವಾಗಿವೆ. ಜಲವಿದ್ಯುತ್ ಮೂಲಗಳು, ಕಲ್ಲಿದ್ದಲು, ಅಗ್ನೈಟ್, ನೈಸರ್ಗಿಕ ಅನಿಲ ಮುಂತಾದವುಗಳ ಲಭ್ಯತೆ ಹೇರಳವಾಗಿದೆ.

ನಮ್ಮಲ್ಲಿರುವ ಅಣುವಿದ್ಯುತ್ ಸ್ಥಾವರಗಳು ಮತ್ತು ವಿದ್ಯುತ್ ಉತ್ಪಾದನಾ ಯಂತ್ರಗಳನ್ನು ತಯಾರಿಸುವ ಕೈಗಾರಿಕೆಗಳು ವಿಶ್ವದರ್ಜೆಗೆ ಸಮನಾದವು. ಉತ್ಪಾದನಾ ವೆಚ್ಚವೂ ತುಲನಾತ್ಮಕವಾಗಿ ನಮ್ಮಲ್ಲಿ ಕಡಿಮೆಯೇ. ಅತ್ಯಂತ ಕುಶಲ ಎಂಜಿನಿಯರುಗಳು, ಅನುಭವೀ ತಂತ್ರಜ್ಞರು ಮತ್ತಿತರ ಪರಿಣಿತರಲ್ಲದೆ ನುರಿತ ಕೆಲಸಗಾರರ ದೊಡ್ಡ ಪಡೆಯೇ ನಮ್ಮಲ್ಲಿದೆ. ಅವರೇ ಒಂದು ದೊಡ್ಡ ಆಸ್ತಿ ನಮಗೆ. ಸಹಜವಾಗಿಯೇ, ಯೋಜನಾಬದ್ಧತೆ ಮತ್ತು ಎಚ್ಚರಿಕೆಯಿಂದ ವಿದ್ಯುತ್ ಕ್ಷೇತ್ರವನ್ನು ನಿರ್ವಹಿಸುವುದರ ಮೂಲಕ ನಾವು,'ಎಲ್ಲರಿಗೂ ವಿದ್ಯುತ್ತು ; ಬೇಕೆಂದಾಗ ವಿದ್ಯುತ್ತು; ಅನಿರ್ಭಾದಿತ ವಿದ್ಯುತ್ತು ಮತ್ತು ಕಡಿಮೆ ವೆಚ್ಚದಲ್ಲಿ ವಿದ್ಯುತ್ತು ಒದಗಿಸುವ ನಮ್ಮ ರಾಷ್ಟ್ರೀಯ ಗುರಿಯನ್ನು ನಿಶ್ಚಯವಾಗಿಯೂ ಸಾಧಿಸಬಹುದು. ಆದರೆ ಕೊರತೆ ಇರುವುದೇ ರಾಜಕೀಯ ಇಚ್ಛಾಶಕ್ತಿಯಲ್ಲಿ. ಬದಲಾಗಿ ಇಂದು ನಮ್ಮನ್ನಾಳುವ ಜನ ಈ ಗುರಿಯನ್ನು 'ಯಾರು ಬಳಸುತ್ತಾರೋ ಅವರು ಬೆಲೆ ತೆರಲೇಬೇಕು ಎಂಬ ನಿಟ್ಟಿನಲ್ಲಿ ಬದಲಿಸಲು ಹೊರಟಿದ್ದಾರೆ. ಅದರರ್ಥ, ಯಾರು ಆರ್ಥಿಕವಾಗಿ ಶಕ್ತರೋ ಅವರಿಗೆ ಮಾತ್ರ ವಿದ್ಯುತ್ತು ಲಭ್ಯ.

ಪ್ರಾರಂಭದಿಂದಲೂ ನಮ್ಮ ಯೋಜನೆಗಳ ಶಿಲ್ಪಿಗಳು ವಿದ್ಯುತ್ ಉತ್ಪಾದನೆಯನ್ನು ಆದಷ್ಟು ಕಡಿಮೆ ಕಾಲಾವಧಿಯಲ್ಲಿ ವಿಸ್ತರಿಸಿ, ಸ್ವಾವಲಂಬನೆಯ ಪ್ರಗತಿಗೆ ಅನುವು ಮಾಡಿಕೊಡುವ ಆಶಯಗಳನ್ನು ಮೈಗೂಡಿಸಿಕೊಂಡಿದ್ದರು. ಈ ಉದ್ದೇಶದ ಈಡೇರಿಕೆಯ ಸಲುವಾಗಿಯೇ ಅತ್ಯಾವಶ್ಯಕವಾದ ಕಾನೂನಿನ ಚೌಕಟ್ಟುಗಳನ್ನು ಮತ್ತು ಸಾಂಸ್ಥಿಕ ವ್ಯವಸ್ಥೆಗಳನ್ನು ರೂಪಿಸಲಾಯಿತು. ವಿದ್ಯುತ್ (ಸರಬರಾಜು) ಕಾಯಿದೆ, ಕೇಂದ್ರಿಯ ವಿದ್ಯುತ್ ಪ್ರಾಧಿಕಾರ, ಪ್ರಾದೇಶಿಕ ಹಾಗೂ ರಾಜ್ಯ ವಿದ್ಯುತ್ ಮಂಡಳಿಗಳು ಇದರಿಂದಾಗಿ ಮೂಡಿ ಬಂದವು. ಕೆಲವು ಪಂಡಿತರ ಪ್ರಕಾರ ಈ ವ್ಯವಸ್ಥೆಯಲ್ಲಿ ಲೋಪದೋಷಗಳಿರಬಹುದು. ಆದರೆ ಈ ವ್ಯವಸ್ಥೆ ಹೆಚ್ಚುಕಡಿಮೆ ಸುಸೂತ್ರವಾಗಿಯೆ ನಡೆದು ದೇಶದ ಪ್ರಗತಿಗೆ ಪೂರಕವಾಗಿದೆ ಎಂಬುದು ಸತ್ಯ.

ಯಶಸ್ಸು

ವಿದ್ಯುತ್ ಕ್ಷೇತ್ರ ವಾರ್ಷಿಕ ಶೇ. 7ರ ದರದಲ್ಲಿ ಅಭಿವೃದ್ಧಿಕಂಡಿದೆ. ನಮ್ಮ ಕೃಷಿಕರಿಗೆ ವಿದ್ಯುತ್ತನ್ನು ಅಲ್ಪದರದಲ್ಲಿ ಅಥವಾ ಉಚಿತವಾಗಿಯೇ ಒದಗಿಸಿದ್ದರಿಂದಾಗಿ ದೇಶದಲ್ಲಿ ಹಸಿರುಕ್ರಾಂತಿ ಯಶಸ್ವಿಯಾಯಿತು. ಆಹಾರದಲ್ಲಿ ಸ್ವಾವಲಂಬನೆ ಸಾಧ್ಯವಾಯಿತು. ನಮ್ಮದೆ ಆದ ಕೈಗಾರಿಕಾ ನೆಲೆಗಳನ್ನು ಸ್ಥಾಪಿಸಲು ನಾವು ಶಕ್ತರಾದೆವು. ಅಲ್ಲಲ್ಲಿ



ಕುಂದುಕೊರತೆಗಳಿದ್ದಾಗ್ಯೂ ಸಹ, ಈ ವ್ಯವಸ್ಥೆಯ ಯಶಸ್ಸನ್ನು 1991ರ ವರೆಗೆ ಯಾರೂ ಪ್ರಶ್ನಿಸಿರಲಿಲ್ಲ.

ಸುಧಾರಣೆಗಳ ಕಟು ಅನುಭವಗಳು :

1991ರಲ್ಲಿ ನಾವು ವಿಶ್ವಬ್ಯಾಂಕ್ / ಅಂತರ್ರಾಷ್ಟ್ರೀಯ ಹಣಕಾಸು ನಿಧಿ ಪ್ರೇರಿತ ಹೊಸತೊಂದು ಜಾಡನ್ನು ಹಿಡಿದೆವು. ಅವರು ನಮ್ಮ ಅದುವರೆಗಿನ ಜನಪರ ನೀತಿಗಳನ್ನೇ ಬುಡಮೇಲು ಮಾಡಿ, ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತಕ್ಷಣದಲ್ಲೇ ಜ್ಯಾರಿಗೊಳಿಸುವಲ್ಲಿ ಯಶಸ್ವಿಯಾದರು.

ಈ ಸುಧಾರಣೆಗಳ ಪ್ರಧಾನ ಅಂಶವೆಂದರೆ ವಿದ್ಯುತ್ ಕ್ಷೇತ್ರದ ಖಾಸಗೀಕರಣ. ಆಗಿನ ಪ್ರಧಾನಿ ನರಸಿಂಹರಾಯರು ಈ ಸಂಸ್ಥೆಗಳ ಶರತ್ತುಗಳಿಗೆ ಒಪ್ಪಿದರು. ಆದರೆ ಈ ನೀತಿಗಳ ಫಲವಾಗಿ ವಿದ್ಯುತ್ ಕ್ಷೇತ್ರದ ಮೇಲಾದ ಪರಿಣಾಮಗಳು ಮಾತ್ರ ಅತ್ಯಂತ ಹಾನಿಕಾರಕ.

ಖಾಸಗಿರಂಗಕ್ಕೆ ಮುಕ್ತ

ವಿದ್ಯುತ್ ಕ್ಷೇತ್ರದಲ್ಲಿನ ಸುಧಾರಣೆಗಳ ಒಂದು ಭಾಗವಾಗಿ, ಸರ್ಕಾರ ವ್ಯವಸ್ಥೆಯನ್ನು ಬದಲಾಯಿಸಿ ಖಾಸಗಿ ವಲಯವನ್ನು ಸೆಳೆಯುವ ಕ್ರಮ ಕೈಗೊಂಡಿತು. ಮಾತ್ರವಲ್ಲ, ಅವರಿಗೆ ಅನೇಕ ರಿಯಾಯಿತಿಗಳನ್ನು ಕೊಡಮಾಡಿತು. ಜನತೆಗೆ ವಿದ್ಯುತ್ ಉತ್ಪಾದನೆಯ ವಿಸ್ತರಣಾ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಹೂಡಿಕೆಯ ಪ್ರಮಾಣವನ್ನು ಮೊಟಕುಗೊಳಿಸಲಾಯಿತು.

ಎನ್ರಾನ್ ಕಥೇ?

ಖಾಸಗಿ ವಲಯಕ್ಕೆ (ದೇಶೀಯ ಹಾಗೂ ವಿದೇಶೀಯ) ಅವರ ಹೂಡಿಕೆಯ ಮೇಲೆ ಕನಿಷ್ಟ ಶೇ. 16ರಷ್ಟು ಲಾಭದ ಭರವಸೆ ಕೊಡಲಾಯಿತಲ್ಲದೆ ಸವಕಳಿಯ ಪ್ರಮಾಣವನ್ನು ಶೇ. 3.5ರಿಂದ ಶೇ. 8ಕ್ಕೆ ಏರಿಸಲಾಯಿತು. ಅಲ್ಲದೆ ಇನ್ನಿತರ ಸೌಲಭ್ಯಗಳನ್ನು ಸಹಾ ನೀಡಲಾಯಿತು. ಹಲವಾರು ಖಾಸಗಿ ನಿರ್ವಾಹಕರು ಮುಂದೆ ಬಂದು ಭಾರತ ಸರ್ಕಾರದೊಡನೆ ಕರಾರು ದಸ್ತಾವೇಜು ಮಾಡಿಕೊಂಡರು. ಆದರೆ, ಅವರಲ್ಲಿ ಕೆಲವರು ಯೋಜನೆಗಳು ಕಾರ್ಯಗತವಾಗುವ ಮುನ್ನವೇ ಮಾಯಾವಾದರು. ಧಾಬೋಲ್‌ನಲ್ಲಿ 1440 ಮೆಗಾವ್ಯಾಟ್ ಸಾಮರ್ಥ್ಯದ ಘಟಕ ಸ್ಥಾಪಿಸಲು ಎನ್ರೋನ್‌ನಲ್ಲಿ 1440 ಮೆಗಾವ್ಯಾಟ್ ಸಾಮರ್ಥ್ಯದ ಘಟಕ ಸ್ಥಾಪಿಸಲು ಎನ್ರೋನ್ ಕಂಪನಿ ಮುಂದೆಬಂತು. ನರಸಿಂಹರಾಯರ ಸರ್ಕಾರ ಈ ದೈತ್ಯ ಕಂಪನಿಯ ಜತೆ ಮಾತುಕತೆಯೇನೊ ನಡೆಸಿದರು. ಆದರೆ ಕೆಲವೊಂದು ಕಾರಣಗಳಿಂದಾಗಿ ಕರಾರನ್ನು ಅಂತಿಮಗೊಳಿಸಲಾಗಲಿಲ್ಲ. ಕೊನೆಗೆ ತಮ್ಮ ಕೇವಲ 13 ದಿನಗಳ ಅಧಿಕಾರಾವಧಿಯಲ್ಲಿ ವಾಜಪೇಯಿಯವರು ತರಾತುರಿಯಲ್ಲಿ ಈ ಯೋಜನೆಗೆ ಒಪ್ಪಿಗೆ ನೀಡಿಬಿಟ್ಟರು.

ಎನ್ರೋನ್‌ನ ಕಥೆ ಏನಾಯಿತೆಂದು ಎಲ್ಲರಿಗೂ ಗೊತ್ತಾಗಿದೆ. ಪ್ರತಿ ಯೂನಿಟ್‌ಗೆ ಎರಡು ರೂಪಾಯಿಗೂ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಉತ್ಪಾದಿಸುತ್ತಿದ್ದ, ಮಹಾರಾಷ್ಟ್ರರಾಜ್ಯ ವಿದ್ಯುಚ್ಛಕ್ತಿ ಮಂಡಳಿ, ಎನ್ರೋನ್‌ನಿಂದ ಯೂನಿಟ್ ಒಂದಕ್ಕೆ

6 ರಿಂದ 7 ರೂಪಾಯಿಗಳವರೆಗೆ ಕಕ್ಕಿ ವಿದ್ಯುತ್ತ
ಅನಿವಾರ್ಯವಾಗಿ ಖರೀದಿಸಬೇಕಾಯಿತ
ಕೊನೆಗೆ ಇಷ್ಟು ದುಬಾರಿಯಾದ ವಿದ್ಯುತ್
ಖರೀದಿಯನ್ನು ಮಹಾರಾಷ್ಟ್ರ ರಾಜ್ಯ ವಿದ್ಯು
ಮಂಡಳಿ ಸ್ಥಗಿತಗೊಳಿಸಬೇಕಾಯಿತು. ವಿದ್ಯು
ಕೊಳ್ಳುವವರೆ ಇಲ್ಲದೆ, ಧಾಬೋಲ್ ಯೋಜ
ನೆಲಕಚ್ಚಿತು. ಈ ನಡುವೆ ಇದ್ದಕ್ಕಿದ್ದಂತೆ ಜಾಗ
ವಿದ್ಯುತ್ ರಂಗದಲ್ಲೇ ಅತೀ ದೊಡ್ಡ ಕಂಪನಿಯಾಗಿ
ಎನ್ರೋನ್ ದಿವಾಳಿಯಾಯಿತು. ಧಾಬೋ
ಯೋಜನೆಯನ್ನು ಇದುವರೆಗ
ಪುನಶ್ಚೇತನಗೊಳಿಸಲಾಗಿಲ್ಲ.

ದೈತ್ಯ ಬಹುರಾಷ್ಟ್ರೀಯ ಕಂಪನಿಗ
ಇತಿಹಾಸದಲ್ಲಿ ಅತ್ಯಂತ ವಿಲಕ್ಷಣವಾ
ಎನ್ರೋನ್‌ನ ಅಳಿವು, ಜಾಗತಿಕ ಬಂಡವಾಳಶಾ
ವ್ಯವಸ್ಥೆಗೆ ಬಲವಾದ ಆಘಾತವನ್ನೇ ನೀಡಿ
ಮೋಸದ ಹಾಗೂ ಸುಳ್ಳು ಲೆಕ್ಕಪತ್ರಗಳ ಮೂ
ತನ್ನ ಕೋಟ್ಯಾಂತರ ಷೇರುದಾರರಿಗೆ ಪಂಗನಾ
ಹಾಕಿದ ಇಂತಹ ಘಟನೆ ವಿಶ್ವದಲ್ಲೇ
ನಡೆದಿರಲಿಲ್ಲ. ಆ ಕಂಪೆನಿಯ ದಗಲಬಾಜಿ
ಮತ್ತು ಕುತಂತ್ರಗಳನ್ನು ಯಾ
ಮರೆಯಲಾಗದು.

ನೆಲಕಚ್ಚಿದ ಒರಿಸ್ಸಾ ಮಾದರಿ

ಒರಿಸ್ಸಾದ ವಿದ್ಯುತ್ ಖಾಸಗೀಕ
ಪ್ರಕ್ರಿಯೆಯನ್ನು ಒಂದೊಮ್ಮೆ ದೇಶಕ್ಕೇ ಮಾ
ಎಂದು ಕೊಚ್ಚಿಕೊಳ್ಳಲಾಗಿತ್ತು. ಅದರ ಪ
ಸಹ ಈಗ ಮಹಾರಾಷ್ಟ್ರದಂತೆಯೇ ಅ
ಇಡೀಯೋಜನೆ ಕೈಕೊಟ್ಟಿದೆ. ಖಾ
ನಿರ್ವಾಹಕರ ಕಾರ್ಯಕ್ಷಮತೆಯ
ವಿಚಾರಣೆ ನಡೆಸಿದ ಸಮಿತಿಯ ಪ್ರ
ರಾಜ್ಯದಲ್ಲಿ ಗ್ರಾಮೀಣ ವಿದ್ಯುದ್ದೀ
ಸ್ಥಗಿತಗೊಂಡಿದೆ; ವಿದ್ಯುತ್ ಬಾಕಿ
ವಸೂಲು ಮಾಡುವಲ್ಲಿ ಪ್ರಗತಿಯಾಗಿ
ವಿದ್ಯುತ್‌ಕಳುವು ಹೆಚ್ಚಾಗಿದೆ ಮತ್ತು ಸಾಗ
ಹಾಗೂ ವಿತರಣೆಯಲ್ಲಿನ ವಿದ್ಯುತ್
ಕಡಿಮೆಯಾಗಿಲ್ಲ. ಎಲ್ಲಕ್ಕಿಂತ ಮೇ
ವಿದ್ಯುತ್ ದರಗಳು ಮಾತ್ರ ಶೇ. 367
ಏರಿದವು. ಈ ನಡುವೆ ಸರ್ಕಾರಿ ಒಡ
ಗ್ರೀಡ್ಕೋ (GRIDCO) ನಿಂದ ಖರೀ
ವಿದ್ಯುತ್‌ನ ಬೆಲೆಯನ್ನು ಖಾಸಗಿ ವಿತ
ಪಾವತಿಮಾಡಿಲ್ಲ. ಒಟ್ಟಾರೆಯಾಗಿ
ಕಂಪನಿಗಳು ಎಲ್ಲಾ ವಿಧ
ವಿಫಲವಾಗಿವೆ. ಕೆಲವೊಂದು ಕಂಪ
ಒರಿಸ್ಸಾದಿಂದ ಕಾಲ್ತೆಗೆದಿವೆ. ಇದೇ
ಈಗ 'ಸುಧಾರಣೆ'ಯ ಯತ್ನಗಾಗಿ
ಪ್ರಸ್ತಾಪವೊಂದನ್ನು ಮುಂದಿಟ್ಟು ವಿ
ಕ್ಷೇತ್ರಕ್ಕೆ ರೂ. 3,240 ಕೋಟಿಗ
ಹೂಡಬೇಕೆಂದು ಸೂಚಿಸಿದೆ.

ದುಬಾರಿ ಅತೀ ದುಬಾರಿ ಬೆಲೆ

ದೆಹಲಿ ವಿದ್ಯುತ್ ಮಂಡಳಿಯ
ಖಾಸಗೀಕರಣದ ಕಥೆಯೂ ಅಷ್ಟೇ ಸ
ಒಪ್ಪಂದದ ಪ್ರಕಾರ ಖಾಸಗಿ ವಿತರಕರು

ವಿದ್ಯುತ್ ಮಸೂದೆ 2003.

ಈ ಹಿನ್ನಲೆಯಲ್ಲೇ ಸಂಸತ್ತು ವಿದ್ಯುತ್ ಮಸೂದೆ 2003 ನ್ನು ಕಾಯಿದೆಯಾಗಿ ಪರಿವರ್ತಿಸಿದೆ. ಈ ಕಾಯಿದೆಯ ಮೂಲ ಉದ್ದೇಶಗಳನ್ನು ಪ್ರಸ್ತಾಪಿಸಬಹುದಾದರೆ ಪ್ರಸಕ್ತ ಚಾಲ್ತಿಯಲ್ಲಿರುವ ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿತ ಕಾನೂನುಗಳನ್ನು ಸುದೃಢಗೊಳಿಸುವುದು ; ಕೈಗಾರಿಕಾಭಿವೃದ್ಧಿ ; ಸ್ಪರ್ಧೆಗೆ ಉತ್ತೇಜನ ; ಬಳಕೆದಾರರಿಗೆ ರಕ್ಷಣೆ ; ಎಲ್ಲಾ ಕ್ಷೇತ್ರಗಳಿಗೂ ವಿದ್ಯುತ್ ಪೂರೈಕೆ ; ವಿದ್ಯುತ್ ದರಗಳ ಪುನರ್ವ್ಯವಸ್ಥೆ ; ರಿಯಾಯಿತಿಗಳಲ್ಲಿ ಮುಕ್ತ ನೀತಿಗೆ ಚಾಲನೆ ; ಮತ್ತು ಹೊಸ ಕೇಂದ್ರೀಯ ವಿದ್ಯುತ್ ಪ್ರಾಧಿಕಾರ, ನಿಯಂತ್ರಣ ಆಯೋಗಗಳು ಹಾಗೂ ಮೇಲ್ಮನವಿ ನ್ಯಾಯಾಲಯಗಳ ರಚನೆ ಇತ್ಯಾದಿ. ಈ ಮಸೂದೆಯನ್ನು ಸಿದ್ಧಪಡಿಸಿದ್ದೇ ವಿಶ್ವಬ್ಯಾಂಕ್- ಅಂತರ್ರಾಷ್ಟ್ರೀಯ ಹಣಕಾಸು ನಿಧಿಗಳ ಆದೇಶಗಳಿಗನುಗುಣವಾಗಿ ದೇಶದಲ್ಲೇ ಲಭ್ಯವಿರುವ ತಜ್ಞರ ಅಭಿಪ್ರಾಯಗಳನ್ನು ಕೇಳುವುದಾಗಲಿ, ವಿದ್ಯುತ್ ಕ್ಷೇತ್ರದ ಬಗ್ಗೆ ಗಹನವಾದ ವಿಚಾರ ಮಂಥನವನ್ನಾಗಲಿ ಮಾಡಲೇ ಇಲ್ಲ.

ಈ ಮಸೂದೆ ಮೂಲಕ ತರಲು ಉದ್ದೇಶಿಸಿರುವ ಮಹತ್ವದ ಹಾಗೂ ಮೂಲಭೂತ ಬದಲಾವಣೆಯೆಂದರೆ ವಿದ್ಯುತ್ ಕ್ಷೇತ್ರದ ಖಾಸಗೀಕರಣ ಹಾಗೂ ರಾಜ್ಯ ವಿದ್ಯುತ್ ಮಂಡಳಿಗಳ ಅಪಾರ ಮೊತ್ತದ ಆಸ್ತಿಗಳನ್ನು ಖಾಸಗಿ ಕುಳಗಳಿಗೆ ಬೇಕಾಬಿಟ್ಟಿ ಬೆಲೆಗೆ ವರ್ಗಾಯಿಸುವುದು ಅಲ್ಲದೆ, ವಿದ್ಯುತ್ ಉತ್ಪಾದನೆ ವಿಸ್ತರಣೆಯ ಜವಾಬ್ದಾರಿಯಿಂದ ಸರ್ಕಾರಗಳು ನುಣುಚಿಕೊಳ್ಳಲಿವೆ.

ಈ ನಡುವೆ, ವಿದ್ಯುತ್ ಮಸೂದೆಯಲ್ಲಿ ಕೆಲವಾರು ಕಳಪೆಕಾರಿ ಅಂಶಗಳನ್ನು ಸೇರಿಸಲಾಗಿದೆ. ಅದರ ಪ್ರಕಾರ ಸರ್ಕಾರದ ಒಬ್ಬ ಅಧಿಕಾರಿ ಅಥವಾ ಒಬ್ಬ ಖಾಸಗಿ ಲೈಸೆನ್ಸುದಾರಯಾವುದೇ ಕಟ್ಟಡಕ್ಕೆ ಬಲವಂತ ಪ್ರವೇಶ ಮಾಡಿ, ಯಾವುದೇ ಉಪಕರಣ ಅಥವಾ ಸಾಮಗ್ರಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಅಷ್ಟೇಅಲ್ಲ, ಲೆಕ್ಕಪತ್ರಗಳ ಕಡತವನ್ನೂ ಸಹ ಒಯ್ಯಬಹುದು. ಇದಕ್ಕಾಗಿ ವಿದ್ಯುತ್ ಕಳ್ಳತನವಾಗುತ್ತಿದೆ ಎಂಬ ಗುಮಾನಿ ಮಾತ್ರವಲ್ಲ, ಅದರ ಅನಧಿಕೃತ ಬಳಕೆ ಮತ್ತು 'ಅನಧಿಕೃತ ಬಳಕೆಯಾಗಬಹುದು ಎಂಬ ಶಂಕೆಯೇ ಸಾಕು. ಇದರರ್ಥ, ಒಬ್ಬ ಖಾಸಗಿ ಲೈಸೆನ್ಸುದಾರ, ಈ ದೇಶದ ಪೊಲೀಸರು, ತೆರಿಗೆ ಅಧಿಕಾರಿಗಳಿಗಿಂತಲೂ ಹೆಚ್ಚಿನ ಅಧಿಕಾರ ಹೊಂದಿರುತ್ತಾನೆ. ಬಳಕೆದಾರರ ವಿರುದ್ಧ ಇಂತಹ ಲೈಸೆನ್ಸುದಾರ ಯಾವುದೇ ಕ್ರಮಗಳಿಗೂ ನಿರ್ಬಂಧವೇ ಇಲ್ಲ ಎಂಬಂತಹ ಅಂಶವನ್ನೂ ಅಳವಡಿಸಿಕೊಳ್ಳಲಾಗಿದೆ. ಅವರ ಕ್ರಮಗಳನ್ನು ಪ್ರಶ್ನಿಸುವಂತೆಯೇ ಇಲ್ಲ. ಪೋಟಾದಂತಹ ಜನವಿರೋಧಿ ಕಾನೂನನ್ನು ತಂದ ಮನೋಭಾವ ಇಲ್ಲಿಯೂ ಕೆಲಸ ಮಾಡಿರುವುದು ನಿಚ್ಚಳ ಖಾಸಗೀ ಲೈಸೆನ್ಸುದಾರರ ಹಿತಾಸಕ್ತಿಗಳಿಗೆ ಆದ್ಯತೆ ಕೊಟ್ಟು ಜನರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿಯೇಟು ಹಾಕುವ ಕ್ರಮವಿದು.

...ದ್ಯುತ್ ನೀತಿ

...ಯ ಹೊರಟಿರುವ ಕೇಂದ್ರ ...ರ ನಿಯಮಗಳುಳ್ಳ ಕರಾಳ ...ರನ್ನು ಕಳ್ಳರೆಂದು ಬಗೆಯುವ, ... ಸರ್ಕಾರವೂ ಮುಂದಾಗಿದೆ. ...ಸ್ಥಿತಿ ಮತ್ತು ಮಸೂದೆಯ ...ಇಲ್ಲಿದೆ.

—— ರತ್ನಾಕರ ಶೆಣೈ.

...ತನದ ಟ್ರಾನ್ಸ್ಕೋ (transco) ನಿಂದ ...ನಿಟ್ ಒಂದಕ್ಕೆ ರೂ. 1.32 ನಂತೆ ವಿದ್ಯುತ್ ...ಸಿ, ಬಳಕೆದಾರರಿಗೆ ಮಾರಿದ್ದು ಯೂನಿಟ್ ...ಕ್ಕೆ ಸರಾಸರಿ ರೂ. 4.16ರಂತೆ ಅಲ್ಲದೆ ...ರಿ ಒಡೆತನದ ಜಲನಿಗಮ ಇದೇ ವಿದ್ಯುತ್‌ಗೆ ... 6.52ನಂತೆ ತೆತ್ತರೆ, ನಗರ ಸಭೆ ಬೀದಿ ...ಳಿಗಾಗಿ ಬಳಸುವ ವಿದ್ಯುತ್ತನ್ನು ರೂ. 6.92ರ ...ಲ್ಲಿ ಖರೀದಿಸಬೇಕಾಯಿತು. ಈ ...ನ್ನು ಹೇಗೆ ನಿರ್ಧರಿಸಲಾಯಿತು ...ದು ಇನ್ನೂ ಗುಟ್ಟಾಗಿಯೇ ಇದೆ. ...ಲ್ಲಿ ಖಾಸಗೀಕರಣದಿಂದಾಗಿ ...ಯ ಜನಸಾಮಾನ್ಯರು ತಾವು ...ವ ವಿದ್ಯುತ್ತಿಗೆ ಭಾರೀ ಬೆಲೆಯನ್ನೇ ...ದ್ದಾರೆ.

...ಂದ್ರದ ಒತ್ತಡದಿಂದಾಗಿ ಈ ತೆರನ ...ರಣೆಗಳನ್ನು ರಾಜ್ಯಗಳು ಒಂದೊಂದಾಗಿ ...ಗೆ ತರುತ್ತಿವೆ. ಮೊದಲಿಗೆ ವಿದ್ಯುತ್ ...ಳಿಗಳನ್ನು ಮೂರು ಭಾಗಗಳಾಗಿ ...ಸಲಾಗುತ್ತದೆ. ನಂತರ ಅವುಗಳನ್ನು ...ಂದಾಗಿ ಖಾಸಗೀಕರಣಗೊಳಿಸಲಾಗುತ್ತಿದೆ. ... ತತ್‌ಕ್ಷಣದ ಪರಿಣಾಮವೆಂದರೆ ವಿದ್ಯುತ್ ...ಳಲ್ಲಿ ಭಾರೀ ಹೆಚ್ಚಳ. ಈ ಮೊದಲು ...ರಾಷ್ಟ್ರೀಯ ಮಟ್ಟಕ್ಕಿಂತಲೂ ಕಡಿಮೆ ಇದ್ದ ...ಕಾ ವಿದ್ಯುತ್ ದರ ಈಗ ...ಂತಲೂ ಹೆಚ್ಚಾಗಿದೆ. ...ರೂಪವಾಗಿ, ಕೈಗಾರಿಕಾ ...ಲ್ಲಿ ಹೊಸ ಬಂಡವಾಳ ...ಡಿಕೆಯಾಗುತ್ತಿಲ್ಲ. ...ಶದ 'ರಾಷ್ಟ್ರಭಕ್ತ' ...ಗೋದ್ಯಮಿಗಳೂ ಸಹ ... ಬಂಡವಾಳವನ್ನು ...ತ್ ಅಗ್ಗವಾಗಿರುವ ...ದೇಶಗಳಲ್ಲಿ ...ತೊಡಗಿಸುತ್ತಿದ್ದಾರೆ.



...ಕರಾಗುತ್ತಿರುವ

... ಕ್ಷೇತ್ರದ ವಿದ್ಯುತ್ ...ಲ್ಲಿ ಭಾರೀ ಹೆಚ್ಚಳವನ್ನು ಪ್ರತಿಯೊಂದು ...ಲ್ಲೂ ಮಾಡಲಾಗುತ್ತಿದೆ. ಇದರಿಂದಾಗಿ ...ಆಹಾರಭದ್ರತೆಯಲ್ಲಿ ತೀರಾ ವ್ಯತ್ಯಯ ...ಗಲಿದೆ. ಅಷ್ಟು ಮಾತ್ರವಲ್ಲ, ರೈತಾಪಿ ...ನ್ನು ದೊಡ್ಡ ಪ್ರಮಾಣದಲ್ಲಿ ನಿರ್ಗತಿಕರನ್ನಾಗಿ ...ದೆ. ಸ್ಪಷ್ಟ ಮಾತುಗಳಲ್ಲಿ ಹೇಳಬೇಕೆಂದರೆ, ...ಧಾರಣೆಗಳು' ದೇಶವನ್ನು ವಿನಾಶದೆಡೆ ...ವೆ.

... ಪರಿಸ್ಥಿತಿ :

...ೕಜನಾ ಆಯೋಗದ ಅಂಕಿ ಅಂಶಗಳ ...ಲ್ಲಿ ದೇಶದಲ್ಲಿನ ವಿದ್ಯುತ್ ಪರಿಸ್ಥಿತಿಯನ್ನು ...ಿಸೋಣ. 31.3.2002ರ ವೇಳೆಗೆ ಒಟ್ಟು ...ದನಾ ಸಾಮರ್ಥ್ಯ 1,49,017.1 ...ವ್ಯಾಟ್‌ಗಳಾಗಿತ್ತು, ಇದರಲ್ಲಿ ಜಲವಿದ್ಯುತ್ ಪ್ರಮಾಣ ಶೇ. 25.3 ಆಗಿದ್ದರೆ, ಉಗಿ ವಿದ್ಯುತ್ ಶೇ. 59.22 ಅನಿಲವಿದ್ಯುತ್ ಶೇ. 10.64, ಅಣು ವಿದ್ಯುತ್ ಶೇ. 2.59 ಮತ್ತು ಉಳಿದ ಭಾಗ ತೈಲ ಹಾಗೂ ಗಾಳಿಯಂತ್ರದ ವಿದ್ಯುತ್. ಎಂಟನೇ ಯೋಜನೆಯ ಅವಧಿಯಲ್ಲಿ (1992-97) ಉತ್ಪಾದನಾ ಸಾಮರ್ಥ್ಯಕ್ಕೆ ಹೊಸದಾಗಿ ಸೇರ್ಪಡೆಯಾದದ್ದು 16,422. ಮೆಗಾವ್ಯಾಟ್‌ನಷ್ಟು. ಗುರಿ ಇದ್ದದ್ದು 30,538 ಮೆಗಾವ್ಯಾಟ್‌ಗಳು. ಸಾಧನೆ ಕೇವಲ ಶೇ.53 ಮಾತ್ರ. ಒಂಭತ್ತನೇ ಯೋಜನೆಯ ಗುರಿ 40,245 ಮೆಗಾವ್ಯಾಟ್‌ಗಳಾಗಿದ್ದರೆ ಸಾಧಿಸಿದ್ದು ಕೇವಲ 19,015.1 ಮೆಗಾವ್ಯಾಟ್‌ಗಳು. ಖಾಸಗಿ ವಲಯದ ವೈಫಲ್ಯವೆ ಈ ಎರಡೂ ಯೋಜನೆಗಳ ಗುರಿಯನ್ನು ಸಾಧಿಸುವಲ್ಲಿ ತಡಕುಂಟಾಗಲು ಮುಖ್ಯ ಕಾರಣ ಈ ವಾಸ್ತವಾಂಶವನ್ನು ಕಡೆಗಣಿಸಿ ಹತ್ತನೇ ಯೋಜನೆಯನ್ನು (ಗುರಿ - 46,939 ಮೆಗಾವ್ಯಾಟ್‌ಗಳು) ಖಾಸಗೀ ವಲಯಕ್ಕೆ ದೊಡ್ಡ ಪಾಲನ್ನು ನೀಡುವುದರೊಂದಿಗೆ ಪ್ರಾರಂಭಿಸಲಾಗಿದೆ. ಮಾರ್ಚ್ 2002ರ ವೇಳೆಗೆ ವಿದ್ಯುತ್ ಪೂರೈಕೆಯ ನೈಜ ಪರಿಸ್ಥಿತಿಯಲ್ಲಿ ಶೇ. 7.5 ರಿಂದ ಶೇ. 12.6 ರಷ್ಟು ಕೊರತೆ ಇತ್ತು.

1990-91ರಲ್ಲಿ ಯೂನಿಟ್ ಒಂದಕ್ಕೆ ಸರಾಸರಿ 108.8 ಪೈಸೆಗಳಷ್ಟಿದ್ದ ವಿದ್ಯುತ್ ದರಗಳು ಕಳೆದ ದಶಕದಲ್ಲಿ ಹೆಚ್ಚಳವಾಗಿ 2001-02ರ ವೇಳೆಗೆ 350 ಪೈಸೆಗೆ ಏರಿವೆ. ಯೋಜನಾ ಆಯೋಗದ ಪ್ರಕಾರ ಭಾರತದ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ಅನ್ವಯವಾಗುವ ವಿದ್ಯುತ್‌ದರಗಳು ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲೇ ಅತ್ಯಧಿಕ (ಕೋಷ್ಟಕವನ್ನು ಗಮನಿಸಿ) ಹಲವಾರು ವಿದ್ಯುತ್ ಮಂಡಳಿಗಳು ಶಿಖರಕಾಲ (peak hour) ದಲ್ಲಿ ಭಾರಪಲ್ಲಟನ (load shedding) ಮಾಡುವುದರಿಂದಾಗಿ ಅನೇಕ ಕೈಗಾರಿಕೆಗಳು ತಮ್ಮದೇ ಆದ ವಿದ್ಯುಜ್ಜನಕದ ವ್ಯವಸ್ಥೆಯನ್ನು ಮಾಡಿಕೊಂಡಿವೆ. ಇದರಿಂದಾಗಿ ಕೈಗಾರಿಕಾ ಕ್ಷೇತ್ರದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಕುಂಠಿತಗೊಂಡಿದೆ.

ಸ್ವದೇಶಿಗಳು ವಿದೇಶಗಳತ್ತ?

ಭಾರತದ ಕೈಗಾರಿಕಾ ವಿದ್ಯುತ್ ದರಗಳು ಈಗ ಒಂದು ದಶಕದ ಹಿಂದೆ ಇದ್ದುದಕ್ಕಿಂತಲೂ ಹೆಚ್ಚಾಗಿವೆ. 8.10.2002ರ ಬ್ಯೂಸಿನೆಸ್ ಸ್ಟಾಂಡರ್ಡ್‌ನ ತಮ್ಮ ಲೇಖನದಲ್ಲಿ ಅಶೋಕ್ ದೇಸಾಯಿ, ಭಾರತದ ಬಂಡವಾಳ ವಿದ್ಯುತ್ ದರ ಕಡಿಮೆ ಇರುವ ಹೊರದೇಶಗಳಿಗೆ ಹರಿದು ಹೋಗುತ್ತಿರುವುದನ್ನು ಪ್ರಸ್ತಾಪಿಸಿದ್ದಾರೆ. ಇದಕ್ಕೆ ಅವರು ಟಾಟಾ ಕಂಪನಿಯ ಉದಾಹರಣೆ ನೀಡುತ್ತಾರೆ. ಆ ಕಂಪನಿ ಕಬ್ಬಿಣದ ಅದಿರನ್ನು ಭಾರತದಿಂದ ದಕ್ಷಿಣ ಆಫ್ರಿಕಾಕ್ಕೆ ರವಾನಿಸಿ ಅಲ್ಲಿ ಅದನ್ನು ಶುದ್ಧೀಕರಿಸುತ್ತದೆ. ಏಕೆಂದರೆ ದಕ್ಷಿಣ ಆಫ್ರಿಕಾದಲ್ಲಿ ಕೈಗಾರಿಕಾವಿದ್ಯುತ್ ಕಡಿಮೆದರದಲ್ಲಿ ಲಭ್ಯ ಟಾಟಾ ಮಾತ್ರವಲ್ಲ, ಅನೇಕ ಬೃಹತ್ ಕೈಗಾರಿಕಾ ಮನೆತನಗಳು ಕೂಡಾ ಪರದೇಶಗಳಲ್ಲಿ ಬಂಡವಾಳ ಹೂಡಿಕೆಯ ಬಗ್ಗೆ ಯೋಚಿಸುತ್ತಿದ್ದಾರೆ.

ಗೃಹಬಳಕೆ ಹಾಗೂ ಕೈಗಾರಿಕಾ ವಿದ್ಯುತ್ ದರಗಳು.

ಅಭಿವೃದ್ಧಿ ಹೊಂದಿದ ದೇಶಗಳು ಹಾಗೂ ಭಾರತ.

ದೇಶ	ಗೃಹ ಬಳಕೆ 1995	ಕೈಗಾರಿಕೆ 1995	ಗೃಹ ಬಳಕೆ 1997	ಕೈಗಾರಿಕೆ 1997
ಜಪಾನ್	7.85	5.71	10.05	7.09
ಜರ್ಮನಿ	2.86	1.61	7.82	3.50
ಯುಎಸ್‌ಎ	3.10	3.07	4.13	2.14
ಭಾರತ	0.92	2.18	1.75	3.74

(ಎಲ್ಲಾ ಅಂಕಿ ಅಂಶಗಳೂ ರೂ. ಗಳಲ್ಲಿ.)

ಯಾರಿಗೂ ನಮ್ಮ ದೇಶದಲ್ಲೇ ಬಂಡವಾಳ ಹೂಡುವ ಯೋಚನೆ ಇದ್ದಂತಿಲ್ಲ. ವಿದೇಶೀ ಬಂಡವಾಳಿಗರೂ ಸಹ ಸಿದ್ಧವಸ್ತು ಉತ್ಪಾದನಾ ಕ್ಷೇತ್ರದಲ್ಲಿ ಕಾಲಿಡಲು ಹಿಂದೇಟು ಹಾಕುತ್ತಿದ್ದಾರೆ. ಕೈಗಾರಿಕೆಯ ಹಿನ್ನಡೆಗೆ ಕಾರಣವಾಗಿರುವ ಈ ಪರಿಸ್ಥಿತಿ ಬಹಳ ಗಂಭೀರವಾದದ್ದು. ಕೇರಳದಲ್ಲಿ ವಿದ್ಯುತ್ ದರ ಏರಿಕೆಯ ದುಷ್ಪರಿಣಾಮಗಳು ಈಗಾಗಲೇ ಸುವ್ಯಕ್ತವಾಗಿವೆ. ಎರ್ನಾಕುಲಂ ಪ್ರದೇಶದ ಅನೇಕ ಬೃಹತ್ ಕೈಗಾರಿಕೆಗಳು ಅತೀವ ಸಂಕಷ್ಟದಲ್ಲಿವೆ. ಕೆಲವೊಂದು ಮುಚ್ಚುವ ಹಂತದಲ್ಲಿವೆ. ಕೇರಳ ಸರಕಾರ ವಿದ್ಯುತ್ ದರಗಳನ್ನು ವಿಪರೀತವಾಗಿ ಏರಿಸಿದ್ದರ ಫಲ ಇದು.


ಧಾಳಿಗೆ ಸಜ್ಜಾದ ವಜ

ಕೇಂದ್ರ ವಿದ್ಯುತ್ ಪ್ರಾಧಿಕಾರದ ಅಂದಾಜಿನಂತೆ, ನಮ್ಮ ದೇಶದ ತಲಾ ವಿದ್ಯುತ್ ಬಳಕೆ 1996-97ರಲ್ಲಿ 334 ಯೂನಿಟ್‌ಗಳಷ್ಟಿದ್ದು, 2002ರ ವೇಳೆಗೆ 350 ಯೂನಿಟ್‌ಗಳಾಗಿದೆ. ಇದು ಜಗತ್ತಿನಲ್ಲಿಯೇ ಅತ್ಯಂತ ಕನಿಷ್ಟ ಪ್ರಮಾಣಗಳಲ್ಲೊಂದು. ಅಭಿವೃದ್ಧಿಶೀಲ ರಾಷ್ಟ್ರಗಳ ತಲಾ ವಿದ್ಯುತ್ ಬಳಕೆ ಸರಾಸರಿ 757 ಯೂನಿಟ್‌ಗಳು, ಚೀನಾದಲ್ಲಿ 746 ಯೂನಿಟ್‌ಗಳು. ಅಂದರೆ ಭಾರತದ ತಲಾ ವಿದ್ಯುತ್ ಬಳಕೆ ಚೀನಾದ ಅರ್ಧದಷ್ಟು ಮಾತ್ರ. ಮುಂದುವರಿದ ರಾಷ್ಟ್ರಗಳಲ್ಲಿ ತಲಾ ಬಳಕೆ 6897 ರಿಂದ 8675 ಯೂನಿಟ್‌ಗಳಾದರೆ, ಜಾಗತೀಕ ಸರಾಸರಿ 2074 ಯೂನಿಟ್‌ಗಳು.

ಆದರೆ ಇದುವರೆಗಿನ ಅನುಭವ ಹೇಳುವ ಕತೆಯೇ ಬೇರೆ. ಖಾಸಗಿಕರಣದಿಂದಾಗಿ ವಿದ್ಯುತ್ ದರಗಳು ಗಗನಕ್ಕೇರುತ್ತವೆ ಎಂಬುದು ಈಗಾಗಲೇ ಸಾಬೀತಾಗಿದೆ. ಸರ್ಕಾರ ನಿಗದಿಪಡಿಸಿದ ಉತ್ಪಾದನಾ ಗುರಿಗಳು ಈಡೇರುವ ಸಂಭವವೂ ಇಲ್ಲದಂತಾಗಿದೆ. ಇದೆಲ್ಲದರ ಪರಿಣಾಮವಾಗಿ, ವಿದ್ಯುತ್ ಕೊರತೆ ತೀವ್ರವಾಗಲಿದೆ. ಈ ಬಿಕ್ಕಟ್ಟು ನಮ್ಮ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ. ಅಂತಹ ಪರಿಸ್ಥಿತಿಯನ್ನೇ ಬಳಸಿಕೊಂಡು ಖಾಸಗೀ ಕಂಪನಿಗಳು ವಿದ್ಯುತ್ ದರಗಳನ್ನು ಮತ್ತಷ್ಟು ಏರಿಸಿ ಲಾಭದ ಕೊಳ್ಳೆ ಹೊಡೆಯುತ್ತವೆ.

ಚೀನಾ ಜವಾಬ್ದಾರಿ ಕಂಪನಿಗಳು

ಖಾಸಗೀಕರಣ ವಿದ್ಯುತ್ ಕ್ಷೇತ್ರದಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಲಿದೆ. ದೇಶದಲ್ಲಿ ವಿದ್ಯುದ್ದೀಕರಣವನ್ನು ವಿಸ್ತರಿಸುವ ಅಥವಾ ಬೇಕೆಂದಾಗ ಮತ್ತು ಕೈಗೆಟುಕುವ ದರದಲ್ಲಿ ಜನರಿಗೆ ವಿದ್ಯುತ್ತನ್ನು ಪೂರೈಸಬೇಕೆಂಬ ಜವಾಬ್ದಾರಿ ಹಾಗೂ ಕಳಕಳಿ ಯಾರಿಗೂ ಇರುವುದಿಲ್ಲ. ಮಸೂದೆಯಲ್ಲಿ ಅಡಕವಾಗಿರುವ ನಿಬಂಧನೆಗಳು ದೇಶವನ್ನು ಕೈಗಾರೀಕೃತ ಭವ್ಯ ನಗರ ಪ್ರದೇಶಗಳು ಮತ್ತು ಇತರ ಭಾಗಗಳು ಎಂದು ವಿಂಗಡಿಸಲಿದೆ. ಖಾಸಗೀ ಕುಳಗಳು ನಗರ ಪ್ರದೇಶಕ್ಕೆ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ. ಇದು ಭಾರತದಂತಹ ದೇಶಕ್ಕೆ ಹಾನಿಕಾರಕ. ಏಕೆಂದರೆ ಇಂದಿಗೂ ನಮ್ಮ ಆರ್ಥಿಕತೆ ಕೃಷಿಕ್ಷೇತ್ರವನ್ನೇ ಹೆಚ್ಚಾಗಿ ಅವಲಂಬಿಸಿದೆ. ಪ್ರಕೃತಿ ವಿಕೋಪದಿಂದಾಗಿ ಹಾಳಾಗಿರುವ ಅಥವಾ ನಾಶವಾಗಿರುವ ಪ್ರದೇಶಗಳಿಗೆ ವಿದ್ಯುತ್ ಪೂರೈಸುವ ಹಾಗೂ ವ್ಯವಸ್ಥೆಯನ್ನು ಸರಿಪಡಿಸುವ ಕಾರ್ಯ ವಿತರಕ ಕಂಪನಿಗಳ ಹೊಣೆಗಾರಿಕೆಯಲ್ಲಿ ಸೇರಿಲ್ಲ. ಈ ಜವಾಬ್ದಾರಿ ಹೊರುವವರಾರು ಎಂಬುದಕ್ಕೆ ಉತ್ತರವಿಲ್ಲ. ರಾಜ್ಯ ವಿದ್ಯುತ್ ಮಂಡಳಿಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ ಮತ್ತು ಕೇಂದ್ರ ವಿದ್ಯುತ್ ಪ್ರಾಧಿಕಾರದ ಅಧಿಕಾರವನ್ನು ಮೊಟಕುಗೊಳಿಸಲಾಗುತ್ತದೆ.

ಕೈಜೋಡಿಸಿದ ಕಾಂಗ್ರೆಸ್ ಬಿಜೆಪಿ

ಸಂಸತ್ತಿನ ಸ್ಥಾಯಿ ಸಮಿತಿಯ ಪ್ರಮುಖ ಮತ್ತು ಸರ್ವಾನುಮತದ ಸಲಹೆಗಳನ್ನು ಸರ್ಕಾರ ಕಡೆಗಣಿಸಿದೆ. ಮಸೂದೆಯನ್ನು ಕಾಂಗ್ರೆಸ್ ಪಕ್ಷದ ಸಹಕಾರದೊಂದಿಗೆ ಅಂಗೀಕರಿಸಲಾಗಿದೆ. ಆ ಪಕ್ಷವೂ ಸಹ, ಬಾಜಪ ಮತ್ತು ಎನ್.ಡಿ.ಎ. ನಂತೆಯೇ, ವಿಶ್ವಬ್ಯಾಂಕ್ / ಅಂತರ್ರಾಷ್ಟ್ರೀಯ ಹಣಕಾಸು ನಿಧಿ ಹಾಗೂ ಭಾರತದ ಏಕಸ್ವಾಮ್ಯ ಶಕ್ತಿಗಳ ಅಡಿಯಾಳಾಗಿದೆ.

ಪುಟ 8 ಕ್ಕೆ

ಸಣ್ಣ ಉತ್ಪಾದಕರಿಗೆ ಕಿರುಕುಳ ಅಮೇರಿಕಾದ ಕಂಪೆನಿಗೆ ದಾನ.

3 ರಿಂದ 12 ಮೆಗಾವ್ಯಾಟ್ ತನಕ ವಿದ್ಯುತ್ ಉತ್ಪಾದಿಸುವ ಕಿರು ವಿದ್ಯುತ್ ಉತ್ಪಾದನಾ ಘಟಕಗಳು ರಾಜ್ಯದಲ್ಲಿ ನೂರಾರು ಇವೆ. ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಆರಂಭವಾಗಿರುತ್ತಿರುವಂತೆ, ಸರಕಾರವು ಈ ಘಟಕಗಳಿಗೆ ಉತ್ತೇಜನ ನೀಡಿ, ಕೆ.ಪಿ.ಟಿ.ಸಿ.ಎಲ್.ಗೆ ವಿದ್ಯುತ್ ಖರೀದಿಸುವಂತೆ ಹೇಳಿತು. ಆದರಂತೆ ಪ್ರತಿ ಯೂನಿಟ್ಟಿಗೆ ರೂ. 3.20ರಂತೆ ವಿದ್ಯುತನ್ನು ಖರೀದಿಸುವುದಾಗಿ ಒಪ್ಪಂದ ಮಾಡಿಕೊಂಡಿತು. ಆದರೆ ಈಗ ದರವನ್ನು ರೂ. 3-20 ರಿಂದ 2.80ಕ್ಕೆ ಇಳಿಸುವುದಾಗಿ ಕೆ.ಪಿ.ಟಿ.ಎಲ್. ಹೇಳಿದೆ. (ಪ್ರಜಾವಾಣಿ ಜುಲೈ 14.2003)

ಇದರಿಂದಾಗಿ ಕಿರು ಉತ್ಪಾದಕ ಘಟಕಗಳ ಪರಿಸ್ಥಿತಿ ಡೋಲಾಯಮಾನವಾಗಿದೆ. ಒಂದೆಡೆಯಲ್ಲಿ ಅಮೆರಿಕಾ ಮೂಲದ ತಣ್ಣೀರು ಬಾವಿ ಕಂಪೆನಿಯಿಂದ ಯೂನಿಟ್ಟಿಗೆ ರೂ. 3.60ರಂತೆ ವಿದ್ಯುತ್ ಖರೀದಿಸಲು ಕೆ.ಪಿ.ಟಿ.ಸಿ.ಎಲ್. ಹಿಂದೆ ಮುಂದೆ ನೋಡುತ್ತಿಲ್ಲ. ಜತೆಗೆ, ನಿಗದಿತ ಶುಲ್ಕದ ಹೆಸರಿನಲ್ಲಿ ಯೂನಿಟ್ಟಿಗೆ ಸಾಧಾರಣ ರೂ. 2.00ನ್ನು ಧಾನವಾಗಿ ನೀಡುತ್ತಿದೆ. ಒಪ್ಪಂದದಲ್ಲಿ ಎಂದು ಹೇಳಲಾಗುವ ನಿಗಧಿತ ಶುಲ್ಕವನ್ನು ಹೈ ಕೋರ್ಟಿನಲ್ಲಿ ವಿರೋಧಿಸುವ ಬದಲಾಗಿ 'ನ್ಯಾಯ ಪಂಚಾಯ್ತಿ' ಮಾಡುವ ಮೂಲಕ 285.6 ಕೋಟಿ ರೂ.ಗಳನ್ನು ಈಗಾಗಲೇ ನೀಡಿದೆ. ತೀವ್ರ ವಿರೋಧದ ನಡುವೆಯೂ ಬಹುರಾಷ್ಟ್ರೀಯ ಕಂಪೆನಿಗೆ ಬೃಹತ್ ಮೊತ್ತವನ್ನು ಉದಾರವಾಗಿ ನೀಡುತ್ತಿರುವ ಕೆ.ಪಿ.ಟಿ.ಸಿ.ಎಲ್. ಸಣ್ಣ ಘಟಕಗಳಿಗೆ, ಒಪ್ಪಂದದಲ್ಲಿರುವ ಖರೀದಿದರವನ್ನು ರೂ. 3.20ರಿಂದ ರೂ. 2.80ಕ್ಕೆ ಇಳಿಸುತ್ತಿರುವ ಔಚಿತ್ಯವಾದರೂ ಏನು? ಕೆ.ಪಿ.ಟಿ.ಸಿ.ಎಲ್.ನ ಉನ್ನತ ಅಧಿಕಾರಿಗಳು, ಕೆಲವು ಮಧ್ಯವರ್ತಿಗಳ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುವ ತರಾತುರಿಯಲ್ಲಿ ಹೀಗೆ ಮಾಡುತ್ತಿದ್ದಾರೆ.

ದಮನದ ಎದುರು ಸರ್ಕಾರಿ ನೌಕರರ ಮುಷ್ಕರ

ತಮಿಳುನಾಡು ರಾಜ್ಯ ಸರಕಾರದ ಪ್ರಚೋದನಕಾರಿ ಹಾಗೂ ಧಮನಕಾರಿ ನೀತಿಗಳ ಕಾರಣದಿಂದಾಗಿ ರಾಜ್ಯ ಸರ್ಕಾರಿ ನೌಕರರ ಮುಷ್ಕರ ನಿಗದಿತ ದಿನಾಂಕ 2-7-2003 ಕ್ಕಿಂತ ಮೊದಲೇ ಜುಲೈ 1 ರಂದೇ ಮುಷ್ಕರ, ಸರಕಾರದ ಕೇಂದ್ರ ಸ್ಥಾನವಾದ ಸೆಕ್ರೆಟಾರಿಯಟ್ ನೌಕರರಿಂದ ಆರಂಭವಾಗಿದ್ದು ಅನಿವಾರ್ಯವಾಹೌದು. ನೌಕರರ ಸಂಘಗಳ 22 ಪ್ರಮುಖ ಮುಖಂಡರನ್ನು 30-6-2003 ರಂದು ರಾತ್ರೋರಾತ್ರಿ ಜಯಲಲಿತ ಸರಕಾರದ ಪೊಲೀಸರಿಂದ ಬಂಧನವಾಗಿತ್ತು. ಸರಕಾರದ ಈ ಕುಚೋದ್ಯದ ಹಾಗೂ ಕಾನೂನು ಬಾಹಿರ ಧಾಳಿಯಿಂದ ಕುಪಿತಗೊಂಡ ನೌಕರರು ಹೋರಾಟಕ್ಕೆ ಮಹಿಳೆಯರು ಪುರುಷರೆಂಬ ಭೇದವಿಲ್ಲದೇ ಎಲ್ಲರೂ ಧುಮಿಕಿದರು.

ನೌಕರರ ಈಗಿರುವ ಸೌಲಭ್ಯಗಳನ್ನು ಕಡಿತಗೊಳಿಸಲು ರಾಜ್ಯ ಸರ್ಕಾರ ಏಕ ಪಕ್ರಿಯೆಗೆ ಮುಂದಾಗಿತ್ತು. ವಿಶ್ವಬ್ಯಾಂಕ್, WTO, IMFಗಳ ಜಾಗತೀಕರಣ ನೀತಿಗಳ ಜಾರಿಯಭಾಗವಾಗಿ ಕೆಳಗಿನಂತೆ ಸೌಲಭ್ಯ ಕಡಿತ ಮಾಡಲಾಗಿದೆ.

1. ಪಿಂಚಣಿ ಪಡೆಯ ಬೇಕಾದರೆ ಈಗಿದ್ದ ಕೊನೆಯ ತಿಂಗಳ ಸಂಬಳದ ಶೇ. 56 ನಿಗಧಿಬದಲಾಗಿ ಕೊನೆಯ 10 ತಿಂಗಳ ವೇತನದ ಸರಾಸರಿಯ ಶೇ.50 ಮಾಡಲಾಯಿತು. ಅಲ್ಲದೇ


2. ಪೂರ್ಣಪಿಂಚಣಿಗೆ 30 ವರ್ಷಗಳ ಸೇವೆ ಅರ್ಹತೆಯನ್ನು 33 ವರ್ಷಗಳಿಗೆ ಏರಿಕೆ.

3. ನಿವೃತ್ತಿಗೊಂಡಾಗ ಸಿಗುವ ಗ್ರಾಚ್ಯುಟಿ ಮೊತ್ತವನ್ನು ಶೇ. 50 ನಗದಾಗಿ ಶೇ. 50 ಉಳಿತಾಯ ಪ್ರಮಾಣ ಪತ್ರಗಳ ಮೂಲಕ ಪಾವತಿಸಲಾಗುವುದು.

4. ಪಿಂಚಣಿಯ ಕಮ್ಯುಟೇಶನ್ ಶೇ. 40 ರಿಂದ ಶೇ. 26ಕ್ಕೆ ಕಡಿತ.

5. ನಿವೃತ್ತರಾದ ಗಳಿಕೆ ರಜೆಯ ಹಣವನ್ನು ಶೇ. 50 ನಗದು ಶೇ. 50 ಉಳಿತಾಯಪತ್ರಗಳ ಮೂಲಕ ಕೊಡುವುದಾಗಿ ನಿರ್ಣಯಿಸಲಾಗಿದೆ.

ಸರಕಾರದ ಈ ಏಕಪಕ್ಷೀಯ ನಿರ್ಣಯಗಳ ಮರುಪರಿಶೀಲನೆಗೆ ಒತ್ತಾಯಿಸಿ ನೌಕರರನ್ನು ಸಂಧಾನದ ಮೂಲಕ ಪರಿಹಾರ ಕಾಣುವ ಬದಲಾಗಿ ಮುಷ್ಕರಕ್ಕೆ ಎಳೆಯಲಾಯಿತು. ಸಂಧಾನಕ್ಕೆ ನೌಕರರು ಏಕೆ ಮುಂದಾಗುತ್ತಿಲ್ಲವೆಂದು ರಾಜ್ಯದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಸರ್ಕಾರವನ್ನು ಪ್ರಶ್ನಿಸಿದಾಗ ಆ ವಿಷಯ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಉದ್ಧಟತನದಲ್ಲಿ ಉತ್ತರ ನೀಡಲಾಗಿದೆ.



ಕೆಲ ನಕರರು 2 ದಿನಗಳ ನಂತರ ಕೆಲಸಕ್ಕೆ ಹಾಜರಾಗಲು ಹೋದಾಗ ಕೆಲಸಕ್ಕೆ ಹಾಜರಾಗದಂತೆ ತಡೆಹಿಡಿದು. ಕಳೆದೆರಡು ದಿನಗಳ ಮುಷ್ಕರ ಭಾಗವಹಿಸಿಲ್ಲ ವೆಂಬುದನ್ನು ಸಾಬೀತುಪಡಿಸಿದರೇ ಹಾಜರಿ ಪುಸ್ತಕರದಲ್ಲಿ ಸಹಿಮಾಡಲು ಅವಕಾಶ ನೀಡುವುದಾಗಿ ಪೋಲೀಸ್ ಬಲಪ್ರಯೋಗ ಮಾಡಲಾಗಿದೆ.

ಕಳಂಕಕಾರಿ ಕುಖ್ಯಾತ ಸರ್ಕಾರದ ದಮನಕಾಂಡ.

ಬಹುಶ ಜಗತ್ತಿನ ಕಾರ್ಮಿಕ ಚಳುವಳಿಯ ಇತಿಹಾಸದಲ್ಲೇ ಕಳಂಕಕಾರಿ ಕುಖ್ಯಾತ ರೀತಿಯಲ್ಲಿ 3 ಲಕ್ಷ ನೌಕರರನ್ನು ಒಟ್ಟಾಗಿ ವಜಾ ಮಾಡಿ ಸದರಿ ಕಛೇರಿಗಳ ಮುಂದೆ ಪಟ್ಟಿ ಪ್ರಕಟಿಸಲಾಗಿದೆ. 3 ಸಾವಿರಕ್ಕೂ ಹೆಚ್ಚಿನ ನೌಕರರ ಮುಖಂಡರನ್ನು ರಾಜ್ಯದಾದ್ಯಂತ ಕರಾಳ ಕಪ್ಪು ಕಾನೂನು ಅಗತ್ಯ ಸೇವಾ ನಿರ್ವಹಣ ಕಾನೂನು ಏಪ್ರಿಲ್ 23 ರಿಂದಲೇ ಪೂರ್ವಾನ್ವಯವಾಗುವಂತೆ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲಾಗಿದೆ. ಇಡೀ ರಾಜ್ಯದಲ್ಲಿ ಭಯಭೀತಿ ವಾತಾವರಣ ನಿರ್ಮಾಣಮಾಡಿ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆಯ 4 ಮೂಲಭೂತ ಕಾರ್ಮಿಕರ ಹಕ್ಕುಗಳ ಘೋಷಣೆಯನ್ನು ಅತ್ಯಂತ ನೀಚವಾಗಿ ಉಲ್ಲಂಘಿಸಲಾಗಿದೆ.



ಸೌಹಾರ್ಧ ಹೋರಾಟಕ್ಕೆ ಕಾರ್ಮಿಕ ವರ್ಗ

ಜಯಲಲಿತಾ ಅವರ ಸರಕಾರದ ಈ ದುರ್ನಡೆಯನ್ನು ಖಂಡಿಸಿ ಹೋರಾಟದಲ್ಲಿ ಭಾಗವಹಿಸಿದ ನೌಕರರ ನ್ಯಾಯಯುತ ಹೋರಾಟವನ್ನು ಬೆಂಬಲಿಸಲು ಸಿ.ಐ.ಟಿ.ಯು ಮತ್ತಿತರ ಕಾರ್ಮಿಕ ಸಂಘಗಳು ಪ್ರತಿಭಟನೆ ಮಾಡಿ ಸೌಹಾರ್ಧ ಬೆಂಬಲನೀಡಲು ಕರೆನೀಡಿವೆ. ಈ ಕೂಡಲೇ ವಜಾಗೊಳಿಸಿದ ನೌಕರರನ್ನು ಕಲಸಕ್ಕೆ ತೆಗೆದುಕೊಳ್ಳಲು ಮತ್ತು ನೌಕರರ ಬೇಡಿಕೆಗಳ ಬಗ್ಗೆ ಸಂಧಾನದ ಮೂಲಕ ಪರಿಹಾರಕ್ಕೆ ಒತ್ತಾಯಿಸಲಾಗಿದೆ. ಈ ಹಂತದಲ್ಲೇ ಸಾವಿರಾರು ಆಮಾಯಕ ನಿರುದ್ಯೋಗಿ ಯುವಕರನ್ನು ಅತ್ಯಂತ ಕಡಿಮೆ ವೇತನದಲ್ಲಿ ನೇಮಿಸಿ ಹೋರಾಟ[...] ನೌಕರರ ವಿರುದ್ಧ ಎತ್ತಿ ಕಟ್ಟಿ ದುರುಪಯೋ[...] ಪಡಿಸಿಕೊಳ್ಳಲಾಗುತ್ತಿದೆ. ಕಡಿಮೆ ವೇತನ ತಾತ್[...] ನೌಕರರ ನೇಮಕಾತಿ ಮುಷ್ಕರ ಮುಗಿದ ಮೇ[...] ಮುಂದುವರೆದಿದೆ.


ಕರ್ನಾಟಕದಲ್ಲಿ ಸರ್ಕಾರಿ ನೌಕರರ[...] ಸೌಹಾರ್ಧ ಹೋರಾಟ

ತಮಿಳುನಾಡು ಸರಕಾರದ ಈ ದುಷ್ಟ[...] ವಿರೋಧಿಸಿ ದಿನಾಂಕ 16- ಜುಲೈ ರ[...] ಗುಲ್ಬರ್ಗಾದಲ್ಲಿ 700ಕ್ಕೂ ಹೆಚ್ಚಿನ ನೌಕ[...] ಪ್ರತಿಭಟನೆ ನಡೆಸಿದಾಗ ಜಿಲ್ಲಾಧಿಕಾರಿಗಳು ಹ[...] ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ[...] ಮನವಿಸ್ವೀಕರಿಸಿದ್ದಾರೆ. ಧಾರವಾಡ[...] ಅಭೂತಪೂರ್ವರೀತಿಯಲ್ಲಿ ನೌಕರರು ಹೋ[...] ನಡೆಸಿದ್ದಾರೆ. ಬೀದರ್ ರಾಯಚೂರು, ಬ[...] ಕೊಪ್ಪಳ, ಜಿಲ್ಲೆಗಳಲ್ಲಿ ಪ್ರತಿಭಟನೆ[...] ನಡೆಸಲಾಗಿದೆ. ಬೆಂಗಳೂರಿನಲ್ಲಿ 18 ಜುಲೈ[...] ಪ್ರತಿಭಟನೆ ನಡೆಸಲಾಗಿದೆ. ಅಖಿಲ ಕನ[...] ರಾಜ್ಯ ಸರಕಾರಿ ನೌಕರರ ಒಕ್ಕೂಟದ ನೇತೃ[...] ಪ್ರತಿಭಟನೆ ನಡೆದಿದೆ.

7ನೇ ಪುಟದಿಂದ.....

ಹೊಣೆಗಾರಿಕೆ

ಈ ನಡುವೆ ಅಂತರ್ರಾಷ್ಟ್ರೀಯ ಹಣಕಾಸು ನಿಧಿ ತನ್ನ ಇತ್ತೀಚಿನ ವರದಿಯೊಂದರಲ್ಲಿ, ತಾನು ಅಶಕ್ತ ರಾಷ್ಟ್ರಗಳ ಮೇಲೆ ಹೇರಿದ್ದ ನೀತಿ ಸಂಹಿತೆಗಳು ಆ ರಾಷ್ಟ್ರಗಳ ಹಿತಾಸಕ್ತಿಗಳಿಗೆ ಮಾರಕವಾಗಿವೆ ಎಂಬ ಸತ್ಯವನ್ನು ಹೊರಗೆಡಹಿದೆ. ಈ ವಾಸ್ತವವನ್ನು ಕಡೆಗಣಿಸಿ, ನಮ್ಮ ಸರ್ಕಾರ ಅದೇ ನೀತಿಗಳ ಅನುಷ್ಠಾನಕ್ಕೆ ಹೊರಟಿದೆ. ವಿದ್ಯುತ್ ನೌಕರರು ಮತ್ತು ತಂತ್ರಜ್ಞರು ಅನ್ಯ ವಿಶಾಲಜನವಿಭಾಗದೊಂದಿಗೆ ಸೇರಿ ವ್ಯಕ್ತಪಡಿಸಿರುವ ವಿರೋಧವನ್ನು ಸಹ ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲ.



ನೀತಿಬದಲು ಇಲ್ಲವೇ ಸರ್ಕಾರ ಬದಲು

ಈ ಪರಿಸ್ಥಿತಿಯಲ್ಲಿ, ಇಂತಹ ಪ್ರಮುಖ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರು ಮತ್ತು ಎಂಜೀನಿಯರುಗಳು ದೇಶವನ್ನು ವಿನಾಶದ ಅಂಚಿನಿಂದ ಪಾರುಮಾಡುವುದು ಹೇಗೆ ಎಂಬುದರ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ. ಅದರರ್ಥ, ವಿಶಾಲ ವ್ಯಾಪ್ತಿಯ ಪ್ರಬಲ ಹೋರಾಟದ ಮೂಲಕ ಮಾತ್ರ ಸರ್ಕಾರ ತನ್ನ ನೀತಿಗಳನ್ನು ಬದಲಾಯಿಸುವಂತೆ ಒತ್ತಡ ಹೇರಲು ಸಾಧ್ಯ. ಇದಾಗದಿದ್ದಲ್ಲಿ ಸರ್ಕಾರವನ್ನೇ ಬದಲಿಸಬೇಕಾಗುತ್ತದೆ ಮತ್ತು ಈ ದಿಟ್ಟಿನಲ್ಲಿ ವಿದ್ಯುತ್ ನೌಕರರು ಮತ್ತು ಇಂಜನಿಯರ್‌ಗಳು ತಮ್ಮ ಭೂಮಿಕೆಯನ್ನು ನಿಭಾಯಿಸಬೇಕಾಗುತ್ತದೆ.

ಪರ್ಯಾಯ ಹಾದಿ

ಈ ಮೇಲಿನ ಅಂಶಗಳು, ಸರ್ಕಾರ ಅನುಸರಿಸುತ್ತಿರುವ ನೀತಿಗಳು ಭಾರತವನ್ನು ಪ್ರಗತಿಯೆಡೆ ಕೊಂಡೊಯ್ಯುತ್ತಿಲ್ಲ ಎಂಬುದನ್ನು ನಿಖರವಾಗಿ ದೃಢಪಡಿಸುತ್ತವೆ. ಖಾಸಗೀಕರಣದ ಪ್ರಕ್ರಿಯೆ ದೇಶದಲ್ಲಿ ವಿದ್ಯುತ್ ಬಿಕ್ಕಟ್ಟನ್ನು ತೀವ್ರಗೊಳಿಸಲಿದೆ. ಪರ್ಯಾಯವಾದ ವಿಸ್ತೃತ ಯೋಜನೆಯನ್ನು ಚರ್ಚಿಸಲು ಇಲ್ಲಿ ಸಾಧ್ಯವಾಗದು. ಆದರೆ ಕೆಲವೊಂದು ಪರ್ಯಾಯ ಮಾರ್ಗಗಳನ್ನು ಸ್ಥೂಲವಾಗಿ ಸೂಚಿಸಬಹುದು.


ವಿದ್ಯುತ್ತನ್ನು ಸಾರ್ವಜನಿಕ ಕ್ಷೇತ್ರದಲ್ಲೇ ಉಳಿಸಿಕೊಂಡು, ಆದಷ್ಟು ಶೀಘ್ರವಾಗಿ ಎಲ್ಲರಿಗೂ ವಿದ್ಯುತ್ ಪೂರೈಕೆ ಮೂಲಕ ಕೈಗಾರಿಕೆ ಮತ್ತು ಕೃಷಿಕ್ಷೇತ್ರಕ್ಕೆ ಒತ್ತುಕೊಡಬೇಕು. ಜಗತ್ತಿನೆಲ್ಲೆಡೆ, ಮುಂದುವರಿದ ದೇಶಗಳನ್ನು ಒಳಗೊಂಡು, ಕೃಷಿಕ್ಷೇತ್ರಕ್ಕೆ ದೊಡ್ಡ ಪ್ರಮಾಣದ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ನಮ್ಮ ದೇಶದ ಆಹಾರ ಸ್ವಾವಲಂಬನೆಯನ್ನು ಮುಂದುವರಿಸುವ ಸಲುವಾಗಿ, ಕೃಷಿ ಕ್ಷೇತ್ರಕ್ಕೆ ರಿಯಾಯಿತಿಯ ವಿದ್ಯುತ್ ಲಭ್ಯವಾಗಬೇಕು. ಕೈಗಾರಿಕೆಗಳಿಗೆ ಸ್ಪರ್ಧಾತ್ಮಕ ದರದಲ್ಲಿ ವಿದ್ಯುತ್ ಪೂರೈಕೆಯಾಗಬೇಕು. ನಮ್ಮ ವಿದ್ಯುತ್ ಉತ್ಪಾದನೆಯನ್ನು ಕಡಿಮೆ ವೆಚ್ಚದ ಕ್ರಮಗಳ ಮೂಲಕ ಹೆಚ್ಚಿಸಿ, ದೇಶದ ಮೂಲೆ ಮೂಲೆಗೂ ವಿದ್ಯುತ್ ಪೂರೈಕೆಯಾಗುವಂತೆ ಮಾಡಬೇಕು. ವೆಚ್ಚದ ಬಾಬ್ತು ಆಕರ್ಷಣೀಯವಾದಾಗ ಖಾಸಗಿ ಉದ್ಯಮಿಗಳು ಕೂಡಾ ಮುಂದೆ ಬಂದು ಪಾಲ್ಗೊಳ್ಳುತ್ತಾರೆ. ನಮ್ಮ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಶೀಘ್ರ ಬದಲಾವಣೆಗಳನ್ನು ಮಾಡಿ, ಜಲ ವಿದ್ಯುತ್ ಯೋಜನೆಗಳಿಗೆ ಆದ್ಯತೆ ನೀಡಬೇಕು. ಚೀನಿಯರ ನಿದರ್ಶನ ಇಲ್ಲಿ ಪ್ರಸ್ತುತ. ಅವರು ವಿದ್ಯುತ್ ಉತ್ಪಾದನೆಗೆ ಎಲ್ಲಾ ಜಲ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಜಗತ್ತಿನಲ್ಲಿಯೇ ಅತೀ ಕಡಿಮೆ ವೆಚ್ಚದ ವಿದ್ಯುತ್ ಉತ್ಪಾದಕ ಎಂಬ ಹೆಗ್ಗಳಿಕೆ ಅವರದಾಗಿದೆ.

ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಅನುಭವಗಳು ನಿಚ್ಚಳವಾಗಿ ತೋರಿಸಿಕೊಟ್ಟಿರುವುದೇನೆಂದರೆ, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಜನಸಮುದಾಯದ ಹಿತಾಸಕ್ತಿಗಳನ್ನು ರಕ್ಷಣೆ ಮಾಡುವುದಿಲ್ಲ ಎಂ[...] ವಿದ್ಯುತ್ ಕ್ಷೇತ್ರಕ್ಕೆ ತನ್ನದೇ ಆದ ವೈಶಿಷ್ಟ್ಯ[...] ವಿದ್ಯುತ್‌ನ್ನು ಸಂಗ್ರಹಿಸಿ ಇಡಲಾಗುವ[...] ಉತ್ಪಾದನೆಯಾದ ವಿದ್ಯುತ್ ಬಳಕೆಯ[...] ಬೇಕು. ಖಾಸಗಿ ಕುಳಗಳಿಗೆ ಲಾಭವೇ ಪ್ರ[...] ಬಳಕೆದಾರರಿಗಾದರೂ ವಿದ್ಯುತ್ ಕೈಗೆ[...] ಬೆಲೆಯಲ್ಲಿ ಸಿಗಬೇಕು. ಆದ್ದರಿಂದ ಈ ಅ[...] ಕ್ಷೇತ್ರದ ಖಾಸಗೀ ಒಡೆತನದಿಂದ ಸಮುದಾಯಕ್ಕೆ ಒಳಿತಾಗದು. ಕೇಂದ್ರ [...] ಪ್ರಾಧಿಕಾರ ಮತ್ತು ರಾಜ್ಯ ವಿದ್ಯುತ್ ಮಂಡ[...] ನಿಷ್ಕ್ರಿಯಗೊಳಿಸುವುದೆಂದರೆ ವಿನಾ[...] ಅಪ್ಪಿಕೊಂಡಂತೆಯೇ ಸರಿ. ಬದ[...] ವ್ಯವಸ್ಥೆಯಲ್ಲಿನ ಲೋಪಗಳನ್ನು ಸೂಕ್ತ ಕ್ರ[...] ಮೂಲಕ ಹಾಗೂ ಇಂಜನೀಯರುಗಳು ಮತ್ತು ನೌಕರರ ಸಹಕಾರದ[...] ಸರಿಪಡಿಸಿಕೊಳ್ಳುವುದೊಂದೇ ದಾರಿ.

ಎಲ್ಲಕ್ಕಿಂತ ಮಿಗಿಲಾಗಿ, ಖಾಸಗಿ[...] ನೀತಿಯನ್ನು ಜ್ಯಾರಿಗೆ ತರುವಾಗ ಒಪ್ಪಿಸುವ ಮಂತ್ರವೆಂದರೆ ಖಾಸಗೀ ಸ್ಪರ್ಧೆ, ಇರುತ್ತದೆ. ಸ್ಪರ್ಧಾತ್ಮಕ ಬೆಲೆಗ[...] ಲಭ್ಯವಾಗಿ ಗ್ರಾಹಕರಿಗೆ ಅನುಕೂಲ[...] ಎಂಬುದು. ಬೇಡಿಕೆಗಿಂತಲೂ ಪೂರೈಕೆ[...] ಸನ್ನಿವೇಶಗಳಲ್ಲಿ ಇದು ಒಂದು ಹಂ[...] ಸಾಧ್ಯವಾಗಲೂಬಹುದು. ಆದರೆ ವಿದ್ಯು[...] ತೀವ್ರ ಕೊರತೆ ಇರುವ ಕ್ಷೇತ್ರದಲ್ಲಿ[...] ಅವಕಾಶವಾದರೂ ಎಲ್ಲಿದೆ ಎಂ[...] ಉತ್ತರವೇ ಇಲ್ಲ.

ಐ.ಎಂ.ಎಫ್‌ನಲ್ಲೂ ನಮ್ಮವರು?

ಡಾ.ರಘುರಾಮ್ ರಾಜನ್ ಎಂಬ ಭಾರತೀಯರೊಬ್ಬರನ್ನು ಐಎಂಎಫ್ ತನ್ನ ಮುಖ್ಯ ಅರ್ಥಶಾಸ್ತ್ರಜ್ಞರನ್ನಾಗಿ ನೇಮಿಸಿಕೊಂಡಿದೆ. ಈತ ಚಿಕಾಗೊ ವಿಶ್ವವಿದ್ಯಾಲಯದ ಜಾಗತೀಕ ಹಣಕಾಸಿನ ಪ್ರಾಧ್ಯಾಪಕ. ಭಾರತ ಐಎಂಎಫ್‌ಗೆ ಸಾಲ ನೀಡುವ ದೇಶವಾದ ನಂತರ ಈ ನೇಮಕ ಬಂದಿರುವುದು ಕುತೂಹಲಕಾರಿ.



ಬಂಡವಾಳಶಾಹಿಯನ್ನು ಬಂಡವಾಳಿಗರಿಂದ ರಕ್ಷಿಸುವುದು ಹೇಗೆ ಕಂಪನಿಗಳ ಮೇಲೆ ಹಣಕಾಸಿನ ಕ್ರಿಯೆಯ ಪ್ರಭಾವ, ಇತ್ಯಾದಿ ಹಲವು ಕ್ರಿಯೆಗಳನ್ನು ಇವರು ರಚಿಸಿದ್ದಾರಂತೆ.

ಅವರ ಒಂದು ಕೃತಿಯಲ್ಲಿ ಬಂಡವಾಳಿಗರೇ ಬಂಡವಾಳಶಾಹಿಯ ಶತ್ರುಗಳು ಎಂದು ವಾದ ಮಾಡಿದ್ದಾರಂತೆ. ಅಮೇರಿಕದ ವಾಲ್ ಸ್ಟ್ರೀಟ್‌ನ ಹಗರಣದ ಪ್ರಕರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವರು ಇಂತಹ ಕೃತಿಗಳನ್ನು ಬರೆದಿದ್ದಾರೆನ್ನಲಾಗಿದೆ.

ಭಾರತೀಯರೊಬ್ಬರು ಇಂತಹ ಸ್ಥಾನಕ್ಕೆ ಏರಿದ್ದಾರೆಂಬುದು ಯಾವ ಕಾರಣಕ್ಕೆ ಎಂಬುದು ಬಹಳ ಸ್ಪಷ್ಟವಾಗಿದೆ. ಬಂಡವಾಳಶಾಹಿ ಪದ್ದತಿಯನ್ನು ರಕ್ಷಿಸುವ, ಅದಕ್ಕೆ ಮಸಿ ಬಳಿಯುವ ಘಟನೆಗಳನ್ನು ಕೆಲವೇ ಕೆಲವರ (ಬಂಡವಾಳಿಗರ) ಮೇಲೆ ಆರೋಪಿಸಿ, ಈ ಪದ್ದತಿಯ ಪರವಾಗಿ ಕೆಲಸ ಮಾಡಿರುವುದರಿಂದ ಅವರಿಗೆ ಈ ಹುದ್ದೆ ಸಂದಿದೆ.

ಬಂಡವಾಳಶಾಹಿ ಪದ್ಧತಿಯ ರಕ್ಷಣಾ ವಾದ ಎಲ್ಲಿಂದ ಬಂದರೂ ಐಎಂಎಫ್‌ಗೆ ಸ್ವಾಗತಾರ್ಹವಲ್ಲವೆ. ಇಂತಹ ನೇಮಕದ ಮೂಲಕ ಅವರಿಗೆ ಪುರಸ್ಕಾರ ನೀಡಲಾಗಿದೆ.

ಈತ ಜಾಗತೀಕ ದುಡಿಯುವ ವರ್ಗದ ಶತ್ರುವಂತೂ ಹೌದಲ್ಲವೆ?

"ಕುಡಿವ ನೀರು ಕೊಡದಿದ್ದರೂ ಕೋಕಾಕೋಲಾ ನೀಡುತ್ತೇವೆ"




ಜಾಗತೀಕರಣದ ಪ್ರತಿಪಾದಕ, ಅದರ ಹರಿಕಾರರಾಗಿರುವ ಎನ್.ಡಿ.ಎ ಸರ್ಕಾರ ಈ ಮಾತನ್ನು ನಿಜ ಮಾಡಿ ತೋರಿಸಿದೆ.

ಕೋಕಾಕೋಲಾಕ್ಕೆ ಭಾರತ ಬಹುಮುಖ್ಯ ಮಾರುಕಟ್ಟೆಯಂತೆ. ಭಾರತಕ್ಕೆ ಪುನಃ ಪ್ರವೇಶ ಮಾಡಿ ಹತ್ತು ವರ್ಷವಾಗುತ್ತಿರುವಾಗ ಕೋಕಾ ಕೋಲಾದ ಈ ಪ್ರದೇಶದ ಮುಖ್ಯಸ್ಥ ಈ ಮಾತನ್ನು ಹೇಳಿದ್ದಾರೆ. ಭಾರತದಲ್ಲಿ ತಲಾ ಕೋಕಾಕೋಲ ಬಳಕೆಯನ್ನು ಹೆಚ್ಚಿಸುವುದೇ ಅವರ ಗುರಿಯಂತೆ.

ಚೀನಾದಲ್ಲಿ ಇಂತಹ ಪೇಯಗಳ ತಲಾ ಬಳಕೆ ಭಾರತಕ್ಕಿಂತ ಎರಡೂವರೆ ಪಟ್ಟು ಹೆಚ್ಚಿದೆ ಎಂದಿರುವ ಅವರು ಭಾರತದಲ್ಲಿ ಬಳಕೆಯನ್ನು ಅಷ್ಟು ಹೆಚ್ಚು ಮಾಡಲು ಅವಕಾಶವಿದೆ ಎಂದಿದ್ದಾರೆ.

ಭಾರತದಲ್ಲಿ ನೂರು ದಶಲಕ್ಷ ಡಾಲರುಗಳನ್ನು ಖರ್ಚು ಮಾಡಿ ಉತ್ಪಾದನಾ ಸಾಮರ್ಥ್ಯವನ್ನು ದ್ವಿಗುಣಗೊಳಿಸಲು ಈ ಬಹುರಾಷ್ಟ್ರೀಯ ಕಂಪನಿ ಯೋಜನೆ ಹಾಕಿಕೊಂಡಿದೆಯಂತೆ.



ಭಾರತದಲ್ಲಿಂದು ಪ್ರತಿ ಹಳ್ಳಿಗೆ ಕುಡಿವ ನೀರಿನ ಪೂರೈಕೆಯನ್ನೇ ಮಾಡುವಲ್ಲಿ ನಮ್ಮ ಸರ್ಕಾರಗಳು ವಿಫಲವಾಗಿವೆ. ಅಂತಹುದರಲ್ಲಿ ಕೋಕಾಕೋಲದಂತ ಪೇಯದ ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡಿದರೆ ಇಲ್ಲಿ ಬಂದು ಅವರು ಲಾಭ ಮಾಡಿಕೊಳ್ಳುವ, ಮಾರುಕಟ್ಟೆಯನ್ನು ಹಿಡಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಹೊರತು ಜನತೆಗೆ ಲಾಭವಾಗುವದೇನಾದರೂ ಮಾಡಿಯಾರೆ? ಜಾಗತೀಕರಣ ಮತ್ತು ಉದಾರೀಕರಣಗಳು ದೇಶಕ್ಕೆ ಎಂತಹ ಲಾಭ ಮಾಡಿಕೊಡಬಹುದೆಂದುದಕ್ಕೆ ಇದು ಒಳ್ಳೆಯ ಉದಾಹರಣೆ. ದೇಶದ ಜನರಿಗೆ ಸರಿಯಾದ ಕುಡಿವ ನೀರಿನ ಪೂರೈಕೆ ಇರದಿದ್ದರೂ ಮಾರುಕಟ್ಟೆಯಲ್ಲಿ ಕೋಕಕೋಲ, ಪೆಪ್ಸಿಕೋಲ ದುಡ್ಡಿದ್ದರೆ ಬೇಕಾದಷ್ಟು ಕುಡಿಯಿರಿ.

ಬಡವರೇ ಇನ್ನೂ ಹೆಚ್ಚಿನ ಸುಧಾರಣೆಗಳಿಗೆ ತಯಾರಾಗಿ

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ.ಬಿಮಲ್ ಜಾಲನ್‌ರವರು ಹಣಕಾಸು ವಲಯದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಮಾಡುವ ಸೂಚನೆ ನೀಡಿದ್ದಾರೆ.

ನಮ್ಮ ಆರ್ಥಿಕ ಪರಿಸ್ಥಿತಿ ಸಮಾಧಾನಕರವಾಗಿರುವುದರಿಂದ ಇನ್ನೂ ಹೆಚ್ಚಿನ ಹಣಕಾಸು ವಲಯದ ಸುಧಾರಣೆಗಳನ್ನು ಮಾಡುವುದು ಸಾಧ್ಯ. ಅದ್ದರಿಂದ ಈ ವಲಯದಲ್ಲಿ ಸುಧಾರಣೆಗಳನ್ನು ತರಲಾಗುವುದೆಂದು ಅವರು ಹೇಳಿದ್ದಾರೆ.

ಹಣದುಬ್ಬರ ಹಿಡಿತದಲ್ಲಿದೆ, ಒಳ್ಳೆಯ ಮಳೆಯಾಗುವ ಲಕ್ಷಣಗಳಿವೆ. ಮಳೆಯಿಂದಾಗಿ ಒಳ್ಳೆ ಬೆಳೆ ಬಂದರೆ ಆಗ ಹಣದುಬ್ಬರದ ದರ ಇನ್ನೂ ಕಡಿಮೆಯಾಗುವುದು. ಇಂತಹ ಸ್ಥಿತಿ ಹಣಕಾಸು ವಲಯದ ಸುಧಾರಣೆಗೆ ಹೇಳಿ ಮಾಡಿಸಿದಂತಹದ್ದು. ಅದ್ದರಿಂದಲೇ ಹೆಚ್ಚಿನ ಸುಧಾರಣೆಗಳನ್ನು ಯೋಜಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಆಹಾರವಿಲ್ಲದೆ ಜನ ಸಾಯುತ್ತಿರುವುದು, ಪೌಷ್ಟಿಕಾಂಶದ ಕೊರತೆಯಿಂದ ಬಡಜನ ನರಳುತ್ತಿರುವುದು, ಬೇಸಿಗೆಯ ಸೆಖೆಯಿಂದಾಗಿ ಜನ ಸಾಯುವುದು ಇವೆಲ್ಲ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಹೋಗಿದೆ. ಇಂತಹವುಗಳನ್ನು ತಡೆಯುವ ಕ್ರಮಗಳ ಬಗ್ಗೆ ಮಾತಿಲ್ಲ. ಬದಲಿಗೆ ಹಣಕಾಸು ವಲಯದ ಹೆಚ್ಚಿನ ಸುಧಾರಣೆಗಳ ಮಾತು.

ಈ ಸುಧಾರಣೆಗಳು ಏನು ಮಾಡಿವೆ? ಈ ಸುಧಾರಣೆಗಳು ಎಂತಹ ಬದಲಾವಣೆಗಳನ್ನು ತಂದಿವೆಯೆಂದರೆ, ಬಡ್ಡಿದರಗಳು ಕಡಿಮೆಯಾಗಿವೆ. ಬೇಕಾದಷ್ಟು ಹಣಕಾಸು ದೊರೆಯುವುದು ಬಂಡವಾಳಶಾಹಿಗಳಿಗೆ ಮಾತ್ರ. ಬಡವರಿಗಲ್ಲ, ಕ್ರೆಡಿಟ್ ಕಾರ್ಡ್, ಎಟಿಎಮ್ ಇತ್ಯಾದಿ ಸೌಲಭ್ಯಗಳು ಬಂದಿವೆ. ಇದೆಲ್ಲ ದುಡ್ಡಿರುವವರಿಗೆ ಮಾತ್ರ.

ದೇಶದ ಬಡವರಿಗೆ ಹಿಂದೆ ದೊರೆಯುತ್ತಿದ್ದ ಅನುಕೂಲವನ್ನು ಈ ಸುಧಾರಣೆಗಳು ಕಿತ್ತುಕೊಂಡಿದೆ. ಇಂತಹ ಸುಧಾರಣೆಗಳನ್ನು ಇನ್ನೂ ಹೆಚ್ಚು ಮಾಡುವುದೆಂದರೆ ಅದರ ಅರ್ಥ? ದೇಶದ ಜನತೆಗೆ ಅನರ್ಥ ಮಾತ್ರ ಅಲ್ಲವೆ?

ಭಾರತದಲ್ಲಿ ಅತ್ಯಂತ ಹೆಚ್ಚಿನ ಹಸಿದವರು

ವಿಶ್ವ ಅಭಿವೃದ್ಧಿ ವರದಿ (2003) ಯ ಪ್ರಕಾರ ಭಾರತದಲ್ಲಿ ಅತ್ಯಂತ ಹೆಚ್ಚಿನ ಹಸಿದ ಜನರಿದ್ದಾರೆ. ಸರಾಸರಿ ಆಯುಸ್ಸು, ಸಾಕ್ಷರತೆ, ತಲಾ ಆದಾಯಗಳಂತ ಸಾಮಾಜಿಕ ಸೂಚಿಗಳ ಅಧ್ಯಯನ ಮಾಡಿರುವ ವರದಿ ಭಾರತಕ್ಕೆ ಅಭಿವೃದ್ದಿಯ ಶ್ರೇಣಿಯಲ್ಲಿ 127 ನೇ ಸ್ಥಾನವನ್ನು ನೀಡಿದೆ. ಕಳೆದ ಸಾಲಿನಲ್ಲಿ ಭಾರತಕ್ಕೆ 124 ನೇ ಸ್ಥಾನವಿತ್ತು. ಈ ವರದಿಯಲ್ಲಿ 174 ದೇಶಗಳ ಬಗೆಗೆ ಅಂಕಿ ಸಂಖ್ಯೆಗಳಿವೆ.

ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣಗಳೇ ಇಂದಿನ ಜಗತ್ತಿನಲ್ಲಿ ಅಭಿವೃದ್ಧಿಯ ಸಾಧನಗಳು ಎಂದು ತುತ್ತೂರಿ ಊದುತ್ತಿರುವ ಈ ಕಾಲದಲ್ಲಿ ಈ ವರದಿ ವಾಸ್ತವವಾಗಿ ಈ ನೀತಿಗಳಿಂದಾಗಿ ಏನಾಗುತ್ತಿದೆ ಎಂಬುದನ್ನು ತೋರಿಸುತ್ತಿದೆ.

ಸಾಮ್ರಾಜ್ಯಶಾಹಿಗಳ ಏಜೆಂಟರಂತೆ ಕೆಲಸ ಮಾಡುತ್ತಿರುವ ಎನ್‌ಡಿಎ ಸರ್ಕಾರ ತನ್ನ ಸಾಧನೆಗಳ ಬಗ್ಗೆ ದಿನನಿತ್ಯ ವಾಲಗ ನುಡಿಸುತ್ತಿದೆ. ಈ ಸಾಧನೆಗಳು ಏನು ಎಂಬುದನ್ನು ಈ ವರದಿಯಲ್ಲಿ ನೋಡಬಹುದು. 124ನೇ ಸ್ಥಾನದಿಂದ ಮೇಲಕ್ಕೇರಬೇಕಾದವರು ಕೆಳಕ್ಕಿಳಿಯುತ್ತಿದ್ದೇವೆಂದರೆ ಈ ಸರ್ಕಾರದ ಸಾಧನೆ ಏನು ಎಂಬುದು ಸ್ಪಷ್ಟವಾಗುತ್ತದೆ.

ವಾಜಪೇಯಿ ಸರ್ಕಾರಕ್ಕೆ ಈ ವರದಿ ಒಂದು ಸಲಹೆಯನ್ನು ನೀಡಿದೆ. ಬಡಜನತೆಗೆ ನಿಲುಕುವಂತಹ ಬೆಲೆಗೆ ಆಹಾರವನ್ನು ಒದಗಿಸಿ ಎಂದು. ವಾಜಪೇಯಿ ಸರ್ಕಾರಕ್ಕೆ ಈ ವಿಷಯದಲ್ಲಿ ಜಾಣ ಕಿವುಡಲ್ಲವೆ?

ಅತೀ ದೊಡ್ಡ ಶ್ರೀಮಂತನಿಗೆ 18 ವರ್ಷ ಶಿಕ್ಷೆ!

ನಮ್ಮ ನಿಮ್ಮ ಸಂವಾದ

ಮೇಲಿನ ಘಟನೆಯ ಬಗ್ಗೆ ಆಶ್ಚರ್ಯ ಪಡಬೇಡಿ ! ಇದು ನಡೆದದ್ದು ಭಾರತದಲ್ಲಲ್ಲ, ಚೀನಾದಲ್ಲಿ. ಅಲ್ಲಿ ಪ್ರಭುತ್ವ (ಸರಕಾರ) ಇರುವುದು ಜನರ ಕೈಯಲ್ಲಿ , ಶ್ರೀಮಂತರ ಕೈಯಲ್ಲಿಲ್ಲ. ಆದ್ದರಿಂದಲೇ ತಪ್ಪುಮಾಡಿದವನು, ಚೀನಾದಲ್ಲೇ 2 ನೇ ಅತಿ ಶ್ರೀಮಂತ ವ್ಯಾಪಾರಸ್ಥನೆಂದು ಪರಿಗಣಿಸಿದ್ದರೂ, ಅಲ್ಲಿನ ನ್ಯಾಯಾಲಯ (shenyang Intermediate people's court) ಆತನಿಗೆ 18 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಡಚ್ ನಾಗರೀಕನಾದ ಚೀನಾಮೂಲದ ಆರ್ಚಿಡ್ / ಯೂರೋಪ್ ರಾಷ್ಟ್ರಗಳಲ್ಲಿ ಪ್ರಿಯವಾಗಿರುವ ಆಕರ್ಷಕ ಹೂವಿನ ಗಿಡ ವ್ಯಾಪಾರಿಯ ಹೆಸರು ಯಾಂಗ್ ಬಿನ್. ಜಗತ್ತಿನ ಹಣಕಾಸುವಲಯದ 'ಫೋರ್ಬ್ಸ್' ಮ್ಯಾಗಜಿನ್ ಆತನನ್ನು ಚೀನಾದ 2ನೇ ಅತಿ ದೊಡ್ಡ ಶ್ರೀಮಂತನೆಂದು ಗುರುತಿಸಿದೆ. ಇತ್ತೀಚೆಗೆ ಚೀನಾ ಸರಕಾರವು ಪ್ರಮುಖ ವ್ಯಾಪಾರಸ್ಥರ ತೆರಿಗೆಗಳ್ಳತನ ಮತ್ತಿತರ ಆರೋಪಗಳ ಕುರಿತು ತನಿಖೆ ನಡೆಸುತ್ತಿದ್ದು ಅದರಲ್ಲಿ ಯಾಂಗ್ ಬಿನ್ ಭೂ ಕಳ್ಳತನ, ಒಪ್ಪಂದಗಳಲ್ಲಿ ನಂಚನೆ, ಭ್ರಷ್ಟಾಚಾರ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಣ ವಂಚಿಸಿದ ಆರೋಪಕ್ಕೆ ಗುರಿಯಾಗಿದ್ದನು. ಅದಕ್ಕೆ ಸೂಕ್ತ ಶಿಕ್ಷೆಯನ್ನು ಅಲ್ಲಿನ ನ್ಯಾಯಾಲಯ ವಿಧಿಸಿದೆ.

ಭಾರತದಲ್ಲಿ ದೊಡ್ಡ ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು 67,000 ಕೋಟಿ ರೂ. ಯಷ್ಟು ವಿವಿಧ ತೆರಿಗೆಗಳನ್ನು ಬಾಕಿ ಇರಿಸಿಕೊಂಡಿವೆ. ಅದನ್ನು ವಸೂಲಿ ಮಾಡಲು ಸರಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅವರಿಗೆ ಶಿಕ್ಷೆ ಎಂಬುದು ದೂರದ ಮಾತು. ದೊಡ್ಡದೊಡ್ಡ ಕೈಗಾರಿಕೆಗಳು, ವ್ಯಾಪಾರಸ್ಥರು ವಿವಿಧ ಬ್ಯಾಂಕುಗಳಿಗೆ 100,000 ಕೋಟಿರೂ ಬಾಕಿ ಉಳಿಸಿಕೊಂಡಿದ್ದು ಅದರ ವಸೂಲಾತಿ ಆಗುತ್ತಿಲ್ಲ. ಬದಲಾಗಿ ಬಾಕಿ ಉಳಿಸಿಕೊಂಡವರ ಆಸ್ತಿ ದಿನೇ ದಿನೇ ವೃದ್ಧಿಯಾಗುತ್ತಿದೆ. ಆಡಳಿತ ಚುಕ್ಕಾಣಿಯಲ್ಲಿ ಅವರದೇ ಕೈ ಮುಂದಾಗುತ್ತಿದೆ.

ಉದಾಹರಣೆಗೆ ಕರ್ನಾಟಕದ ವಿಜಯಮಲ್ಯರವರು ನಡೆಸುತ್ತಿರುವ ಮಂಗಳೂರು ರಾಸಾಯನಿಕಗೊಬ್ಬರ ಕಾರ್ಖಾನೆ (ಎಂ.ಸಿ.ಎಫ್) ವಿವಿಧ ಬ್ಯಾಂಕುಗಳಿಗೆ 25 ಕೋಟಿರೂ ನೀಡಬೇಕಾಗಿದೆ. ಈಗ ಅವರು 105 ಕೋಟಿ ಜನರನ್ನು ಆಳುತ್ತಿರುವ 794 ಪ್ರತಿನಿಧಿಗಳಲ್ಲಿ ಒಬ್ಬರು (ರಾಜ್ಯ ಸಭಾ ಸದಸ್ಯರು) ಅವರು ರಾಜ್ಯ ಸಭಾ ಸದಸ್ಯರಾದುದು ಹೇಗೆ ಎಂಬ ಬಗ್ಗೆಯೇ ತೀವ್ರ ಚರ್ಚೆಗಳು ರಾಜಕೀಯವಲಯದಲ್ಲಿ ನಡೆಯುತ್ತಿದೆ. ಅತ್ಯಂತಹೆಚ್ಚು ಆಸ್ತಿ ಹೊಂದಿರುವ ಅಂಬಾನಿ ಗುಂಪು ತನ್ನ ಮೊಬೈಲ್ ಸೇವೆಯ ಜಾಹೀರಾತಿನಲ್ಲಿ ಜನರನ್ನು ವಂಚಿಸುತ್ತಿದೆ. ಟ್ರೈನ ಒಪ್ಪಿಗೆ ಪಡೆಯದೆ ತನ್ನದೇ ಆದ ಬೆಲೆ, ಯೋಜನೆಗಳನ್ನು ರೂಪಿಸುತ್ತಿದೆ. ಇವರಿಗೆ ಯಾವುದೇ ಶಿಕ್ಷೆ ಇಲ್ಲ. ಬದಲಿಗೆ ಅವರ ತಾಳಕ್ಕೆ ಹೆಜ್ಜೆ ಹಾಕುತ್ತಿದೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ. ಭಾರತದಲ್ಲಿಯೂ ಚೀನಾದಂತೆ ಕ್ರಮವಹಿಸಲು ಅಸಾಧ್ಯವೇ? ಇದಕ್ಕೆ ವ್ಯವಸ್ಥೆಯ ಬದಲಾವಣೆ ಅನಿವಾರ್ಯ ಚೀನಾದಂತೆ ಸಮಾಜವಾದಿಯತ್ತ.


ಬಾಲಕೃಷ್ಣ ಶೆಟ್ಟಿ.



ಚೀನಾದ ೨ನೇ ಅತಿದೊಡ್ಡ ಶ್ರೀಮಂತ ವ್ಯಾಪಾರಿ ಎಂದು ಹೇಳಲಾದ ಯಾಂಗ್ ಬಿನ್ ಅವರ ವಂಚನೆ, ಭ್ರಷ್ಟಾಚಾರ ಇತ್ಯಾದಿ ಆರೋಪಗಳ ಕುರಿತು ಶೆನ್ಯಾಂಗ್ ಪ್ರದೇಶದ ಮಧ್ಯಂತರ ಜನಪರ ನ್ಯಾಯಾಲಯ (Intermidiate Peopls Court) ದಲ್ಲಿ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿ ನ್ಯಾಯಾಲಯದ ಒಳ ಹೊಕ್ಕುತ್ತಿರುವ ಜನರು



ಬೆಳಗ್ಗೆ ಶಾಲೆಗೆ ಹೋಗುವ ಮಕ್ಕಳು ಗಂಜಿಯುಂಡು ಶಾಲೆಗೆ ಹೋದರೆ ಮಧ್ಯಾಹ್ನ ಕೇವಲ ನೀರು ಕುಡಿದು ಹಸಿವು ಇಂಗಿಸಿಕೊಳ್ಳುವ ಮಕ್ಕಳು, ಶಾಲೆ ಬಿಟ್ಟರೂ ಬಿಡದ ಮಳೆ, ಮಳೆಯಲ್ಲಿ ನೆನೆದು ಮನೆ ಸೇರಿ 'ಗಂಜಿ ಇಕ್ಕಿ' ಎಂದ ಕಥೆಯ ನಾಯಕ, ಇಲ್ಲವೆಂದು ಹೇಳಿದ ಮೀನಾಕ್ಷಕ್ಕ, ಅವಳ ಬಗೆಗಿನ ಅಭಿಪ್ರಾಯ ಈ ಬಗ್ಗೆ ಓದಿರುವಿರಿ. ಮುಂದೆ....



ಕರ್ಕಟಕ

ಕನ್ನಡಕ್ಕೆ
ಡಾ. ಮೋಹನ್ ಕುಂಬಾರ್

ಎಂ.ಟಿ.ವಾಸುದೇವನ್ ನಾಯರ್

'ಕಾಲ ಕೆಟ್ಟರೆ ಎಲ್ಲವೂ ಹಾಗೆಯೇ'

ಕಣ್ಣಕ್ಕರಾಯಿ ತಲೆಗೆ ಟೊಪ್ಪಿಕೊಡೆ ಹಾಕಿಕೊಂಡು ಅಂಗಳದ ಅಂಚಿನಲ್ಲಿ ನಡೆದು ಮೆಟ್ಟಿಲೇರಲು ಹೋಗುವಷ್ಟರಲ್ಲಿ ಚಿಕ್ಕಮ್ಮ ಕೇಳಿದರು.

'ಕಣಕ್ಕರಾಯಿ ನಿನ್ನ ಸಂಚಿಯಲ್ಲಿ ಎಲೆಯುಂಟೇ? ಅಂಗಡಿಗೆ ಕಳುಹಿಸೋಣ ಎಂದರೆ ಒಬ್ಬರೂ ಸಿಗುವುದಿಲ್ಲ'.

ನಾನು ಅಮ್ಮನತ್ತ ನೋಡಿದೆ. ಚಿಕ್ಕಮ್ಮ ಕೀಳು ಜಾತಿಯವರಲ್ಲೆಲ್ಲ ಎಲೆ, ತಂಬಾಕು ಕೇಳುವಾಗೆಲ್ಲ ಅಮ್ಮನಿಗೆ ಸಿಟ್ಟು ನೆತ್ತಿಗೇರುತ್ತದೆ.

ಕಣಕ್ಕರಾಯಿ ಮಡಿಲಿಂದ ಸಂಚಿ ತೆಗೆದು ಹುಡುಕಿ ಒಂದು ಎಲೆ ತುಂಡು ಜಗಲಿಯ ಬದಿಯಲ್ಲಿಟ್ಟು ಹೇಳಿದ.

'ಅಮ್ಮಾವ್ರೆ ಬಾಡಿದ ಒಂದು ತುಂಡು ಮಾತ್ರ ಇದೆ'.

ಚಿಕ್ಕಮ್ಮ ಊಟವನ್ನಾದರೂ ಮಾಡದೇ ಇದ್ದಾರು. ಆದರೆ ಎಲೆಯಡಿಕೆ ಹಾಕದಿರುವುದು ಸಾಧ್ಯವಿಲ್ಲ. ಅಡಕೆ ಇಲ್ಲವಾದರೂ ತೆಂಗಿನ ಬೇರೂ ಸಾಕು. ಕೊಯ್ಲಿನ ಸಮಯದಲ್ಲಿ ಅಮ್ಮನಿಗೆ ಗೊತ್ತಾಗದಂತೆ ಭತ್ತ ಕೊಟ್ಟು ಎಲೆ, ತಂಬಾಕುಗಳನ್ನು ತರಿಸಿಕೊಳ್ಳುವುದನ್ನು ನಾನು ಕಂಡಿದ್ದೇನೆ.

ಕಲ್ಯಾಣಿಕುಟ್ಟಿ ಚಾವಡಿಗೆ ಬಂದು ಅಮ್ಮನ ಹತ್ತಿರ ಕುಳಿತಳು.

'ಎಷ್ಟು ಸಿಕ್ಕಿತಕ್ಕ?'

'ಮೂರು ಪಾವ'.

'ಊಂ ಅಂದಂದು ರೇಷನ್ ಕೊಂಡುಕೊಂಡು ಊಟ ಮಾಡುವವರಲ್ಲಿ ಹೇಗೆ ತಾನೇ ಇದ್ದೀತು?'

'ಕೊತ್ತಲಂಗಾಡಿಗೆ ಒಬ್ಬನನ್ನು ಕಳುಹಿಸಬಹುದಿತ್ತಲ್ಲ? ಅವರು ಸಾಲವಾಗಿ ನಾಲ್ಕು ಮೂಟೆ ಭತ್ತ ಕೊಂಡುಕೊಂಡಿದ್ದಾರಂತೆ ಮಾಳ್ವಕ್ಕ'

'ಕೇಳಿದರೆ ಕೊಟ್ಟಾರು. ಆದರೂ ನಾಳೆ ಊರೆಲ್ಲ ಡಂಗುರ ಹೊಡೆಸ್ಯಾರು. ಉಪವಾಸವಿದ್ದರೂ ನನ್ನ ಮಕ್ಕಳು ನಾಲ್ಕು ಜನರ ಮುಂದೆ ತಲೆ ಎತ್ತಿ ನಡೆಯಬೇಕು.'

ಹಾಗೆಂದು ಅಮ್ಮ ಯಾವಾಗಲೂ ಹೇಳುತ್ತಿರುವ ಲೆಕ್ಕಗಳನ್ನು ಹೇಳತೊಡಗಿದರು. ಅಪ್ಪ ತಿಂಗಳಿಗೆ ನಾಲ್ವತ್ತು ರೂಪಾಯಿ ಕಳುಹಿಸುತ್ತಾರೆ. ಕೆಲವು ತಿಂಗಳುಗಳಲ್ಲಿ ಅಣ್ಣ ಹತ್ತು ರೂಪಾಯಿಗಳನ್ನು ಕಳುಹಿಸುವುದುಂಟು.

'ಒಂದನೇ ತಾರೀಕಾದರೆ ಏನಿಲ್ಲವಾದರೂ ಹತ್ತೈವತ್ತು ರೂಪಾಯಿ ಕೈಗೆ ಬರುತ್ತದೆ. ಈ ಶನಿಸಂತಾನಗಳನ್ನೆಲ್ಲ ಸಾಕಲು ಇದರಲ್ಲೇ ಆಗಬೇಕಲ್ಲ'!

ಅಮ್ಮ ಹೇಳುವ ಶನಿಸಂತಾನದಲ್ಲಿ ಅಚ್ಚು ಮಾವ, ಚಿಕ್ಕಮ್ಮ ಚಿಕ್ಕಮ್ಮನ ಮಕ್ಕಳು, ಮೀನಾಕ್ಷಕ್ಕ ಎಲ್ಲರೂ ಒಳಗೊಳ್ಳುತ್ತಾರೆ.

'ಆಚೆಕರೆಯಿಂದ ಮಕ್ಕಳು ಬರಲಿಲ್ಲವೆ ಈ ಬಾರಿ?'

ಆಚೆಕರೆಯ ಮಕ್ಕಳು ಎಂದರೆ ಹೊಳೆಯ ಆಚೆದಡದಲ್ಲಿ ನೆಲೆಸಿರುವ ಅಚ್ಚು ಮಾವನ ಮಕ್ಕಳು. ಆಷಾಢವಾದರೆ ಅವರು ಆಚೆಕರೆಯಿಂದ ಆಗಾಗ ಊಟಕ್ಕೆ ಬರುತ್ತಾರೆ. ಅವರು ಏಳೆಂಟು ದಿವಸ ಇಲ್ಲಿ ಇದ್ದು ಹೋಗುವಾಗ ಅಜ್ಜಿ ಹೇಳುತ್ತಾಳೆ. 'ನಾಳೆಯೋ ನಾಡಿದ್ದೊ ಇತ್ತ ಬಂದು ಹೋಗಿ!'

ಅಜ್ಜಿ ಅಚ್ಯುತನ ಮಕ್ಕಳ ಕಷ್ಟಪರಂಪರೆಗಳನ್ನು ಹೇಳಲು ತೊಡಗಿದರೆ ಚಿಕ್ಕಮ್ಮ ಅಜ್ಜಿಯನ್ನು ಬೈಯ್ಯತೊಡಗುವರು.

'ಈ ಮುದುಕಿಯ ಪಕ್ಷಪಾತ ಯಾರಿಗೂ ಹಿಡಿಸಲಾರದು. ಯಾವಾಗ ನೋಡಿದರೂ ಆಚೆಕರೆಯ ಮಕ್ಕಳ ಕಷ್ಟಗಳ ವರ್ಣನೆಯೇ. ನನಗೂ ಇದ್ದಾರಲ್ಲ ಇಬ್ಬರು ಮಕ್ಕಳು. ಅಕ್ಕನಿಗೂ ಹತ್ತು ಹನ್ನೆರಡು ವರ್ಷದ ಒಬ್ಬ ಮಗನಿದ್ದಾನೆ. ಅವರನ್ನು ಕರೆಯುವುದಾಗಲಿ, ಮಾತನಾಡುವುದಾಗಲಿ ಊ ಹೂಂ. ಆ ಮಕ್ಕಳು ಬಂದರೆ ಮುದುಕಿಗೆ ವಾತವೂ ಇಲ್ಲ ಉಬ್ಬಸವೂ ಇಲ್ಲ ಅವರನ್ನು ಮೀಯಿಸಲು, ಬಟ್ಟೆ ಒಗೆಯಲು, ಮಲಗಿಸಲು ಇದಕ್ಕೆ ಮತ್ತೆ ಸಮಯೆಲ್ಲ'.

ಚಿಕ್ಕಮ್ಮ ಹೇಳುವುದೆಲ್ಲವೂ ನಿಜವಲ್ಲ. ಏಕೆಂದರೆ ನೆಗಡಿಯಾಗಿ ಸೀನುವುದನ್ನು ಕೇಳಿದರೆ ಅಜ್ಜಿ ಹತ್ತಿರ ಕರೆಯುವಳು. ಮಣ್ಣಿನ ಮೊಗೆಯಲ್ಲಿ ಮಾಡಿಟ್ಟ ಪುಡಿಯನ್ನು ತಲೆಗೆ ಹಾಕಿ ತಿಕ್ಕುವಳು. ಮತ್ತು ಮೂಗಿನಲ್ಲಿ ಬೆರಳಿಟ್ಟು ಉಸಿರೆಳೆಯಲು ಹೇಳುವಳು.

ಅಮ್ಮ ಚಿಕ್ಕಮ್ಮನಿಗೆ ಆದೇಶಿಸುವರು.

'ಏಯ್ ಪಾವಾದರೆ ಪಾವು. ಇಲ್ಲಿಯಾದರೆ



ಕೊಯ್ಲ ಇದೆಯಲ್ಲ. ಅವರು ವರ್ಷದ ಮುನ್ನೂರ ಅರುವತ್ತು ದಿವಸವೂ ಅಕ್ಕಿ ಕೊಂಡುಕೊಳ್ಳಬೇಡವೆ?

ಆಷಾಢದಲ್ಲಿ ಚಂದ್ರ, ಕಮಲರು ಆಗಾಗ ಪೇರಶ್ಶನೂರಿಗೆ ಅತಿಥಿಗಳಾಗಿ ಹೋಗುತ್ತಾರೆ. ಅಚ್ಚು ಮಾವನ ಮಕ್ಕಳು ಇಲ್ಲಿಗೆ ಬರುತ್ತಾರೆ. ನಾನು ಮಾತ್ರ ಇಲ್ಲಿಯೇ ಇರಬೇಕು. ಏಕೆಂದರೆ ಅಪ್ಪನ ಮನೆ ಬಹಳ ದೂರದ ಅಂಡತ್ತೋಡು. ಇಪ್ಪತ್ತೈದು ಮೈಲುಗಳನ್ನು ಬಸ್ಸಿನಲ್ಲಿಯೇ ಹೋಗಬೇಕು. ಮತ್ತೆ ದೋಣಿಯಲ್ಲಿ ನದಿ ದಾಟಬೇಕು.

ಅಪ್ಪ ಊರಿಗೆ ಬರುವಾಗ ಮಾತ್ರ ನಾವು ಅಲ್ಲಿಗೆ ಹೋಗುವುದು. ಅಮ್ಮನಿಗೆ ಅದೂ ಅಷ್ಟು ಹಿತವಲ್ಲ. ಏಕೆಂದರೆ ಅಮ್ಮನಿಗೆ ಅಜ್ಜಿಯನ್ನು ಕಂಡರಾಗುವುದಿಲ್ಲ. ಹೆಂಡತಿಯ ಮನೆಯವರನ್ನೆಲ್ಲ ಸಾಕುವ ಭರದಲ್ಲಿ ಅಪ್ಪ ತನ್ನ ಮನೆಯ ಕಡೆ ಗಮನಹರಿಸುವುದಿಲ್ಲ ಎಂದು ಅಜ್ಜಿ ಹಲವರಲ್ಲಿ ದೂರಿ ಮಾತನಾಡುತ್ತಾಳೆ.

ಕಲ್ಯಾಣಿಕುಟ್ಟಿ ಸುಮ್ಮನೆ ನಿಂತು ಊರಿನ ಸುದ್ದಿಗಳನ್ನು ಮಾತನಾಡತೊಡಗಿದಾಗ ಅಮ್ಮ ಅಂಗಳದ ಕಸ ಧೂಳುಗಳನ್ನು ಗುಡಿಸುವಂತೆ ಹೇಳಿದಳು.

ಕಲ್ಯಾಣಿಕುಟ್ಟಿ ಉಟ್ಟ ಮುಂದಿನ ತುದಿಯನ್ನು ಸೊಂಟಕ್ಕೆ ಸಿಕ್ಕಿಸಿ ಅಂಗಳ ಗುಡಿಸುವುದನ್ನು ನೋಡಲು ಸೊಗಸಾಗಿರುತ್ತದೆ. ಎಣ್ಣೆಗಂಟು ಕಟ್ಟಿದ ಕೂದಲು ಭುಜದಲ್ಲಿ ಇಳಿಬಿದ್ದು ನೆಲಕ್ಕೆ ತಾಗುವಂತೆ ಭಾಸವಾಗುತ್ತದೆ. ಕೆಂಪು ಗಾಜಿನ ಬಳೆಗಳು ಸದ್ದು ಮಾಡುತ್ತಿರುತ್ತವೆ.

(ಮತ್ತೂ ಮೂರು ವರ್ಷಗಳ ನಂತರವೇ ಕಲ್ಯಾಣಿಕುಟ್ಟಿ ಸುಂದರಿ ಎಂದು ನನ್ನ ಅರಿವಿಗೆ ಬಂದುದು)

ಗಂಜಿ ಕುದಿಯಲಾರಂಭಿಸಿರಬಹುದೋ ಎಂದು ಮನಸ್ಸಿನಲ್ಲಿಯೇ ಲೆಕ್ಕಹಾಕಿ ಕೆಂಪಾದ ಗಾಜಿನ ಬಳೆಗಳ ಸದ್ದು ಕೇಳುತ್ತಾ ಕಂಬಕ್ಕೊರಗಿ ಕುಳಿತುಕೊಂಡಿದ್ದಾಗ ಗುಡಿಸುವುದನ್ನು ನಿಲ್ಲಿಸಿ ಗೇಟಿನತ್ತ ನೋಡಿ ಕಲ್ಯಾಣಿಕುಟ್ಟಿ ಹೇಳಿದಳು:

ಮಾಳ್ವಕ್ಕ ಯಾರೋ, ಬರುತ್ತಿದ್ದಾರೆ! ಇಲ್ಲಿಗೇ ಇರಬೇಕು'!.

ನಾನೂ ನೋಡಿದೆ. ಇತ್ತ ಕಡೆಗೇ ಶರ್ಟು ತೊಟ್ಟ ಗಂಡಸು ಬರುತ್ತಿದ್ದಾನೆ! ಅಮ್ಮನೂ ಸರಿದು ನೋಡಿದರು.

ಗೇಟು ದಾಟಿ ಮೆಟ್ಟಲೇರಿ ಮೇಲೆ ತಲುಪಿದಾಗ ವ್ಯಕ್ತಿಯನ್ನು ಗುರುತಿಸಿದೆ.

'ಅಮ್ಮ ಶಂಕುಣ್ಣೆಯಣ್ಣ'

'ಯಾವ ಶಂಕುಣ್ಣೆಯಣ್ಣ'

'ಅಂಡತ್ತೋಡಿನ ಶಂಕುಣ್ಣೆಯಣ್ಣ'

'ಯೋ ದೇವರೇ' ಅಮ್ಮ ಚಕಿತಗೊಂಡು ಕಲ್ಯಾಣಿಯಲ್ಲಿ ಹೇಳಿದರು.

'ಕಲ್ಯಾಣಿ ಓಡು. ಅಡುಗೆ ಕೋಣೆಗೆ ಹೋಗಿ ಇದ್ದುದನ್ನು ಬಸಿಯಲು ಹೇಳು'.

ಹುಳು ಹಿಡಿದ ಕರೇ ಹಲ್ಲುಗಳನ್ನು ತೋರಿಸಿ ನಗುತ್ತಾ ಕೊಡೆ ಮಡಚಿ ಶಂಕುಣ್ಣೆಯಣ್ಣ ಹೆಣ್ಣಿನ ಸ್ವರದಲ್ಲಿ ಕೇಳಿದರು:

'ಏನತ್ತೆ? ಗುರುತು ಹತ್ತಿತ್ತೋ?'

'ಶಂಕುಣ್ಣೆಯಲ್ಲವೋ?' ಏನು ಹಲಸಿನ ಮರ ಹೊಸತಾಗಿ ಕಾಯಿ ಬಿಟ್ಟಿದೆಯಲ್ಲ.

'ಬಾ ಕುಳಿತುಕೋ. ಒಂದು ಗಿಂಡಿ ನೀರು ತಗೊಂಡು ಬಂದು ಕೊಡು ಮಗು'

'ನಾನೇ ತೆಗೆದುಕೊಳ್ಳುತ್ತೇನೆ'.

ಜಗಲಿಯ ಮೂಡು ಭಾಗದ ಕೊನೆಗೆ ದಿನ್ನೆಯ ಸಮೀಪ ಇಟ್ಟಿದ್ದ ನೀರು ತೆಗೆದು ಶಂಕುಣ್ಣೆಯಣ್ಣ ಕಾಲು ತೊಳೆದುದು ಒಳ್ಳೆಯಲಾಯಿತು. ಏಳನೆಯ ಕ್ಲಾಸಿನಲ್ಲಿ ಕಲಿಯುವ ನಾನು ಅವರಿಗೆ ಕಾಲು ತೊಳೆಯಲು ನೀರು ತಂದು ಕೊಡುವುದು!

'ಆ ಹುಲ್ಲುಚಾಪೆ ಹಾಸು ಮಗು!'

'ನಾನು ಇಲ್ಲೇ ಕುಳಿತುಕೊಳ್ಳುತ್ತೇನೆ ಅತ್ತೆ'

'ಅಲ್ಲಪ್ಪ, ಅದೆಲ್ಲ ಒಂದು ಮರ್ಯಾದೆ ಅಲ್ಲವೇ?'

ಬಿದಿರ ಕಾಲಿರುವ ಹಳೆಯ ಕೊಡೆಯನ್ನು ಅಡ್ಡಕ್ಕೆ ನೇತು ಹಾಕಿ ಚಾವಡಿಯಲ್ಲಿದ್ದ ಒರಗು ಮಂಚದ ಮೇಲೆ ಹತ್ತಿ ಕುಳಿತರು.

'ಅಂಡತ್ತೋಡಿನಿಂದಲೇಯೇನು'?

'ಆ'

'ವಿಶೇಷಗಳೇನಿಲ್ಲವಲ್ಲ?'

ಹೂಂ ಹೀಗೇ. ಇಷ್ಟು ದಿವಸಗಳಿಂದ ಅತ್ತೆಯನ್ನು ಮಕ್ಕಳನ್ನು ಬಂದು ನೋಡಬೇಕು ಎಂದು ಆಲೋಚಿಸುತ್ತಿದ್ದೆ. ಈಗಲೇ ಬಿಡುವಾದುದು'

'ಅದೆಲ್ಲ ಬೇಕಾದ್ದೇ ಅಲ್ಲವೇ?'

ಅಮ್ಮ ಅಜ್ಜಿಯ ಮತ್ತು ಅಪ್ಪನ ಸೋದರಿಯರ ವಿಷಯಗಳನ್ನೆಲ್ಲ ವಿಚಾರಿಸಿದರು. ಶಂಕುಣ್ಣೆಯಣ್ಣನ ಮನೆಯ ವಿಶೇಷಗಳನ್ನೆಲ್ಲ ಕೇಳಿದರು:

'ಉಣ್ಣಿ ಯಾವ ಕ್ಲಾಸಿನಲ್ಲಿಗ?'

ಅವರ ಮುಖ ನೋಡದೇ ನಾನು ಉತ್ತರಿಸಿದೆ.

'ಏಳರಲ್ಲಿ'

ನನಗೆ ಅವರ ಮುಖ ನೋಡುವುದು ಮೊದಲೇ ಮನಸ್ಸಿಲ್ಲ. ಸಿಡುಬಿನ ಗುಳಿಗಳು ಬಿದ್ದ ಮುಖ. ಯಾವಾಗಲೂ ಕಾರಣವಿಲ್ಲದಿದ್ದರೂ ಹುಳು ಹಿಡಿದು ಅಸಹ್ಯವೆನಿಸುವ ಹಲ್ಲುಗಳನ್ನು ಹೊರಗೆ ತೋರಿಸಿಕೊಂಡೇ ಇರುತ್ತಾರೆ. ಅಪ್ಪನ ಯಾವುದೋ ಲೆಕ್ಕದಲ್ಲಿ ದೂರದ ಅಳಿಯ. ಅಪ್ಪನ ಜೊತೆ ನಾವು ಅಲ್ಲಿಗೆ ಹೋದಾಗ ಕಂಡ ಪರಿಚಯ ಮಾತ್ರವೇ ಇರುವುದು. ಅಪ್ಪನೋ, ಚಿಕ್ಕಪ್ಪನೋ ರಜೆಯಲ್ಲಿ ಬಂದಾಗ ಮಾತ್ರ ಶಂಕುಣ್ಣೆಯಣ್ಣನನ್ನು ಅಲ್ಲಿ ಕಾಣಬಹುದು. ಅಮಿಣ್ಣೆಯೂ, ಲಕ್ಷ್ಮಿಯೂ ಶಂಕುಣ್ಣೆಯಣ್ಣನಿಗೆ ಕೇಳುವಂತೆ ಹೇಳುತ್ತಾರೆ. 'ದೊಡ್ಡಪ್ಪ ಬರುವ ಸಮಯಕ್ಕೆ ಹತ್ತಿರಾಗುತ್ತಾರೆ. ಮತ್ತೆ ತಿರುಗಿ ನೋಡುವುದಿಲ್ಲ.'

ಅಕ್ಕ ಅರೆಯುವುದು, ನೀರು ಸೇದುವುದು, ಅಂಗಡಿಗೆ ಹೊಗಿ ಸಾಮಾನು ತರುವುದು ಮೊದಲಾದ ಕೆಲಸಗಳನ್ನೆಲ್ಲ ಮಾಡುವರು.

ನಾನು ಮೆಲ್ಲನೆ ಒಳಗೆ ಹೋದೆ. ಮೀನಾಕ್ಷಕ್ಕ ಅನ್ನ ಬಸಿಯುತ್ತಿದ್ದರು. ಕಲ್ಯಾಣಿ ಕುಟ್ಟಿ ಜಾಗ ಬಿಟ್ಟಿದ್ದಳು.

'ಯಾರು ಉಣ್ಣಿ?'

'ಶಂಕುಣ್ಣೆಯಣ್ಣ, ಅಂಡತೋಡಿನಲ್ಲಿ ಒಬ್ಬರು ಶಂಕುಣ್ಣೆಯಣ್ಣನಿಲ್ಲವೇ ಅವರು'.

'ನೂರಾರು ಕಡೆಗೆ ಅಲೆದಾಡಿ ಮೂರು ಪಾವು ಅಕ್ಕಿ ಸಿಕ್ಕಿದೆ. ಆಗಲೇ ಒಬ್ಬ ನೆಂಟನ ಆಗಮನ!'

ಮೀನಾಕ್ಷ್ಯಕ್ಕ ಇದನ್ನು ಗಟ್ಟಿಯಾಗಿಯೇ ಹೇಳಿದಳು. ಅದನ್ನು ಕೇಳಿಸಿಕೊಂಡು ಬಂದ ಅಮ್ಮ ಸಿಟ್ಟುಗೊಂಡರು.

'ಮಾತಾಡಬೇಡ ಬುದ್ಧಿಗೆಟ್ಟವಳೆ. ಅವರವರ ಬಡತನ ಅವರವರಿಗೆ ಗೊತ್ತಿದ್ದರೆ ಸಾಕು'

ಮೀನಾಕ್ಷ್ಯಕ್ಕ ಮಡಕೆ ನೆಟ್ಟಗೆ ಮಾಡಿ ಮುಚ್ಚಳದಲ್ಲಿ ಅಂಟಿಕೊಂಡಿದ್ದ ಅಗಳುಗಳನ್ನು ತಟ್ಟಿ ಮಡಕೆಗೆ ಹಾಕಿದರು.

'ಶಂಕುಣ್ಣಿಯೋ ಆದರೇನು? ಅವನು ಅಂಡತ್ತೋಡಿನಿಂದ ಬರುವ ಒಬ್ಬ ಗಂಡಸಲ್ಲವೇ.. ಅಲ್ಲಿಗೆ ಹೋಗಿ ನೂರು ಜನರಲ್ಲಿ ಹೇಳಿಯಾನು.. ಅತ್ತೆಯ ಮನೆಯ ವಿಶೇಷಗಳನ್ನು. ನಿನಗೆ ತಲೆಬುಡ ಗೊತ್ತಿಲ್ಲ. ಆದ್ದರಿಂದ ಹೇಳುತ್ತಿದ್ದೇನೆ.. ಅಂಡತ್ತೋಡಿನಿಂದ ಯಾವುದೇ ಒಬ್ಬ ಹೊಲೆಯ ಬಂದರೂ ಅವನನ್ನು ಮರ್ಯಾದೆಯಿಂದ ಕಾಣಬೇಕು. ನಾನು ಮಾನ ಮರ್ಯಾದೆಗಳೊಂದಿಗೆ ಹೋಗಿ ಬಾಳಬೇಕಾದ ಜಾಗ ಅದು'.

ನಾಲ್ಕು ಮೊಳ ನಾಲಗೆಯಿರುವ ಮೀನಾಕ್ಷ್ಯಕ್ಕ ಮಾತನಾಡಲಿಲ್ಲ.

ಅಮ್ಮ ಎಲ್ಲರನ್ನು ಬೈಯ್ಯುವರು ಅಚ್ಚುಮಾವನನ್ನು ಕೂಡಾ ಬಿಡುವುದಿಲ್ಲ. ಯಾರೂ ಎದುರುತ್ತರ ಕೊಡುವುದಿಲ್ಲ. ಯಾಕೆಂದರೆ ನಮ್ಮ ಆಸ್ತಿಯ ಸಾಲ ತೀರಿಸಿದ್ದು ಅಪ್ಪ. ಅಪ್ಪನ ಹಣ ಬರುವುದರಿಂದಲೇ ಈ ಶನಿಸಂತಾನಗಳು ದಿನ ಕಳೆಯುವುದು.

'ಉಣ್ಣಿ ನೀನು ಆ ಚೆಟ್ಟಿಯಾರರ ಮನೆಗೆ ಹೋ ಒಂದಾಣೆಗೆ ಹಪ್ಪಳ ತೆಗೆದುಕೊಂಡು ಬಾ. ಹಣ ನಾನು ನಾಳೆ ಕೊಟ್ಟು ಕಳುಹಿಸುತ್ತೇನೆಂದು ಹೇಳು ಹೋಗುವಾಗ ಆ ಕಣಕ್ಕರಾಯಿ ಹುಡುಗನಲ್ಲಿ ಒ ಓಡಿ ಬರಲು ಹೇಳು. ಮೀನಾಕ್ಷಿ ಮರದಲ್ಲಿರು ಕಾಯಿಗಳಲ್ಲಿ ನೋಡಿ ಬಲಿದುದೊಂದನ್ನ ಕೊಯಿಸು.... ತೆಂಗಿನಕಾಯಿ ಚಟ್ನಿ ಮಾಡಬೇಕು ಬರೇ ಬಾಳೆಗಡ್ಡೆಯ ಪಲ್ಯ ಮಾತ್ರ ಮಾ ಅಂಡತ್ತೋಡಿನವರಿಗೆ ಬಡಿಸುವುದಾದರೂ ಹೇ

ಮುಂದುವರಿಯುತ್ತ

91ನೇ ಐಎಲ್‌ಒ ಸಮ್ಮೇಳನದಲ್ಲಿ ಡೈರೆಕ್ಟರ್ ಜನರಲ್ ಉದ್ಗಾರ

"ಜಾಗತೀಕರಣ ಕೆಲಸ ಮಾಡಿಲ್ಲ"

ಇದನ್ನು ಹೇಳಿದ್ದು ಕಾರ್ಮಿಕರ ನಾಯಕರಲ್ಲ. ...ಚೆಗೆ ಜನೇವಾದಲ್ಲಿ ಜೂನ್ - 3 ರಿಂದ 19 ...ರೆಗೆ ನಡೆದ ಐಎಲ್‌ಒ(ಅಂತರಾಷ್ಟ್ರೀಯ ...ರ್ಮಿಕರ ಸಂಘಟನೆ) ದ 91 ನೇ ಸಮ್ಮೇಳನದಲ್ಲಿ ...ರ ಡೈರೆಕ್ಟರ್ ಜನರಲ್ ಮಂಡಿಸಿದ ...ಯಲ್ಲಿ ಇದನ್ನು ಹೇಳಿದ್ದಾರೆ. ಸಾಮ್ರಾಜ್ಯಶಾಹಿ ...ತೀಕರಣದ ವಿರುದ್ಧ ಈ ಸಮ್ಮೇಳನದಲ್ಲಿ ...ರೋಶ ವ್ಯಕ್ತಪಡಿಸಿದ್ದು ಕಾರ್ಮಿಕರ ...ನಿಧಿಗಳಿಂದ ಮಾತ್ರವಲ್ಲ, ಸರ್ಕಾರಗಳ ಪ್ರತಿನಿಧಿಗಳಿಂದ- ಅದರಲ್ಲೂ ಮೂರನೇ ...ನ ವಿಕಾಸಶೀಲ ದೇಶಗಳ ನಾಯಕರುಗಳಿಂದ. ...ರ್ ಜನರಲ್ ತಮ್ಮ ವರದಿಯಲ್ಲೇ ನಮಗೆ

ಕಾರ್ಮಿಕರ ಹೋರಾಟದ ಅಲೆಗಳ ಮಾರ್ದನಿ

ಐಎಲ್‌ಒ ದ ಸಮ್ಮೇಳನದಲ್ಲಿ ಕಾರ್ಮಿಕರು, ಮಾಲೀಕರು ಮತ್ತು ಸರ್ಕಾರಿ ಪ್ರತಿನಿಧಿಗಳು ಹೀಗೆ ಮೂರು ಪ್ರಮುಖ ವಿಭಾಗದವರು ಭಾಗವಹಿಸುತ್ತಾರೆ. ಸಾಮಾಜಿಕ ಕಲ್ಯಾಣ (ಪೆನ್‌ಶನ್ ಮುಂತಾದ)ದ ವಿರುದ್ಧ ಫ್ರೆಂಚ್ (ಮತ್ತು ಇತರ ಯುರೋಪಿಯನ್ ದೇಶಗಳಿಂದ) ಕಾರ್ಮಿಕರ ಮುಷ್ಕರದ ಅಲೆ ಸಮ್ಮೇಳನದ ಸಮಯದಲ್ಲೇ ನಡೆಯುತ್ತಿದ್ದು, ಅವರ ಮೇಲೆ ಪರಿಣಾಮವನ್ನು ಬೀರಿತು. ಸಮ್ಮೇಳನದಲ್ಲಿದ್ದ ಕಾರ್ಮಿಕರ ವಿಭಾಗ ಹೋರಾಟಗಳ ಮಹಾಪೂರವನ್ನು ಸ್ವಾಗತಿಸಿತು. ಈಗಿನ ಕಾರ್ಮಿಕರು ಸಂಘಟನೆಗಳು, ಅಂತರಾಷ್ಟ್ರೀಯ ಬಟ್ಟೆ, ಉಡುಪು ಮತ್ತು ಚೈನಾದ ಕಾರ್ಮಿಕರ ಫೆಡರೇಶನ್, ಪರಾಗುವೆ ಕಾರ್ಮಿಕರ ಸಂಘಟನೆಗಳು, ವೆನೆಜುವೆಲಾ ಕಾರ್ಮಿಕರ ಸಂಘಟನೆಗಳು, ಅಂತರಾಷ್ಟ್ರೀಯ ಸರ್ಕಾರಿ ನೌಕರರ ಯೂನಿಯನ್, ಕಟ್ಟಡ ಸರಕುಗಳ ಕೈಗಾರಿಕಾ ಕಾರ್ಮಿಕರ ಯೂನಿಯನ್, ಮುಂತಾದವುಗಳ ಪ್ರತಿನಿಧಿಗಳು - ನಾಯಕರು ಚರ್ಚೆಯಲ್ಲಿ ಭಾಗವಹಿಸಿದ ಪ್ರಮುಖರು.

ಮುಖ್ಯ ಕಲಾಪಗಳು

ಸಮ್ಮೇಳನದ ಮುಖ್ಯ ಕಲಾಪಗಳನ್ನು ನಾಲ್ಕು ಉಪಸಮ್ಮೇಳನಗಳಲ್ಲಿ ಚರ್ಚಿಸಲಾಯಿತು. ಆ

ಉಳಿದ ಉಪಸಮ್ಮೇಳನಗಳಲ್ಲೂ ಜಾಗತೀಕರಣದ ಪರಿಣಾಮವಾಗಿ ಆಗಿರುವ (ಕಾರ್ಮಿಕರಿಗೆ) ಹಾನಿಕಾರಕ ಬದಲಾವಣೆಗಳನ್ನು ವಿವರವಾಗಿ ಪರಿಶೀಲಿಸಿ ಹೊಸ ನೀತಿ ರೂಪಿಸಲು ಸಮ್ಮೇಳನ ನಿರ್ಧರಿಸಿತು.

ಭಾರತದಿಂದ ರಾಷ್ಟ್ರೀಯ ಕಾರ್ಮಿಕ- ಸಂಘಟನೆಗಳು ಅಥವಾ ಕೆಲವು ಅಂತರಾಷ್ಟ್ರೀಯ ಫೆಡರೇಶನ್‌ಗಳ ನಾಯಕರು ಹಲವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸುಕೋಮಲ ಸೇನ್, ತಪಾನ್ ಸೇನ್, (ಸಿ.ಐ.ಟಿ.ಯು) ಅಶೋಕ್ ಸಿಂಗ್



ಜಾಗತೀಕರಣ ಕೆಲಸ ಮಾಡಿಲ್ಲ.....

ಜಾಗತೀಕರಣ ಕೆಲವರಿಗೆ ಸಂಪತ್ತು ಮತ್ತು ಕಲ್ಯಾಣ ತಂದಿದೆ. ಆದರೆ ಹಲವರು ಅದನ್ನು ಅಸಮಾನತೆ ಮತ್ತು ಸಾಮಾಜಿಕವಾಗಿ ಹೊರಗಿಡುವ ಧೋರಣೆಯ ಮೂಲವಾಗಿ ಕಾಣುತ್ತಾರೆ. ಅಸಮಾನತೆ- ದೇಶಗಳ ನಡುವೆ, ಶ್ರೀಮಂತ- ಬಡವರ ನಡುವೆ ವಿಪರೀತವಾಗಿ ಹೆಚ್ಚಿದೆ. ಆದರೂ ಸರ್ಕಾರಿ ನೀತಿಗೆ ಸರ್ವಸಾಮಾನ್ಯ ಶಿಫಾರಸು - ರಭಸವಾಗಿ ಬೆಳವಣಿಗೆ ಮಾಡಿ. ಸಂಪತ್ತು ಆಮೇಲೆ ಹಂಚಬಹುದು. ಆದರೆ ಈ ನೀತಿ ಕೆಲಸ ಮಾಡಿಲ್ಲ----"

ಜಿನೇವಾದಲ್ಲಿ ಐಎಲ್‌ಒ ದ 91 ನೇ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಡೈರೆಕ್ಟರ್ ಜನರಲ್‌ರವರ ವರದಿ "ಬಡತನದಿಂದ ಹೊರಬರಲು ಕೆಲಸದ ಭಾಗ"

...ಣಿಗೆ ಮತ್ತು ಸಮಾನತೆ ಎರಡೂ ಬೇಕು. ...ನ್ನು ಹಿಂದೆ ಸರಿಸದೆ ಮುನ್ನಡೆಯುವ ...ತೀಕರಣ ಬೇಕು" ಎಂದರು. ಈಗ ...ೀಕರಣ ಪ್ರಕ್ರಿಯೆ ತೀವ್ರ 'ನಂಬಿಕೆಯ ...ಗೆ' ಸಿಲುಕಿದೆ ಎಂದೂ ಅವರು ಹೇಳಿದರು. ...ರ್ಮಿಕರು ಮತ್ತು ಬಂಡವಾಳದ ನಡುವಿನ ...ನ್ಯ, ವಿದೇಶಿ ಬಂಡವಾಳ ಆಕರ್ಷಿಸುವ ...ದಲ್ಲಿ ಕಾರ್ಮಿಕರ ಪರಿಸ್ಥಿತಿಯನ್ನು ಪಾತಾಳಕ್ಕೆ ...ರುವ' ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಅವರು ...ರ ಪ್ರಸ್ತಾವದಲ್ಲಿ ಮಾತ್ರ ನಿರಾಶೆ ತಂದಿದ್ದಾರೆ. ...ಾಜಿಕ ಕಾಳಜಿಗಳ ಬಗ್ಗೆ ಸ್ಪಂದಿಸುವ, ...ಾಜಿಕವಾಗಿ ಹಲವು ವಿಭಾಗಗಳನ್ನು ...ಳ್ಳುವ ಜಾಗತೀಕರಣ' ಸಾಧ್ಯ ಎಂದಿದ್ದಾರೆ.

ಜಾಗತೀಕರಣದ ನೀತಿಗಳನ್ನು ಹಿಮ್ಮೆಟ್ಟಿಸಲು ಇದು ಒಂದೇ ಆಯುದ ಎಂದೂ ಸ್ಪಷ್ಟಪಡಿಸಿತು. ಐಎಲ್‌ಒ ಹೇಳುವ "ಸಾಮಾಜಿಕ ಮಾತುಕತೆ ಸಾಧ್ಯತೆ ಇಂತಹ ಹೋರಾಟದಿಂದ ಮಾತ್ರ ತೆಗೆದುಕೊಳ್ಳುತ್ತದೆ ಎಂದು ಹೇಳಿದೆ.

'ಕಾರ್ಮಿಕರ ಹೋರಾಟಗಳನ್ನು ಐಎಲ್‌ಒ ಬೆಂಬಲಿಸಬೇಕು'

ಕಾರ್ಮಿಕರ ಪ್ರತಿನಿಧಿಗಳು ಮಾತ್ರವಲ್ಲ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಮಾಬೇಕಿ ಸಹ ಬೆಳವಣಿಗೆಯ ಸಮಸ್ಯೆಗಳನ್ನು ಲಾಭದ ಮಹತ್ತರ ಹೆಚ್ಚಳದ ನೀತಿಯಿಂದ ಪರಿಹರಿಸಲು ಸಾಧ್ಯವಿಲ್ಲ ಎಂದು ಡೈರೆಕ್ಟರ್ ಜನರಲ್ ವರದಿಯ ಮೇಲಿನ ಚರ್ಚೆಯಲ್ಲಿ ಸ್ಪಷ್ಟವಾಗಿ ಹೇಳಿದರು. ರಷ್ಯಾದ

ನಾಲ್ಕು ಪ್ರಮುಖ ಕಲಾಪಗಳೆಂದರೆ

ಉದ್ಯೋಗದ ಸಂಬಂಧಗಳು/ ಕಂಟ್ರಾಕ್ಟ್‌ಗಳು

ಮಾನವ ಸಂಪನ್ಮೂಲ ಬೆಳವಣಿಗೆ ಮತ್ತು ತರಬೇತಿ

ಉದ್ಯೋಗ- ಸಂಬಂಧಿ ಆರೋಗ್ಯ ಮತ್ತು ಸುರಕ್ಷಿತತೆ

ಕಾರ್ಮಿಕ ಮಾನ ದಂಡಗಳ ಅನ್ವಯ

ಜಾಗತೀಕರಣದ ಪರಿಣಾಮವಾಗಿ ಶಾಶ್ವತ ಉದ್ಯೋಗ, ಉದ್ಯೋಗದ ಸಂಬಂಧವಾಗಿರುವ ಸವಲತ್ತುಗಳ ಮೇಲೆ ಆಗಿರುವ ಬದಲಾವಣೆಗಳನ್ನು ಗಮನಿಸಿ ಈ ಬಗ್ಗೆ ಐಎಲ್‌ಒ ಒಂದು ನೀತಿ ರೂಪಿಸುವಂತೆ ಉಪಸಮ್ಮೇಳನ ನಿರ್ಣಯಿಸಿತು. ಮಾಲಿಕರು ಇದನ್ನು ವಿರೋಧಿಸಿದ್ದರೂ ತೀವ್ರ ಚರ್ಚೆ ಮತ್ತು ಮತದಾನದ ನಂತರ ಈ ನಿರ್ಧಾರಕ್ಕೆ ಬರಲಾಯಿತು.

(ಇಂಟಕ್) ರವಿ ರಾಮನ್ (ಬಿಎಂಎಸ್), ಮಹಾದೇವನ್(ಎಐಟಿಯುಸಿ), ಹಿರಾಲಾಲ್ ಶರ್ಮಾ (ಇಂಟಕ್) ಮುಂತಾದವರು ಭಾಗವಹಿಸಿದ್ದ ಪ್ರಮುಖರು.

ಇರಾಕ್ ಮತ್ತು ಪ್ಯಾಲೆಸ್ಟೈನ್ ಮೇಲೆ ನಿರ್ಣಯ

ಪರಕೀಯ ಆಳ್ವಿಕೆಯಲ್ಲಿರುವ ಅರಬ್ ಪ್ರದೇಶ(ಮುಖ್ಯ ಪಾಲೆಸ್ಟೈನ್)ಗಳಲ್ಲಿರುವ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಸಮ್ಮೇಳನ ವಿಶೇಷ ಅಧಿವೇಶನದಲ್ಲಿ ಚರ್ಚಿಸಿತು. ಇದೇ ರೀತಿ ಇರಾಕ್‌ನ ಕಾರ್ಮಿಕರ ಸ್ಥಿತಿಗತಿಗಳ ಬಗೆಗೂ ಚರ್ಚಿಸಲಾಯಿತು.

ಕಾರ್ಮಿಕರ ವಿಭಾಗ ಇರಾಕ್‌ನಲ್ಲಿ ವಿದೇಶಿ ಅತಿಕ್ರಮಣ ಖಂಡಿಸಿ ನಿರ್ಣಯವೊಂದನ್ನು ತಾನು ಮಾಡಿತು. ಈ ಬಗ್ಗೆ ಐಎಲ್‌ಒ ಸಹ ಅಮೇರಿಕದ ಅತಿಕ್ರಮಣ ಖಂಡಿಸುವಂತೆ ಒತ್ತಾಯಿಸಿತು.

...ಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದ 8ನೇ ಮಹಾಧಿವೇಶನ

...ಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದ 8ನೇ ...ವೇಶನ ಇತ್ತೀಚೆಗೆ ಢಾಕ್ಕಾದಲ್ಲಿ ನಡೆಯಿತು. ...ದರ್ಭದಲ್ಲಿ ನಡೆದ ರ್‍ಯಾಲಿಯಲ್ಲಿ ಎಲ್ಲಾ ...ಗಳು ಮತ್ತು ಪ್ರಜಾಸತ್ತಾತ್ಮಕ / ಜಾತ್ಯಾತೀತ ...ಳ ನಾಯಕರು ಭಾಗವಹಿಸಿದ್ದು ...ವಾಗಿತ್ತು. ವಿಯೇಟ್ನಾಮ್ ಕಮ್ಯುನಿಸ್ಟ್ ...ಂತರಾಷ್ಟ್ರೀಯ ಸಂಬಂಧಗಳ ಸಮಿತಿಯ ...ಧ್ಯಕ್ಷ, ಸಿಪಿಐ(ಎಂ) ತ್ರಿಪುರಾ ರಾಜ್ಯ ...ಯೇಟ್ ಸದಸ್ಯ ಹಾಗೂ 'ದೀರೇಸ್ ಕಥಾ' ಸಂಪಾದಕ ಗೌತಮ ದಾಸ್ ಮತ್ತು ಸಿಪಿಐ ...ರ್ ಕೌನ್ಸಿಲ್ ಸದಸ್ಯ ಮಂಜು ಕುಮಾರ್ ...ರ್‌ದಾರ್ ಇವರುಗಳು ಭಾಗವಹಿಸಿದ್ದರು. ...ಚುನಾವಣೆಯಲ್ಲಿ ಮೂಲಭೂತವಾದಿ ...ಇಸ್ಲಾಮಿ ಮತ್ತು ಬಲಪಂಥೀಯ ...ದೇಶ ನ್ಯಾಷನಲ್ ಪಾರ್ಟಿಯ ಕೂಟ ...ಕ್ಕೆ ಬಂದು ದೇಶಕ್ಕೆ ಆಘಾತಕಾರಿಯಾಗಿ

ಪರಿಣಮಿಸಿದೆ. ಅದರ ವಿರುದ್ಧ ಎಡ ಮತ್ತು ಪ್ರಜಾಸತ್ತಾತ್ಮಕ/ ಜಾತ್ಯಾತೀತ ಪಕ್ಷಗಳ ಬರಲಿ ನಿರ್ಮಿಸುವುದು ಪ್ರಮುಖ ರಾಜಕೀಯ ಕರ್ತವ್ಯ ಎಂದು ಮಹಾಧಿವೇಶನದಲ್ಲಿ ಅಂಗೀಕರಿಸಲಾದ ರಾಜಕೀಯ ನಿರ್ಣಯ ಹೇಳಿದೆ. ಬಾಂಗ್ಲಾದೇಶ ವಿಮೋಚನಾ ಹೋರಾಟದಲ್ಲಿ ಜನ-ದ್ರೋಹಿ ಪಾತ್ರ ವಹಿಸಿದ ಪಾತಕಿಗಳು ಇಂದು ಅಧಿಕಾರದಲ್ಲಿರುವುದು ದೇಶದ ರಾಜಕೀಯವನ್ನು ಪಾತಾಳಕ್ಕೆ ತಳ್ಳಿದೆ. ಭೂರ್ಜ್ವ ಪಕ್ಷಗಳ ರಾಜಕೀಯದ ದಿವಾಳಿತನ, ಅಮೇರಿಕ ಮಿಲಿಟರಿ ನೆಲೆಗಳನ್ನು ಹೊಂದಿ ದೇಶದ ರಾಜಕೀಯ- ಆಂತರಿಕ ವ್ಯವಹಾರಗಳಲ್ಲಿ ನೇರ ಮಧ್ಯಪ್ರವೇಶ ಮಾಡುವ ಸಾಮರ್ಥ್ಯ ಹೊಂದಿರುವುದು ಇವೆಲ್ಲಾ ಪರಿಸ್ಥಿತಿಯನ್ನು ಇನ್ನಷ್ಟು ಆಸ್ಫೋಟಕಾರಿಯೂ ಮಾಡಿದೆ. ಜಾಮಾತ್ ವಿದೇಶಿ ಹಣ ಮತ್ತು ಶಸ್ತ್ರಗಳನ್ನು ಬಳಸಿ ಇಡೀ ದೇಶದಲ್ಲಿ ವಿಷಜಾಲ ಹರಡಿದೆ. ಇಸ್ಲಾಮ್‌ಗೆ ಹುಸಿ ಗೌರವ ಸಲ್ಲಿಸುತ್ತಾ, ಜಮಾತ್ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಯ ಸೇವೆ ಸಲ್ಲಿಸುತ್ತಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ದಾಳಿ ಮಾಡುತ್ತಿದೆ.

ಕಮ್ಯುನಿಸ್ಟ್ ಪಕ್ಷ ಅವಿಭಜಿತ ಭಾರತದ ಬಾಂಗ್ಲಾದೇಶದ ಪ್ರದೇಶದಲ್ಲಿ ಪ್ರಬಲವಾಗಿತ್ತು. ಆದರೆ ದೇಶದ ವಿಭಜನೆ ನಂತರ ಆಗಿನ ಪೂರ್ವ ಪಾಕಿಸ್ತಾನದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಗಿತ್ತು. ನಾಯಕರನ್ನು ಬಂಧಿಸಲಾಗಿತ್ತು ಇಲ್ಲವೆ ಅವರು ವರ್ಷಾನುಗಟ್ಟಲೆ ಭೂಗತವಾಗಿರಬೇಕಿತ್ತು. ಪೂರ್ವ ಪಾಕಿಸ್ತಾನದಲ್ಲಿ ಮೊದಲನೆ ಮಹಾಧಿವೇಶನವನ್ನು 1968 ರಲ್ಲಷ್ಟೇ ನಡೆಸಲು ಸಾಧ್ಯವಾಗಿತ್ತು. ಎರಡನೇ ಮಹಾಧಿವೇಶನವನ್ನು 1973 ರಲ್ಲಿ ಬಾಂಗ್ಲಾದೇಶದ ರಚನೆ ನಂತರ ಮಾತ್ರವೇ ನಡೆಸಲು ಸಾಧ್ಯವಾಗಿತ್ತು. ಉಳಿದ ಮಹಾಧಿವೇಶನಗಳು 1980,1986, 1991, 1995 ಮತ್ತು 1999 ರಲ್ಲಿ ನಡೆದವು.

ಬಾಂಗ್ಲಾದೇಶದ ಪರಿಸ್ಥಿತಿ- ಕಮ್ಯುನಿಸ್ಟ್ ಪಕ್ಷ ಕಂಡಂತೆ

73-74 ರಿಂದ 98-99 ರ ಅವಧಿಯಲ್ಲಿ ತಲಾ ಸಾಲದ ಹೊರೆ 18 ಪಟ್ಟು ಹೆಚ್ಚಿದೆ.

ಶೇಕಡಾ 6 ಬಾಂಗ್ಲಾದೇಶಿ ಜಮೀನುದಾರರು ದೇಶದ ಅರ್ಧದಷ್ಟು ಕೃಷಿಯೋಗ್ಯ ಜಮೀನಿನ ಒಡೆತನ ಹೊಂದಿದ್ದಾರೆ.

ದೇಶದ ಅರ್ಧದಷ್ಟು ಜನ ಬಡತನದ ರೇಖೆ ಕೆಳಗೆ ಇದ್ದಾರೆ.

ದೇಶದ ಕಾಲುಭಾಗ ಜನ ಅರ್ಧದಷ್ಟು ಸಂಪತ್ತನ್ನು ಹೊಂದಿದ್ದಾರೆ.

ಮಕ್ಕಳು ಮತ್ತು ಗರ್ಭಿಣಿ - ಹಾಲುಣಿಸುವ ಮಹಿಳೆಯರಲ್ಲಿ ಶೇಕಡಾ 70 ಜನ ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ಶೇಕಡಾ 60 ಬಾಂಗ್ಲಾದೇಶಿಗಳು ನಿರಕ್ಷರಿಗಳು


ಅಲ್ಪಸಂಖ್ಯಾತರ ಮೇಲೆ ದಾಳಿ, ಅಪರಾಧಗಳು ಕಳೆದ ಎರಡು ವರ್ಷಗಳಲ್ಲಿ ವಿಪರೀತವಾಗಿ ಹೆಚ್ಚಿದೆ.

ಹಿಂದೀ ಪ್ರಗತಿಪರ ಕಥಾ ಸಾಹಿತ್ಯದ 'ಭೀಷ್ಮ' ಇನ್ನಿಲ್ಲ

'ಚರಿತ್ರೆಯಿಂದ ಪಾಠ ಕಲಿಯದವರು, ಅದನ್ನು ಪುನರಾವರ್ತಿಸುವ ಶಿಕ್ಷೆಗೆ ಒಳಗಾಗುತ್ತಾರೆ' ಇದು 'ತಮಸ್' ಎಂಬ ಟಿವಿ ಧಾರಾವಾಹಿಯ ಆರಂಭದ ವಾಕ್ಯಗಳಾಗಿದ್ದವು. ಸಂಘಪರಿವಾರದ ಕೋಮು ಉದ್ರೇಕದ ಉನ್ಮಾದ ತಾರಕಾವಸ್ಥೆಯಲ್ಲಿರುವಾಗ ಸುದ್ದಿ ಮಾತ್ರವಲ್ಲ, ಅದನ್ನು ಎದುರಿಸುವಂತ ಅತ್ಯಂತ ಮಹತ್ವದ ಕೃತಿಯಾಗಿತ್ತು. ಅದರ ವಿರುದ್ಧ ಸಂಘ ಪರಿವಾರ ವಿಷ ಕಾರುತ್ತಿದ್ದು, ಅದನ್ನು ನಿಲ್ಲಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿ ವಿಫಲವಾಗಿದ್ದರು. ಅಷ್ಟು ಜನಮಾನಸದಲ್ಲಿ ಪರಿಣಾಮ ಬೀರಿದ ದೂರದರ್ಶನದ ಧಾರಾವಾಹಿ ಇನ್ನೊಂದಿಲ್ಲ ಅಂತ ಕಾಣುತ್ತದೆ.

ಆ ಧಾರಾವಾಹಿಯ ಹಿಂದಿದ್ದ ಕಾದಂಬರಿಯ ಲೇಖಕರೇ ಭೀಷಂ ಸಹಾನಿ. ಜುಲೈ 11 ರಂದು ತಮ್ಮ 88 ನೇ ವರ್ಷದ ಇಳಿ ವಯಸ್ಸಿನಲ್ಲಿ ತೀರಿಕೊಂಡ ಬೀಷಂ ಸಹಾನಿಯನ್ನು ಹಿಂದೀ ಪ್ರಗತಿಪರ ಕಥಾ ಸಾಹಿತ್ಯದ ಭೀಷ್ಮ ಪಿತಾಮಹ ಎಂದೇ ಗುರುತಿಸಲಾಗಿತ್ತು. ಕಥಾ ಸಾಹಿತ್ಯದಲ್ಲಿ ಮುಖ್ಯವಾಗಿ ಕೃಷಿ ಮಾಡಿದ್ದ ಬೀಷಂ ಸಹಾನಿ, ನಾಟಕದಲ್ಲೂ ಇತರ ಕ್ಷೇತ್ರಗಳಲ್ಲೂ ಸಾಕಷ್ಟು ಕೃಷಿ ಮಾಡಿದ್ದರು. ಹಿಂದೆ ಪ್ರಗತಿಪರ ಲೇಖಕರ ಸಂಘಟನೆಯ ದೀರ್ಘ ಕಾಲೀನ ಮಹಾ ಕಾರ್ಯದರ್ಶಿ, ಇಪ್ಟಾ (ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್) ರ ಜತೆ ಮತ್ತು ಇತ್ತೀಚೆಗೆ 'ಸಹಮತ್' ಎಂಬ ಕೋಮುವಾದಿ ವಿರೋಧಿ ಪ್ರಗತಿಪರ ವೇದಿಕೆಯ ಸ್ಥಾಪಕ ಅಧ್ಯಕ್ಷರಾಗಿ ಸಾಮಾಜಿಕ - ಸಮಾನತೆಗೆ ಹೋರಾಡಿದ ಚೇತನ ಕೂಡಾ. ತಮ್ಮ ಇಳಿವಯಸ್ಸಿನಲ್ಲೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿದ್ದ ಬೀಷಂರವರ ಕೊನೆಯದಾಗಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು, 'ಮಿ ಮತ್ತು ಮಿಸೆಸ್ ಐಯ್ಯರ್' ಎಂಬ ಅಪರ್ಣಾ ಸೇನ್‌ರ ಫಿಲಂ ನ ಒಂದು ಗಮನಾರ್ಹ ಪಾತ್ರದಲ್ಲಿ (ಕೋಮು ಗಲಭೆಗಳಲ್ಲಿ ಸಿಕ್ಕಿಬೀಳುವ ಒಂದು ಹಿರಿಯ ಮುಸ್ಲಿಂ ದಂಪತಿಯ ಪಾತ್ರ) ಭೀಷಂ ಸಹಾನಿ ಕಾಣಿಸಿಕೊಂಡಿದ್ದರು. ಸ್ವಾತಂತ್ರ್ಯ ಹೋರಾಟಗಾರನಾಗಿ ಸಾರ್ವಜನಿಕ ಜೀವನ ಪ್ರವೇಶಿಸಿದ ಅವರು ಕಮ್ಯುನಿಸ್ಟರಾಗಿ, ಕೊನೆಯವರೆಗೂ ಸಾಮಾಜಿಕ -ಆರ್ಥಿಕ- ಸಮಾನತೆಯ ಸಮಾಜ ನಿರ್ಮಾಣದ ಅಂತಿಮ ಗುರಿಗೆ ನಿಷ್ಠರಾಗಿದ್ದರು. ಸಮ್ಮೇಳನ- ಸೆಮಿನಾರು ಪ್ರದರ್ಶನಗಳಲ್ಲಿ ಪ್ರಗತಿಪರ ಉದ್ದೇಶಗಳಿಗಾಗಿ ತಮ್ಮ ದನಿ ಎತ್ತುತ್ತಿದ್ದರು.

1915 ರಲ್ಲಿ ರಾವಲ್ಪಿಂಡಿಯಲ್ಲಿ ಜನಿಸಿದ ಭೀಷಂ ಪ್ರಸಿದ್ಧ ಹಿಂದಿ ಸಿನೇಮಾ ನಟ ಬಲರಾಜ್ ಸಾಹನಿ (ಅವರು ಇಪ್ಪಾದಲ್ಲಿ ಸಕ್ರಿಯವಾಗಿದ್ದವರು) ಯವರ ತಮ್ಮ 1942 ರಲ್ಲಿ ಕ್ವಿಟ್ ಇಂಡಿಯಾದಲ್ಲಿ ಭಾಗವಹಿಸಿ ಜೈಲಿಗೂ ಹೋಗಿದ್ದರು. ಆಮೇಲೆ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯೂ ಆಗಿದ್ದರು. ಲಾಹೋರ್‌ನಲ್ಲಿ ಇಂಗ್ಲಿಷಿನಲ್ಲಿ ಎಂ.ಎ.ಮಾಡಿ ಅವರು ಅಧ್ಯಾಪಕ ವೃತ್ತಿ ಆರಂಭಿಸಿದ್ದರು. ಆದರೆ ದೇಶದ ವಿಭಜನೆ ಅವರ ಜೀವನ ಪ್ರಯಾಣಕ್ಕೆ ಅಡೆ ತಡೆ ಒಡ್ಡಿತು. ದೇಶದ ವಿಭಜನೆಯ ದುರಂತವನ್ನು ಅದರ ಎಲ್ಲಾ ಸಂಕೀರ್ಣ ಆಯಾಮಗಳ ಜತೆ ಸಾಹಿತ್ಯದಲ್ಲಿ ಅಮರ ಮಾಡಿದ ಹೆಗ್ಗಳಿಕೆ ಭೀಷಂ ರವರದ್ದು. ಕಾದಂಬರಿ 'ತಮಸ್' ಮತ್ತು 'ಅಮೃತ್‌ಸರ್ ಆ ಗಯಾ' ಎಂಬ ಕಥೆ ಹಿಂದೀ ಕಥಾಸಾಹಿತ್ಯದಲ್ಲಿ ಮಾತ್ರವಲ್ಲ ದೇಶದ ಸಾಹಿತ್ಯದಲ್ಲೇ ಒಂದು ಮೈಲಿಗಲ್ಲುಗಳು 'ತಮಸ್' ಕಾದಂಬರಿ ವಿಭಜನೆಯ 25 ವರ್ಷಗಳ ನಂತರ ಪ್ರಕಟವಾಗಿ ಅತ್ಯಂತ ಮಹತ್ವದ ಎನ್ನಿಸಿಕೊಂಡಿತು. 1978 ರಲ್ಲಿ 'ತಮ... ಗಾಗಿಯೇ ಸಾಹನಿಯವರಿಗೆ ಸಾಹಿತ್ಯ ಅಕಾ... ಪ್ರಶಸ್ತಿ ಸಿಕ್ಕಿತು.



ಭೀಷ್ಮ ಸಹಾನಿ ನಿಧನ(1915-2003)

ಭೀಷಂ ಸಾಹನಿ ಆರು ಕಾದಂಬ... ಹಾಗೂ ನೂರಕ್ಕೂ ಹೆಚ್ಚು ಕಥೆಗಳ ಒಂಬತ್ತು... ಸಂಕಲನಗಳ ಮೂಲಕ ಹಿಂದಿ ಕಥಾ ಸಾಹಿ... ಶ್ರೀಮಂತಗೊಳಿಸಿದ್ದರು. ಸಾಮ್ರಾಜ್ಯ... ವಿರೋಧಿ ಹೋರಾಟದ ಯುಗದಲ್ಲಿ ಸಾಹಿ... ಪ್ರವೇಶಿಸಿದ ಭೀಷಂರವರಿಗೆ ಕೊನೆಯ... ಸಾಮಾಜಿಕ ಆರ್ಥಿಕ ಸಮಾನತೆ ... ಸಮಾಜದ ನಿರ್ಮಾಣ ಮುಖ್ಯ ಸಾ... ಕಾಳಜಿಯೂ ಆಗಿತ್ತು.

ತಮಸ್ ಅಲ್ಲದೆ 'ಮಯ್ಯಾದಾಸ್ ಕೀ ... ಮತ್ತು 'ನೀಲು, ನೀಲಿಮಾ, ನಿಲೋ... (2000) ಇತರ ಮಹತ್ವದ ಕಾದಂಬ... ಇದಲ್ಲದೆ ಆರು ಪ್ರಮುಖ ನಾಟಕ... ಬರೆದರು. ಅವರು ಹಲವು ಹಿಂದೀ ... ಫಿಲಂಗಳಲ್ಲಿ ನಟನೆ ಸಹ ಮಾಡಿದ್ದಾರೆ. '... ಬಡಾ ಬಾಜಾರ್ ಮೇ' ಅವರ ... ನಾಟಕಗಳಲ್ಲಿ ಒಂದು. ಅದಲ್ಲದೆ ಮಕ್ಕಳ ಸಾ... ವ್ಯಕ್ತಿಪರಿಚಯ (ಬಲರಾಜ್ ಸಾಳುವಂತ... ಮತ್ತು ರಷ್ಯನ್ ಮುಂತಾದ ಅಂತರಾ... ಭಾಷೆಗಳಿಂದ ಅನುವಾದ ಸಾಹಿತ್ಯದಲ್ಲೂ ... ಹುಲುಸಾಗಿ ಕೃಷಿ ಮಾಡಿದ್ದರು. ಕೆಲವೇ... ಹಿಂದೆ ಪ್ರಕಟಗೊಂಡಿದ್ದ ಅವರ ಆತ್ಮಕಥೆ... ಕೆ ಅತೀತ್ (ವರ್ತಮಾನದ ಭೂತ್) ... ಕೊನೆಯ ಕೃತಿ ಎನ್ನಬಹುದು. '... ಸೇರಿದಂತೆ ಅವರ ಹಲವು ಕೃತಿಗಳು ... ಅನುಮಾನಿತವಾಗಿವೆ.

ಭೀಷಂ ಸಾಹನಿಯವರ ನಿಧನದಿಂ... ಇಂಡಿಯಾದ ಪ್ರಗತಿಪರ ಸಾಹಿತ್ಯದ ... ಪಿತಾಮಹ' ನನ್ನು ಕಳೆದುಕೊಂಡಂತಾಗಿ...

ವೈದ್ಯ-ವಿಜ್ಞಾನ

ಔಷಧಿ ಕ್ಷೇತ್ರದ ಇಣುಕು ನೋಟ

ಜನಾರೋಗ್ಯ ಸುಧಾರಣೆಯಲ್ಲಿ ಔಷಧಿಗಳು ಪ್ರಮುಖ ಪಾತ್ರವಹಿಸುತ್ತಿವೆ. ಭಾರತದಲ್ಲಿ ಔಷಧಿ ಉದ್ಯಮ ಸಾಕಷ್ಟು ಪ್ರಗತಿ ಹೊಂದಿದೆ ಎಂಬ ಮಾತಿದೆ. ಆದರೆ ಜನರಿಗೆ ಅಗತ್ಯವಿರುವ ಎಲ್ಲ ಔಷಧಿಗಳು, ಕೊಂಡುಕೊಳ್ಳಲು ಸಾಧ್ಯವಾಗುವ ಬೆಲೆಯಲ್ಲಿ ದೊರಕುತ್ತಿವೆಯೇ ಎಂಬುದು ಮುಖ್ಯಪ್ರಶ್ನೆ. (ಈ ಅಂಕಣದಲ್ಲಿ ಜನಾರೋಗ್ಯದ ಹಿನ್ನೆಲೆಯಲ್ಲಿ ಆರೋಗ್ಯ ಹಾಗೂ ಔಷಧಿ ಉದ್ಯಮಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಚರ್ಚಿಸಲಾಗುವುದು.)

ಭಾರತದಲ್ಲಿ ಔಷಧಿ ಉದ್ಯಮ 1920 ರಲ್ಲಿಯೇ ಪ್ರಾರಂಭವಾದರೂ, ಅದರ ಹಿಡಿತ ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿಯೇ ಇದ್ದಿತು. ಇದರಿಂದಾಗಿ ನಮಗೆ ಅಗತ್ಯವಾದ ಔಷಧಿಗಳು ದೊರಕುತ್ತಿರಲಿಲ್ಲ ಹಾಗೂ ಔಷಧಿಗಳು ದುಬಾರಿಯಾಗಿದ್ದವು. ಭಾರತಸರಕಾರ ಔಷಧಿ ಕ್ಷೇತ್ರದ ಸ್ವಾವಲಂಬನೆಯತ್ತ ಸಾಗಲು, ಉದ್ಯಮವನ್ನು ಸ್ಥಾಪಿಸಿತು ಹಾಗೂ ಭಾರತೀಯ ಪೇಟೆಂಟ್ ಕಾನೂನು 1970 ನ್ನು ಜಾರಿಗೊಳಿಸಿತು. ಇದರಿಂದಾಗಿ ಭಾರತದ ಔಷಧಿ ಉದ್ಯಮದಲ್ಲಿ ಪ್ರಗತಿ ಕಂಡುಬಂದಿತು, ಇದರ ಪರಿಣಾಮವಾಗಿ ಔಷಧಿ ಬೆಲೆಗಳು ಕಡಿಮೆಯಾದವು, ಭಾರತವು ಅಗತ್ಯ ಔಷಧಿಗಳನ್ನು ತಯಾರಿಸುವಂತಾಯಿತು ಹಾಗೂ ರಫ್ತು ಮಾಡುವಂತಾಯಿತು. ಈ ವಿಷಯಗಳ ಹಾತೀ ವರದಿ ಪ್ರಸ್ತಾಪಿಸಿದೆ, ಹಾಗೂ ಭಾರತದ ಔಷಧಿ ಉದ್ಯಮವನ್ನು ಸ್ವಾವಲಂಬನೆಯತ್ತ ಕೊಂಡೊಯ್ಯಲು ಇನ್ನೂ ಅನೇಕ ಸಲಹೆಗಳನ್ನು ಕೊಟ್ಟಿತು. ಅದರೆ ಜಾಗತೀಕರಣ ನೀತಿ ಪ್ರಬಲವಾಗಿದ್ದರಿಂದ ನಂತರದ ಬೆಳವಣಿಗೆ ಭಾರತಕ್ಕೆ ಮಾರಕವಾಗಿ ಪರಿಣಮಿಸಿದೆ. 86,94 ಮತ್ತು 02 ರ ಔಷಧಿ ನೀತಿಗಳು ಜನಪರವಾಗದೇ ಉದ್ಯಮ ಪರವಾಗಿ, ಬಹುರಾಷ್ಟ್ರೀಯ ಕಂಪನಿಗಳನ್ನು ಪ್ರೋತ್ಸಾಹಿಸಿದವು. ಈಗ ನಾವು ಟ್ರಿಪ್ಸ್ ಒಪ್ಪಂದವನ್ನು ಒಪ್ಪಿಕೊಂಡಿದ್ದರಿಂದ 2005 ರಿಂದ ಅದು ಜಾರಿಗೆ ಬರಲಿದೆ. ಇದರ ಪರಿಣಾಮ ಕೇವಲ ಕೆಡಕು.

ಇಂದಿನ ಔಷಧಿ ಪಾಲಿಸಿ

ಜನಪರ ಔಷಧಿ ನೀತಿ, ಆರೋಗ್ಯ ನೀತಿ ಇಲ್ಲದಿರುವುದು

ಔಷಧಿ ಬೆಲೆಗಳು ಹೆಚ್ಚುತ್ತಿವೆ.

ಅಗತ್ಯ ಔಷಧಿಗಳ ಅಭಾವ

ಅನಗತ್ಯ ಔಷಧಿಯ ಹಾವಳಿ ಈ ಎಲ್ಲ ಬದಲಾವಣೆಗಳು ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೂ ಪರಿಣಾಮ ಬೀರುತ್ತಿದೆ.

ಥಂಗನೆ ಹಿಂದೆ ಜಿಗಿತ !

ಮಾನವ ಬೆಳವಣಿಗೆ ಸೂಚ್ಯಾಂಕ (Human Development Index) ದೀರ್ಘ, ಆರೋಗ್ಯಕರ ಜೀವನ, ಜ್ಞಾನ, ಹಾಗೂ ತೃಪ್ತಿಕರ ಜೀವನ ಶೈಲಿಯ ಸರಾಸರಿಯನ್ನಾಧರಿಸಿ ಒಂದು ಸೂಚ್ಯಾಂಕ. ಪ್ರತೀದೇಶದ ಸೂಚ್ಯಾಂಕವನ್ನು ಆಧರಿಸಿ ಒಂದು ಪಟ್ಟಿಮಾಡಿರುತ್ತಾರೆ. ಆ ಪಟ್ಟಿಯಲ್ಲಿ ದೇಶದ ಶ್ರೇಣಿಯನ್ನು ತಿಳಿದು ಆದೇಶದ ಬೆಳವಣಿಗೆಯನ್ನು ಅರಿಯಬಹುದಾಗಿದೆ.

2001ರ ಮಾನವ ಬೆಳವಣಿಗೆ ಸೂಚ್ಯಾಂಕ 162 ದೇಶಗಳ ಅಧ್ಯಯನವನ್ನು ಆಧರಿಸಿದೆ. ವಿಶ್ವಸಂಸ್ಥೆಯ ಸದಸ್ಯದೇಶಗಳು ಹಾಗೂ ಸದಸ್ಯರಲ್ಲದ ಎರಡು ದೇಶಗಳಾದ ಸ್ವಿಟ್ ಝರ್‌ಲ್ಯಾಂಡ್, ಹಾಂಕಾಂಗ್‌ನ ಅಧ್ಯಯನವನ್ನು ಆಧರಿಸಿದೆ. ಈ ಸೂಚ್ಯಾಂಕ ವಿಶ್ವಸಂಸ್ಥೆಯ 29 ಸದಸ್ಯ ದೇಶಗಳ ಅಧ್ಯಯನವನ್ನು ಸೇರಿಸಿಲ್ಲ. ಕಾರಣ ಮಾಹಿತಿ ದೊರಕದೇ ಇರುವುದರಿಂದ ಈ ಅಧ್ಯಯನ ಪಟ್ಟಿಯಲ್ಲಿ ಭಾರತ 115ನೇ ಸ್ಥಾನವನ್ನು ಪಡೆದಿದೆ. ಮೆಕ್ಸಿಕೋ(51), ಮಲೇಶಿಯಾ(65) ವೆನೆಝುವೆಲಾ (61) ಕೊಲಂಬಿಯಾ(62), ವಿಯಟ್ನಾಂ (101) ಇಂಡೋನೇಶಿಯಾ (102) ಮುಂತಾದ ರಾಷ್ಟ್ರ... ಭಾರತ ಹಿಂದಿದೆ. ಭಾರತ, ಪಾಕಿಸ್ತಾನ (127) ಬಾಂಗ್ಲಾದೇಶ (132)ದ ಸೂಚ್ಯಾಂಕ ... ತೃಪ್ತಿಪಡಬಹುದಾಗಿದೆ.

1975ರಲ್ಲಿ ನಾವು 77ನೇ ಸ್ಥಾನದಲ್ಲಿದ್ದು... ಹೊತ್ತಿಗೆ 115 ಸ್ಥಾನಕ್ಕೆ ಇಳಿದ್ದೇವೆ ಎ... ವಿಷಾದಕರ. ಈ ಸೂಚ್ಯಾಂಕ ತಯಾರಿಕೆಗೆ ಆಧಾ... ಕೆಲವು ಆರೋಗ್ಯ ಸಾಧನೆಗಳನ್ನು ಪರಿಶೀಲಿ... ಹುಟ್ಟಿದ ಸಮಯ ಕಡಿಮೆತೂಕದ ಮಕ್ಕಳ ... ಭಾರತ 162ನೇ ಸ್ಥಾನವನ್ನು ಪಡೆದಿದೆ. ಅಂದ... ಕೊನೇಸ್ಥಾನ ಬೇರೆಲ್ಲ ದೇಶಗಳಲ್ಲಿ ಹುಟ್ಟಿದ ... ಕಡಿಮೆ ತೂಕದ ಮಕ್ಕಳ ಸಂಖ್ಯೆ ಕಡಿಮೆ ಇ...

5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕ... ತೂಕದ ಪರಿಸ್ಥಿತಿಗೆ ಭಾರತಕ್ಕೆ 161ನೇ ಸ್ಥಾನದ...

ಈ ಸೂಚ್ಯಾಂಕದ ಪಟ್ಟಿಯಲ್ಲಿ ಭಾರತ ... ಸ್ಥಾನದಿಂದ ಕೆಳಗಿಳಿದಿಲ್ಲ.

ಭಾರತ ಈ ಪರಿಸ್ಥಿತಿಯಲ್ಲಿರಲು ರಾಜಕಾ... ಅಥವಾ ಅಧಿಕಾರಿಗಳು ಉತ್ತರ ಕೊಡಬಲ್ಲ...

ಡಾ। ಪ್ರಕಾಶ್ ಸಿ...

ಹುಟ್ಟಿದಾಗ ಆಯುಸ್ಸಿನ ಅಂದಾಜು ವರ್ಷಗಳಲ್ಲಿ	62.9	10
ಅಪೌಷ್ಟಿಕತೆಗೆ ಒಳಗಾದವರು (ಜನಸಂಖ್ಯೆಯ ಶೇಕಡಾ)	21.0	11
5 ವರ್ಷಕ್ಕಿಂತ ಕಡಿಮೆವರ್ಷದ ಮಕ್ಕಳಲ್ಲಿ ಕಡಿಮೆ ತೂಕ	53	16
ಕಡಿಮೆ ಎತ್ತರದ ಐದು ವರ್ಷಕ್ಕಿಂತ ಕಡಿಮೆವಯಸ್ಸಿನ ಮಕ್ಕಳು	52	15
ಕಡಿಮೆ ತೂಕದ ಹುಟ್ಟಿದ ಮಕ್ಕಳು	33	16
ಶಿಶುಮರಣ ಸಂಖ್ಯೆ (1000 ಜೀವಂತ ಹುಟ್ಟುಗಳಲ್ಲಿ)	70	12
5 ವರ್ಷಕ್ಕಿಂತ ಕಡಿಮೆ ಮಕ್ಕಳ ಮರಣ 1000 ಜೀವಂತ ಹುಟ್ಟುಗಳಲ್ಲಿ	98	11
ಮಾತ್ರ (ತಾಯಂದಿರು) ಮರಣ ಸಂಖ್ಯೆ (100000 ಜೀವಂತ ಹುಟ್ಟುಗಳಲ್ಲಿ)	410	13
ಅಗತ್ಯ ಔಷಧಿ ದೊರಕುವ ಜನಸಂಖ್ಯೆ (ಶೇಕಡಾ)	35	15

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH